ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 33 ಆಗಸ್ಟ್ 10-16, 1998 ರೂ. 2.00

ಎಲ್ಲಾ ಓದುಗರಿಗೂ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳು

ತೀವ್ರ ಬೆಲೆಯೇರಿಕೆ ವಿರುದ್ಧ ಬೃಹತ್ ಚಳುವಳಿ

ಸೆಪ್ಟೆಂಬರ್ 16ರಂದು ದಿಲ್ಲಿಯಲ್ಲಿ ಸಿ.ಪಿ.ಐ.(ಎಂ) ರ‍್ಯಾಲಿ

ಸೆಪ್ಟೆಂಬರ್ 16, 1998ರಂದು ದಿಲ್ಲಿಯಲ್ಲಿ ಒಂದು ಅಖಿಲ ಭಾರತ ಪ್ರತಿಭಟನಾ ರ‍್ಯಾಲಿ ನಡೆಸಲು ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ನಿರ್ಧರಿಸಿದೆ. ತೀವ್ರ ಬೆಲೆಯೇರಿಕೆ ಹಾಗೂ ಕೇಂದ್ರದಲ್ಲಿ ವಾಜಪೇಯಿ ಸರಕಾರ ದಿಂದಾಗಿ ಆರ್.ಎಸ್.ಎಸ್-ಬಿ.ಜೆ.ಪಿ. ಕೂಟ ಒಡ್ಡಿರುವ ಬೆದರಿಕೆಗೆ ಜನಗಳ ವಿರೋಧಕ್ಕೆ ದನಿ ನೀಡಲು ಈ ರ‍್ಯಾಲಿ ನಡೆಸಲಾಗುತ್ತಿದೆ. ಆಗಸ್ಟ್ 1 ಹಾಗೂ 2ರಂದು ಸಭೆ ಸೇರಿದ ಪೊಲಿಟ್‌ಬ್ಯೂರೋ ಈ ಕರೆ ನೀಡಿದೆ.

ಆಗಸ್ಟ್ 15ರಿಂದ ಈ ರ‍್ಯಾಲಿಗೆ ಸಿದ್ಧತೆಯಾಗಿ ಒಂದು ತಿಂಗಳ ಪ್ರಚಾರಾಂದೋಲನ ನಡೆಯಲಿದೆ. ದೇಶದ, ಜನರ ಮುಂದಿರುವ ಪ್ರಶ್ನೆಗಳನ್ನು ಜನಗಳಿಗೆ ವಿವರಿಸಲು ಎಲ್ಲಾ ರಾಜ್ಯಗಳಲ್ಲಿ ಜಾಥಾಗಳನ್ನು ನಡೆಸಲಾಗುವುದು ಹಾಗೂ ಬೆಲೆಯೇರಿಕೆ ತಡೆಯಲು, ಕಳ್ಳದಾಸ್ತಾನನ್ನು ತಡೆಯಲು, ರೇಶನ್ ವ್ಯವಸ್ಥೆಯನ್ನು ಬಲಪಡಿಸಲು ಹಾಗೂ ಕೋಮುವಾದಿ ಶಕ್ತಿಗಳ ಚಟುವಟಿಕೆಗಳನ್ನು ತಡೆಯಲು ತಕ್ಷಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿ ಜನಗಳನ್ನು ಅಣಿನೆರೆಸಲಾಗುವುದು.

ಜೈನ್ ಆಯೋಗದ ವರದಿ ಆಪಾದನೆ ಸುಳ್ಳೆಂದು ದೃಢಪಟ್ಟಿತು.

ಸಂಸತ್ತಿನಲ್ಲಿ ಮಂಡಿಸಿದ ಜೈನ್ ಆಯೋಗದ ಅಂತಿಮ ವರದಿ ಯಾವುದು ಸ್ವಯಂವೇದ್ಯವೆನಿಸಿತ್ತೋ ಅದನ್ನು ದೃಢಪಡಿಸಿದೆ. ರಾಜೀವ್‌ಗಾಂಧಿ ಹತ್ಯೆಯಲ್ಲಿ ಡಿ.ಎಂ.ಕೆ. ಸರಕಾರದ ಪರೋಕ್ಷ ಶಾಮೀಲಿನ ಆಪಾದನೆ ಬುಡವಿಲ್ಲದ್ದೆಂದು ದೃಢಪಟ್ಟಿದೆ. ಇಂತಹ ಆಧಾರ ರಹಿತ ಆಪಾದನೆಯ ಮೇಲೆ ಸಂಯುಕ್ತ ರಂಗ ಸರಕಾರವನ್ನು ಅಸ್ಥಿರಗೊಳಿಸಲಾಗಿತ್ತು. ಅಂತಿಮ ವರದಿಯಲ್ಲಿ ಮುಖ್ಯಮಂತ್ರಿ ಕರುಣಾನಿಧಿ ಅಥವಾ ಡಿ.ಎಂ.ಕೆ. ಸರಕಾರದ ಶಾಮೀಲನ್ನು ಸಾಬೀತು ಮಾಡುವ ಅಥವಾ ದೃಢಪಡಿಸುವ ಯಾವುದೇ ಸಂಗತಿಯಿಲ್ಲ ಎಂದು ಪೊಲಿಟ್‌ಬ್ಯೂರೋ ಅಭಿಪ್ರಾಯಪಟ್ಟಿದೆ.

ವಾಜಪೇಯಿ ಸರಕಾರದ ಕಾರ್ಯ ವರದಿ ಈ ವರದಿಯ ಕೆಲವು ಆರಿಸಿದ ಅಂಶಗಳನ್ನು ಮಾತ್ರ ತಮ್ಮ ರಾಜಕೀಯ ಉದ್ದೇಶದಿಂದ ಬಳಸಿಕೊಂಡಿದೆ. ಇನ್ನಷ್ಟು ತನಿಖೆ ಮಾಡಬೇಕಾದ ಜೈನ್ ವರದಿಯ ಒಂದು ಅಂಶವೆಂದರೆ ರಾಜೀವ್ ಗಾಂಧಿ ಹತ್ಯೆಯಲ್ಲಿ ವಿದೇಶಿ ಏಜೆನ್ಸಿಗಳ ಮತ್ತು ಅವುಗಳೊಂದಿಗೆ ಸಂಪರ್ಕವಿರುವ ವ್ಯಕ್ತಿಗಳ ಪಾತ್ರ. ಇದು ದೇಶದ ಸಾರ್ವಭೌಮತೆ ಮತ್ತು ಸಮಗ್ರತೆಗೆ ಸಂಬಂಧಪಟ್ಟಿದ್ದರಿಂದ ಇದನ್ನು ಉಪೇಕ್ಷಿಸಲಾಗದು ಎಂದು ಪೊಲಿಟ್‌ಬ್ಯೂರೋ ಹೇಳಿದೆ.

ಧರ್ಮದ ಆಧಾರದಲ್ಲಿ ನಾಗರೀಕರಿಗೆ ಕಿರುಕುಳ ಸಲ್ಲ

ಶಿವಸೇನೆ-ಬಿ.ಜೆ.ಪಿ. ಸರಕಾರ ಮುಂಬೈಯಲ್ಲಿ ವಾಸಿಸುವ ಬಂಗಾಳೀ ಭಾಷಿಕ ಭಾರತೀಯ ನಾಗರೀಕರನ್ನು 'ಬಾಂಗ್ಲಾದೇಶಿ ಅತಿಕ್ರಮಣಕಾರರು' ಎಂದು ಗುರಿಯಿಟ್ಟಿರುವುದನ್ನು ಪೊಲಿಟ್‌ಬ್ಯೂರೋ ಖಂಡಿಸಿದೆ. ಈ ನೆಪವೊಡ್ಡಿ ಹಲವು ನೈಜ ಭಾರತೀಯ ನಾಗರೀಕರನ್ನು ಬಂಧಿಸಿ ಬಾಂಗ್ಲಾ ದೇಶಕ್ಕೆ ಕಳಿಸಲು ಪಶ್ಚಿಮ ಬಂಗಾಳದ ಮೂಲಕ ಒಯ್ಯಲಾಗಿದೆ. ಈ ಬಗ್ಗೆ ಪಶ್ಚಿಮ ಬಂಗಾಳ ಸರಕಾರಕ್ಕೆ ಮಾಹಿತಿಯನ್ನೂ ನೀಡಲಾಗಿಲ್ಲ. ಮಹಾರಾಷ್ಟ್ರದಿಂದ ಪೋಲಿಸ್ ಪಹರೆಯಲ್ಲಿ ಕಳಿಸಿದ ಇಂತಹ ತಂಡಗಳಲ್ಲಿ ಹಲವಾರು ಪಶ್ಚಿಮ ಬಂಗಾಳದ ನಿವಾಸಿಗಳೆಂದು ಕಂಡು ಬಂತು. ಪಶ್ಚಿಮಬಂಗಾಳದ ಹೊರಗೆ ವಾಸಿಸುವ ಪ್ರತಿಯೊಬ್ಬ ಮುಸ್ಲಿಂ ಬಂಗಾಳಿ ಭಾಷಿಕರನ್ನು 'ಬಾಂಗ್ಲಾ ದೇಶೀ' ಎನ್ನುವುದು ಆರ್.ಎಸ್.ಎಸ್. ಸಂಘಟನೆಗಳ ಎಂದಿನ ತಂತ್ರ. ಇಂತಹ ಕೋಮುವಾದಿ ನಿಲುವನ್ನು ಎಲ್ಲಾ ಜಾತ್ಯಾತೀತ ಭಾವನೆಯ ನಾಗರೀಕರು ವಿರೋಧಿಸಬೇಕು ಎಂದು ಪೊಲಿಟ್‌ಬ್ಯೂರೋ ಹೇಳಿದೆ. ಕೇಂದ್ರ ಸರಕಾರ ಮಧ್ಯ ಪ್ರವೇಶಿಸಿ ಮಹಾರಾಷ್ಟ್ರ ಮತ್ತು ಬೇರೆ ರಾಜ್ಯಗಳಲ್ಲಿ ಕಾನೂನು ಬಾಹಿರ ವಲಸೆಗಾರರನ್ನು ಗುರುತಿಸುವ ಕೆಲಸವನ್ನು ಕಟ್ಟುನಿಟ್ಟಾಗಿ ಕಾನೂನಿನ ಪ್ರಕ್ರಿಯೆಗೆ ಬದ್ಧವಾಗಿ ನಡೆಸಬೇಕು. ಧರ್ಮದ ಆಧಾರದ ಮೇಲೆ ಯಾವುದೇ ಭಾರತೀಯ ನಾಗರೀಕನಿಗೆ ಕಿರುಕುಳ ನೀಡಬಾರದು ಎಂದು ಪೊಲಿಟ್‌ಬ್ಯೂರೋ ಆಗ್ರಹಪಡಿಸಿದೆ.

ಗೋವಾ ರಾಜ್ಯಪಾಲರ ಸಂವಿಧಾನ ಬಾಹಿರ ಕ್ರಮ

ಗೋವಾದ ರಾಣೆ ನೇತೃತ್ವದ ರಾಜ್ಯ ಸರಕಾರವನ್ನು ವಜಾ ಮಾಡುವ ರಾಜ್ಯಪಾಲರ ಕ್ರಮ ಸಂಪೂರ್ಣವಾಗಿ ಸಂವಿಧಾನ ಬಾಹಿರ, ಸಂಕುಚಿತ ರಾಜಕೀಯ ಉದ್ದೇಶಗಳಿಂದಾಗಿ ಹೀಗೆ ಮಾಡಲಾಗಿದೆ ಎಂದು ಪೊಲಿಟ್ ಬ್ಯೂರೋ ಅಭಿಪ್ರಾಯ ಪಟ್ಟಿದೆ. ಆಳುವ ಪಕ್ಷದಲ್ಲಿ ವಿಭಜನೆ ಬಂದಾಗ ವಿಧಾನ ಸಭೆಯ ಕಲಾಪಗಳನ್ನು ಉಪೇಕ್ಷಿಸಿ ಒಂದು ಪರ್ಯಾಯ ಸರಕಾರವನ್ನು ಪ್ರತಿಷ್ಠಾಪಿಸುವ ಉಸಾಬರಿ ರಾಜ್ಯಪಾಲರದ್ದಲ್ಲ. ಕೇಂದ್ರದ ಬಿ.ಜೆಪಿ. ಸರಕಾರ ತಾನು ನೇಮಕ ಮಾಡಿದ ರಾಜ್ಯಪಾಲರ ಮೂಲಕ ಒಕ್ಕೂಟ ತತ್ವದ ಮೇಲೆ ನಗ್ನ ಪ್ರಹಾರ ಮಾಡಿದೆ ಎಂದು ಪೊಲಿಟ್‌ಬ್ಯೂರೋ ಟೀಕಿಸಿದೆ.

ಕೇರಳ ಪಕ್ಷದಲ್ಲಿ ಸೈದ್ಧಾಂತಿಕ ಭಿನ್ನಾಭಿಪ್ರಾಯ ಇಲ್ಲ

ಪೊಲಿಟ್ ಬ್ಯೂರೋ ಪಕ್ಷದ ಕೇರಳ ಘಟಕದ ಸಂಗತಿಗಳ ಬಗ್ಗೆ ಕೇರಳದ ಕೇಂದ್ರ ಸಮಿತಿ ಸದಸ್ಯರೊಂದಿಗೆ ಸಭೆಯ ನಂತರ ಚರ್ಚಿಸಿತು. ಕೇರಳ ಘಟಕದಲ್ಲಿ ಮೂಲಭೂತ ರಾಜಕೀಯ-ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿಲ್ಲ ಎಂಬ ತೀರ್ಮಾನಕ್ಕೆ ಬಂದ ಪೊಲಿಟ್ ಬ್ಯೂರೋ, ಆದರೆ, ಒಂದು ಸಂಘಟನಾ ಸ್ವರೂಪದ ಸಮಸ್ಯೆಗಳಿವೆ ಎಂದು ಅವನ್ನು ಎದುರಿಸಲು ಕೆಲವು ಮೂರ್ತ ಕ್ರಮಗಳನ್ನು ಕೈಗೊಳ್ಳಲು ನಿರಾಕರಿಸಿದೆ.

ಶ್ರೀಕೃಷ್ಣ ಆಯೋಗದ ಕಟು ಟೀಕೆಯ ಹಿನ್ನೆಲೆಯಲ್ಲಿ

'ಶಿವಸೇನೆ-ಬಿಜೆಪಿ ಸರಕಾರ ರಾಜೀನಾಮೆ ಕೊಡಬೇಕು'

ಕೊನೆಗೂ 1992-93ರ ಮುಂಬೈ ಗಲಭೆಗಳ ಬಗ್ಗೆ ತನಿಖೆ ನಡೆಸಲು ನೇಮಿಸಿದ್ದ ಶ್ರೀಕೃಷ್ಣ ಆಯೋಗದ ವರದಿಯನ್ನು ಆಗಸ್ಟ್ 6 ರಂದು ಮಹಾರಾಷ್ಟ್ರ ಸರಕಾರ ರಾಜ್ಯ ವಿಧಾನ ಸಭೆಯಲ್ಲಿ ಮಂಡಿಸಿದೆ. ಫೆಬ್ರವರಿ ತಿಂಗಳಲ್ಲಿ ತನಗೆ ಸಲ್ಲಿಸಿದ ವರದಿಯನ್ನು ಮುಂದಿಡಲು ಅದು ಇಷ್ಟೊಂದು ಸಮಯ ಏಕೆ ತಗೊಂಡಿತು ಎಂಬುದು ಆಯೋಗದ ವರದಿ ನೋಡಿದಾಗ ಸ್ಪಷ್ಟವಾಗಿದೆ. ಬಾಬ್ರಿ ಮಸೀದಿಯ ಧ್ವಂಸದ ಹಿನ್ನೆಲೆಯಲ್ಲಿ ನಡೆದ ಕೋಮುದಂಗೆಗಳಲ್ಲಿ ಮುಖ್ಯವಾಗಿ ಶಿವಸೇನೆಯ ಹಾಗೂ ಸ್ವಲ್ಪ ಮಟ್ಟಿಗೆ ಬಿ.ಜೆ.ಪಿ.ಯ ಪಾತ್ರವಿದೆ ಎಂದು ಆಯೋಗ ದೋಷ ಹೊರಿಸಿದೆ. ಶಿವಸೇನೆ ಮತ್ತಿತರ ಸಂಘಟನೆಗಳ ಹಾಗೂ ಅದರ ಮುಖಂಡ ಬಾಳಠಾಕ್ರೆಯವರ 'ಬೇಜವಾಬ್ದಾರಿ' ಕೋಮುವಾದಿ ಅಪಪ್ರಚಾರದಿಂದ ಡಿಸೆಂಬರ್ 92-ಜನವರಿ 93ರ ಗಲಭೆಗಳು ನಡೆದವು, ನಂತರ ಕಾಂಗ್ರೆಸ್ ಸರಕಾರ ಅದನ್ನು ಪರಿಣಾಮಕಾರಿಯಾಗಿ ಎದುರಿಸಲಿಲ್ಲ ಎಂದು ಆಯೋಗದ ವರದಿ ಕಟುವಾಗಿ ಟೀಕಿಸಿದೆ. ಮುಂಬೈ ಪೋಲಿಸ್ ಅಧಿಕಾರಿಗಳೂ ಸೇರಿದಂತೆ ಪೋಲೀಸ್ ಪಡೆ ಮುಸ್ಲಿಂ-ವಿರೋಧಿ ಪಕ್ಷಪಾತದಿಂದ ವರ್ತಿಸಿತು, ಎರಡೂ ಕಡೆಯ ಮೂಲಭೂತವಾದಿಗಳಿಂದಾಗಿ ಸುಮಾರು ಒಂದು ಸಾವಿರ ಮುಗ್ಧರನ್ನು ಬಲಿ ತೆಗೆದುಕೊಂಡ, ಮುಂಬೈ ನಗರವನ್ನು ಸಂಪೂರ್ಣ ಅಲುಗಾಡಿಸಿಬಿಟ್ಟ ಈ ಕೋಮು ದಂಗೆಗಳು ನಡೆದವು ಎಂದು ಆಯೋಗ ಹೇಳಿದೆ. ಈ ಗಲಭೆಗಳಿಗೂ ಮಾರ್ಚ್ 12. 1993ರಂದು ಆ ನಗರದಲ್ಲಿ ನಡೆದ ಸರಣಿ ಸ್ಫೋಟಗಳಿಗೂ ಕಾರಣ-ಪರಿಣಾಮ ಸಂಬಂಧವಿದೆ, ಆದರೆ ಒಂದು ಪಿತೂರಿಯ ಭಾಗವಾಗಿ ಅದು ನಡೆದಂತೆ ಕಾಣುವುದಿಲ್ಲ ಎಂದೂ ಶ್ರೀಕೃಷ್ಣ ಆಯೋಗ ಹೇಳಿದೆ.

ಈ ದೋಷಾರೋಪಣೆಯ, ಕಟು ಟೀಕೆಯ ಹಿನ್ನೆಲೆಯಲ್ಲಿ ಶಿವಸೇನೆ-ಬಿಜೆಪಿ ಸರಕಾರ ಅಧಿಕಾರದಿಂದ ಕೆಳಗೆ ಇಳಿಯಬೇಕು ಎಂದು ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಒತ್ತಾಯಿಸಿದೆ. ವಾರಗಟ್ಟಲೆ ಈ ಮಹಾನಗರವನ್ನು ಆವರಿಸಿದ ಕೋಮುಗಲಭೆಗಳಿಗೆ ಜವಾಬ್ದಾರರೆಂದು ಗುರುತಿಸಿದ ಎಲ್ಲಾ ವ್ಯಕ್ತಿಗಳನ್ನು ಇಂಡಿಯನ್ ಪೀನಲ್ ಕೋಡ್ ಪ್ರಕಾರ ಶಿಕ್ಷೆಗೊಳಪಡಿಸಬೇಕು. ಪ್ರಮುಖ ಆರೋಪಿಯಾದ ಶಿವಸೇನೆ ಅಧಿಕಾರದಲ್ಲಿ ಮುಂದುವರೆಯಲು ಯಾವುದೇ ಹಕ್ಕೂ ಇಲ್ಲ ಎಂದು ಪೊಲಿಟ್‌ಬ್ಯೂರೋ ಹೇಳಿದೆ.

ಶ್ರೀಕೃಷ್ಣ ಆಯೋಗದ ವರದಿಯನ್ನು ತಿರಸ್ಕರಿಸುವ ಮೂಲಕ ಮಹಾರಾಷ್ಟ್ರ ಸರಕಾರ ತನ್ನ ತಪ್ಪನ್ನು ತಾನೇ ಬಯಲು ಮಾಡಿಕೊಂಡಿದೆ ಎಂದೂ ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಹೇಳಿದೆ.

ದೇಶದೆಲ್ಲೆಡೆ ಹಿರೋಶಿಮಾ ದಿನಾಚರಣೆ


ಕಾವಿಪಡೆಗಳ 'ಬಾಂಬು ಆರಾಧನೆ'ಗೆ ಭಾರೀ ಪ್ರತಿಭಟನೆಗಳು

ಆಗಸ್ಟ್ ೬ 'ಹಿರೋಶೀಮಾ ದಿನ'. ಈ ವರ್ಷ ಇದು ಭಾರತೀಯ ಪ್ರಜಾಪ್ರಭುತ್ವ ವಾದಿಗಳಿಗೆ, ಜನತೆಗೆ ವಿಶೇಷ ಮಹತ್ವದ ದಿನವಾಗಿತ್ತು. ಕಳೆದ ಐವತ್ತು ವರ್ಷಗಳಿಂದ ಸಾರ್ವತ್ರಿಕ ನಿಶ್ಯಸ್ತ್ರೀಕರಣ ಆಂದೋಲನದಲ್ಲಿ ಪ್ರತಿಷ್ಠೆಯ ಸ್ಥಾನ ಹೊಂದಿದ್ದ ಭಾರತ ವಾಜಪೇಯಿ ಸರಕಾರದ ಬಾಂಬ್ ನೀತಿಯಿಂದಾಗಿ ತನ್ನ ಆ ಸ್ಥಾನವನ್ನು ಕಳಕೊಂಡಿತು. ಅಷ್ಟೇ ಅಲ್ಲ ಭಾರತ ಪಾಕಿಸ್ತಾನದ ಆಳರಸರ ಬೇಜವಾಬ್ದಾರಿ ವರ್ತನೆಗಳಿಂದಾಗಿ ಎರಡೂ ದೇಶಗಳ ಜನ ಹಿರೋಶೀಮಾ-ನಾಗಾಸಾಕಿಯ ದುರಂತವನ್ನು ನೆನಪಿಸಿ ಕೊಳ್ಳುವಂತಾಗಿದೆ. ಕಾವಿ ಪಡೆಗಳು ದೇಶಭಕ್ತಿಯ ಭಾವೋನ್ಮಾದ ಎಬ್ಬಿಸಲು ಸರ್ವರೀತಿಯಲ್ಲಿ ಪ್ರಯತ್ನಿಸಿ ದರೂ ಜನ ಅದಕ್ಕೆ ಬಲಿಯಾಗಲಿಲ್ಲ ಎಂಬುದು ಆಗಸ್ಟ್ ೬ ರಂದು ದೇಶಾದ್ಯಂತ ನಡೆದ ಬಾಂಬು-ವಿರೋಧಿ ಮೆರವಣಿಗೆ ಗಳು, ಸಭೆ-ಸಮಾರಂಭಗಳಲ್ಲಿ ಸ್ಪಷ್ಟವಾಗಿ ವ್ಯಕ್ತಗೊಂಡಿತು. ರಾಜಧಾನಿ ದೆಹಲಿಯಲ್ಲಿ ದೇಶದ ಪ್ರತಿಷ್ಠಿತ ಬುದ್ಧಿ ಜೀವಿಗಳು, ಮಾಜಿ ಸೇನಾಧಿಕಾರಿಗಳು, ವಿಜ್ಞಾನಿಗಳು, ಪ್ರಗತಿಶೀಲ ರಾಜಕಾರಣಿಗಳು ಭಾಗವಹಿಸಿದ್ದ ಒಂದು ಬೃಹತ್ ರ‍್ಯಾಲಿ ನಡೆಯಿತು. ಕಲ್ಕತ್ತೆಯಲ್ಲಿ ಲಕ್ಷಾಂತರ ಜನ ಭಾಗವಹಿಸಿದ

ಪುಟ 2 ಕ್ಕೆ

ಬೆಂಗಳೂರಿನಲ್ಲಿ ಬಾಂಬು-ವಿರೋಧಿ ಮೆರವಣಿಗೆಯ ಎರಡು ನೋಟಗಳು





ಬಡ ಕೃಷಿಕೂಲಿಕಾರರಿಗೆ ಕೇಂದ್ರೀಯ ಶಾಸನ ಬೇಕಿಲ್ಲ ಎನ್ನುವ ಬಿಜೆಪಿ ಸರಕಾರದ ಈ ಕಾರ್ಮಿಕ ಮಂತ್ರಿ!

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಕಾರ್ಮಿಕ ಮಂತ್ರಿ ಡಾ|| ಸತ್ಯನಾರಾಯಣ ಜತಿಯಾ ಕೃಷಿ ಕಾರ್ಮಿಕರಿಗೆ ಒಂದು ಕೇಂದ್ರೀಯ ಶಾಸನದ ಅಗತ್ಯವಿಲ್ಲ ಎಂದು ಹೇಳಿಕೆ ನೀಡಿದ್ದಾರೆ. ಇಂತಹ ಶಾಸನ ತಂದರೆ ಕೃಷಿಯಲ್ಲಿ ಕೈಗಾರಿಕಾ ವಿವಾದದ ಸಂಸ್ಕೃತಿ ಬಂದುಬಿಡುತ್ತದಂತೆ, ಕೇರಳದಲ್ಲಿ 1974 ರಿಂದ ಇರುವ ಇಂತಹ ಶಾಸನ ಕೆಲಸ ಮಾಡುತ್ತಿಲ್ಲ ಎಂಬುದು ಈ ಕಾರ್ಮಿಕ ಮಂತ್ರಿಯೆನ್ನುವ ವ್ಯಕ್ತಿಯ ನುಡಿಮುತ್ತು.

ಕಾರ್ಮಿಕ ಮಂತ್ರಿಗಳ ಈ ಹೇಳಿಕೆಯನ್ನು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಬಲವಾಗಿ ಖಂಡಿಸಿದೆ. ಜುಲೈ 21, 1998 ರಂದು ಈ ಕುರಿತು ಸಂಘ (ಎಐಎಡಬ್ಲ್ಯುಯು) ದ ಮಹಾ ಮಂಡಳಿ ಒಂದು ನಿರ್ಣಯ ಅಂಗೀಕರಿಸಿ ಈಗಾಗಲೇ ಸಂಸತ್ತಿನ ಮುಂದಿರುವ ಕೇಂದ್ರೀಯ ಶಾಸನದ ಮಸೂದೆಯನ್ನು ಮಂಡಿಸಲು ನಿರಾಕರಿಸಿರುವ ಬಿಜೆಪಿ ನೇತೃತ್ವದ ಸರ್ಕಾರ 1947 ರಿಂದ ಈ ದೇಶವನ್ನಾಳಿದ ಎಲ್ಲಾ ಸರಕಾರಗಳಲ್ಲಿ ಅತ್ಯಂತ ಹಿಂದುಳಿದ ವಿಚಾರದ ಸರ್ಕಾರ ತಾನು ಎಂದು ತೋರಿಸಿಕೊಂಡಿದೆ' ಎಂದು ಟೀಕಿಸಿದೆ. ಕೃಷಿಕೂಲಿಕಾರರ ಮಾನವ ಹಕ್ಕುಗಳನ್ನು ನಿರಾಕರಿಸಿ ಈ ಸರಕಾರ ತನ್ನ ಮಾನವ ಹಕ್ಕು-ವಿರೋಧಿ ಸ್ವರೂಪವನ್ನು ಬಯಲುಗೊಳಿಸಿದೆ ಎಂದಿರುವ ಎಐಎಡಬ್ಲ್ಯುಯು 1991 ರಷ್ಟು ಹಿಂದೆಯೇ ಸಂಸತ್ತಿನ ಕಾರ್ಮಿಕ ಸ್ಥಾಯೀ ಸಮಿತಿ ಆಗ್ರಹಪಡಿಸಿದಂತೆ ಈ ಮಸೂದೆಯನ್ನು ಮಂಡಿಸಬೇಕು ಎಂದು ಒತ್ತಾಯಿಸಿದೆ.

ಹರ್ಕಿಷನ್ ಸಿಂಗ್ ಸುರ್ಜಿತ್ ಕರಡು ಎಂದು ಹೇಳುವ ಈ ಮಸೂದೆಯ ಮೊದಲ ಕರಡು 1980 ರಿಂದ ಅಸ್ತಿತ್ವದಲ್ಲಿದೆ. ಅಂದಿನಿಂದ ಇಂದಿರಾ ಗಾಂಧಿಯಿಂದ ಹಿಡಿದು ಪ್ರತಿ ಪ್ರಧಾನ ಮಂತ್ರಿಗಳೂ ಈ ಶಾಸನವನ್ನು ಅಂಗೀಕರಿಸುವ ಭರವಸೆ ನೀಡಿದ್ದಾರೆ. ಆದರೆ ಭರವಸೆ ಈಡೇರಿಸಲಿಲ್ಲ. 1996 ರಲ್ಲಿ ಇದನ್ನು ಮಾರ್ಪಡಿಸಿ ಸಂಯುಕ್ತ ರಂಗ ಸರಕಾರ ಮಂತ್ರಿಮಂಡಳದ ಎದುರು ಇಡಲಾಯಿತು. ಆದರೆ ಹಲವು ರಾಜ್ಯಗಳಲ್ಲಿನ ಭೂಮಾಲಕ ಲಾಬಿಯಿಂದಾಗಿ ಮೂಲೆಗೊತ್ತಲ್ಪಟ್ಟಿತು.

"ಸತತವಾಗಿ ಕಾರ್ಮಿಕ ಮಂತ್ರಿಗಳ ಏಳು ಸಮ್ಮೇಳನಗಳು ಶಿಫಾರಸು ಮಾಡಿದ ಒಂದು ಶಾಸನವನ್ನು ಬಿಜೆಪಿ ನೇತೃತ್ವದ ಸರಕಾರದ ಕಾರ್ಮಿಕ ಮಂತ್ರಿ ಬದಿಗೆ ತಳ್ಳಿರುವುದು ನಾಚಿಕೆಗೇಡು" ಎಂದು ಎಐಎಡಬ್ಲ್ಯುಯು ಹೇಳಿದೆ.

ಕೇರಳದಲ್ಲಿ ಇದು ಕೆಲಸ ಮಾಡುತ್ತಿಲ್ಲ ಎಂಬ ಕಾರ್ಮಿಕ ಮಂತ್ರಿಗಳ ಮಾತನ್ನೂ ಖಂಡಿಸಿರುವ ಸಂಘ 'ನಿಜವಾಗಿ ಕೇರಳದಲ್ಲಿ ಈ ಶಾಸನದಿಂದಾಗಿ ಅಲ್ಲಿಯ ಕೃಷಿಕೂಲಿಕಾರರಿಗೆ ದೇಶದಲ್ಲೇ ಅತಿ ಹೆಚ್ಚು ಕೂಲಿ ದೊರೆಯುತ್ತಿದೆ. ಒಂದು ಪೆನ್ಷನ್ ಮತ್ತು ಕಲ್ಯಾಣ ಯೋಜನೆ ದೊರೆತಿದೆ. ದೇಶದ ಇತರೆಡೆಗಳಲ್ಲಿ ಕೃಷಿ ಕಾರ್ಮಿಕರು ದನದ ಕೊಟ್ಟಿಗೆಗಳಲ್ಲಿ ಅಥವಾ ಆಕಾಶದ ಕೆಳಗೆ ಆಶ್ರಯ ಪಡೆಯಬೇಕು. ಪ್ರತಿವರ್ಷ ಸಾವಿರಾರು ಅತ್ಯಾಚಾರಗಳಿಗೆ ಒಳಗಾಗಬೇಕು" ಎಂದು ಎಐಎಡಬ್ಲ್ಯುಯು ನೆನಪಿಸಿದೆ.

ಕೃಷಿ ಕಾರ್ಮಿಕರ ಮೂಲಭೂತ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳ ರಕ್ಷಣೆಗೆ ಹಾಗೂ ಕೇಂದ್ರೀಯ ಶಾಸನವನ್ನು ಇನ್ನಷ್ಟು ವಿಳಂಬ ಮಾಡದಂತೆ ನೋಡಿಕೊಳ್ಳಲು ಚಳುವಳಿ ನಡೆಸಲು ಮುಂದೆಬರಬೇಕು ಎಂದು ತನ್ನ ಎಲ್ಲಾ ಘಟಕಗಳಿಗೆ ಹಾಗೂ ಸಮಾನಮನಸ್ಕ ಕೃಷಿಕೂಲಿಕಾರರ ಸಂಘಟನೆಗಳಿಗೆ ಎಐಎಡಬ್ಲ್ಯುಯು ಕರೆ ನೀಡಿದೆ.

'ದಟ್ಟ ದರಿದ್ರರ ಬಗ್ಗೆ ಕರುಣೆಯೂ ಇಲ್ಲದ ಸ್ವೇಚ್ಛಾಚಾರಿ ಸರ್ಕಾರ'

ನವದೆಹಲಿಯಲ್ಲಿ ಸಭೆ ಸೇರಿದ ಅಖಿಲ ಭಾರತ ಕೃಷಿಕೂಲಿಕಾರರ ಸಂಘದ ಮಹಾಮಂಡಳಿ ಸಮಗ್ರ ಕೇಂದ್ರೀಯ ಶಾಸನವೂ ಸೇರಿದಂತೆ ಕೃಷಿ ಕೂಲಿಕಾರರ ಎಲ್ಲಾ ಬೇಡಿಕೆಗಳಿಗಾಗಿ ಒಂದು ಸತತ ಹೋರಾಟಕ್ಕಿಳಿಯಲು ನಿರ್ಧರಿಸಿದೆ. ರಾಜ್ಯಮಟ್ಟದ ಸಮಾವೇಶಗಳು, ಧರಣಿಗಳು, ಮತಪ್ರದರ್ಶನಗಳು, ನಂತರ ಸಂಸತ್ತಿನೆದುರು ಒಂದು ಬೃಹತ್ ದೈನಂದಿನ ಪಿಕೆಟಿಂಗ್ ನಡೆಸಲು ನಿರ್ಧರಿಸಲಾಯಿತು.

ಬದಲಾದ ಆರ್ಥಿಕ ಸನ್ನಿವೇಶದಿಂದಾಗಿ ಬಹಳಷ್ಟು ಪುರುಷ ಕಾರ್ಮಿಕರು ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಇದರಿಂದಾಗಿ ಕೃಷಿಯಲ್ಲಿ ಮಹಿಳಾ ಕಾರ್ಮಿಕರ ಸಂಖ್ಯೆ ಗಮನಾರ್ಹವಾಗಿ ಹೆಚ್ಚಿದೆ. ಇಂದು ಗ್ರಾಮೀಣ ಮಹಿಳಾ ಕಾರ್ಮಿಕರಲ್ಲಿ 86% ಕೃಷಿಯಲ್ಲಿದ್ದಾರೆ. ಆದ್ದರಿಂದ ಮಹಿಳೆಯರ ಸಮಸ್ಯೆಗಳಿಗೆ ಹೆಚ್ಚು ಗಮನ ನೀಡಲು, ಜಿಲ್ಲಾ ಮಟ್ಟದ ಮಹಿಳಾ ಕೃಷಿ ಕಾರ್ಮಿಕ ಸಮಾವೇಶಗಳನ್ನು ನಡೆಸಲು ಸಂಘ ನಿರ್ಧರಿಸಿತು.

'ಒಂದು ಸ್ವೇಚ್ಛಾಚಾರಿ ಸರ್ಕಾರ ತಾನು ಸಂಪಾದಿಸುವುದಕ್ಕಿಂತ 1 ಲಕ್ಷ ಕೋಟಿ ರೂ.ಗಳಷ್ಟು ಹೆಚ್ಚು ಖರ್ಚು ಮಾಡುತ್ತಿರುವಾಗ, ತನ್ನ ಕೊರತೆ ತುಂಬಿಸಲು ಬೆಲೆ ಏರಿಸುತ್ತಿರುವಾಗ ದೇಶದ ಅತಿ ಬಡ ನಾಗರೀಕರರು ಹಸಿದಿರುವಂತೆ ಬಿಡಲು ಸಾಧ್ಯವಿಲ್ಲ' ಎಂದು ನಿರ್ಧರಿಸಿರುವ ಎಐಎಡಬ್ಲುಯು ದೇಶಾದ್ಯಂತ ಕೃಷಿ ಕೂಲಿಕಾರರು ಬೆಲೆಯೇರಿಕೆಯನ್ನು ಪ್ರತಿರೋಧಿಸುತ್ತಾರೆ, ರೇಶನ್ ಅಂಗಡಿಗಳ ಪಿಕೆಟಿಂಗ್ ನಡೆಸುತ್ತಾರೆ. ಕನಿಷ್ಟ ಕೂಲಿ ಸಿಗುವಂತೆ ಮಾಡಿ, ಅಭಿವೃದ್ಧಿ ಯೋಜನೆಗಳಲ್ಲಿ ಸಾಕಷ್ಟು ಕೆಲಸ ಕೊಡಿಸಿ ಎಂದು ಒತ್ತಾಯಿಸುತ್ತಾರೆ ಎಂದಿದೆ. ಈ ಒತ್ತಾಯಗಳನ್ನು ಈಡೇರಿಸದಿದ್ದರೆ ಸರಕಾರ ಬದುಕಲು ಬೇಕಾಗುವಷ್ಟು ಕೆಲಸ ಕೊಡಿಸದಿದ್ದರೆ ಕೃಷಿ ಕಾರ್ಮಿಕರು ಭೂಮಿತಿ ಮೇಲಿನ ಜಮಿನುಗಳನ್ನು, ಬೇನಾಮಿ, ಗಾಂವ್ ಸಮಾಜ, ಬಂಜರು ಭೂಮಿ, ಅರಣ್ಯ ಭೂಮಿಗಳನ್ನು ತಮ್ಮ ಬದುಕಿಗಾಗಿ ಆಕ್ರಮಿಸಿಕೊಳ್ಳುತ್ತಾರೆ ಎಂದು ಅದು ಎಚ್ಚರಿಸಿದೆ.

ಎಐಎಡಬ್ಲ್ಯುಯು ನ ಮಹಾ ಮಂಡಳಿ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಕಾರ್ಯಾಚರಣೆಯ ಯೋಜನೆಯನ್ನು ಅನುಮೋದಿಸುತ್ತಾ ಆಗಸ್ಟ್ 12, 1998ರ ರಾಷ್ಟ್ರೀಯ ಸಮಾವೇಶ ಹಾಗೂ ನವಂಬರ್ ತಿಂಗಳ ಸಂಸತ್ ಚಲೋಕ್ಕೆ ಬೆಂಬಲ ಸೂಚಿಸಿತು.

(ಐಎನ್ಎಸ್)

ಪುಟ 1 ರಿಂದ

.......ಹಿರೋಶಿಮಾ ದಿನಾಚರಣೆಗಳು

ರ್ಯಾಲಿ ನಡೆಯಿತು. ದೇಶದ ಇತರೆಡೆಗಳಲ್ಲೂ ಇಂತಹ ಪ್ರತಿಭಟನೆಗಳ ವರದಿಗಳು ಬರುತ್ತಿವೆ.

ಕರ್ನಾಟಕದಲ್ಲಿ, ಬೆಂಗಳೂರಿನಲ್ಲಿ ಬುದ್ಧಿಜೀವಿಗಳು, ವಿಜ್ಞಾನಿಗಳೊಡನೆ ಕಾರ್ಮಿಕ, ರೈತ, ವಿದ್ಯಾರ್ಥಿ-ಯುವಜನ, ಮಹಿಳಾ ಸಂಘಟನೆಗಳು ಸೇರಿ ರಚಿಸಿಕೊಂಡಿದ್ದ ಬಾಂಬು-ವಿರೋಧಿ ಒಕ್ಕೂಟದ ನೇತೃತ್ವದಲ್ಲಿ ಒಂದು ಆಕರ್ಷಕ ಅರ್ಥಪೂರ್ಣ ಮೆರವಣಿಗೆ ನಡೆಯಿತು. ನಂತರ ಇ.ಆರ್.ಸೇತುರಾವ್, ಲೇಖಕ-ನಟ ಜಿ.ಕೆ.ಗೋವಿಂದ್ ರಾವ್, ಸಿ.ಪಿ.ಐ.(ಎಂ) ಮುಖಂಡ ಸೂರ್ಯನಾರಾಯಣ ರಾವ್, ಗಾಯತ್ರಿ, ಸಿಂಹಾದ್ರಿ ಮತ್ತಿತರರು ಮಾಡಿದ ಭಾಷಣಗಳಲ್ಲಿ ಕಾವಿ ಪಡೆಗಳ, ಫ್ಯಾಸಿಸ್ಟ್ ಶಕ್ತಿಗಳ ಆಟವನ್ನು ಬಯಲಿಗೆಳೆದರು. ಮೈಸೂರು, ತುಮಕೂರು, ಮಂಡ್ಯ, ಮಂಗಳೂರು, ಉಡುಪಿ, ಕುಂದಾಪುರಗಳಲ್ಲಿ ಬಾಂಬು- ವಿರೋಧಿ ಮೆರವಣಿಗೆಗಳು, ಶಿರಸಿ ಮತ್ತು ಇತರೆಡೆ ಸಭೆ, ವಿಚಾರ ಸಂಕಿರಣಗಳು ನಡೆದ ಸುದ್ದಿಗಳು ಬರುತ್ತಿವೆ.

ಬಡವರ ಮನೆ ಬಾಗಿಲಿಗೇ ಉಡುಗೊರೆ ತಂತು ಉದಾರೀಕರಣ



ಜಿ.ಎಸ್.ಮಣಿ

ಸರ್ಕಾರ ಉದಾರೀಕರಣ ತಂದರೆ ತಂದುಕೊಳ್ಳಲಿ, ನಮಗೇನು ಎಂದು ಹಲವು ಮಧ್ಯಮ ವರ್ಗದ ಅಕ್ಷರಸ್ಥರು ಉದಾರೀಕರಣದ ಬಗ್ಗೆ ಓದಿದಾಗ ಹೇಳಿರಬಹುದು. ಜನ ಸಾಮಾನ್ಯರಿಗೆ ಉದಾರೀಕರಣದ ಬಿಸಿ ಬೇರೆ ಬೇರೆ ರೀತಿಯಲ್ಲಿ ತಟ್ಟಿಯೇ ಇದೆ. ಬೆಲೆ ಏರಿಕೆ, ಬಡತನ ಇವೆಲ್ಲ ಹೆಚ್ಚಿರುವುದು, ಶ್ರೀಮಂತರ ಮೆರೆದಾಟ ಹೆಚ್ಚಿರುವುದು, ಕಣ್ಣಿಗೆ ಕಂಡದ್ದು ಕೈಗೆ ಬಾರದೇ ಯಾರದೊ ಕೈಗೆ ಹೋಗಿರುವುದು ಇತ್ಯಾದಿ ಹಲವು ಘಟನೆಗಳ ಅನುಭವ ಹಲವರಿಗಿದ್ದೇ ಇರುತ್ತದೆ. ಉದಾರೀಕರಣ ಏನನ್ನು ತರಬಹುದು ಎಂಬುದಕ್ಕೆ ಮನೆ ಬಾಗಿಲಿಗೇ ಬಂದ ಈ ಬೆಳವಣಿಗೆ ನೋಡಿ.

ಕರ್ನಾಟಕ ಸರ್ಕಾರ ಶೇ. 5 ರಷ್ಟು ಉದ್ಯೋಗಗಳನ್ನು ಕಡಿತ ಮಾಡುವ ನಿರ್ಧಾರ ಕೈಗೊಂಡಿದೆ. ಇದರ ಜೊತೆಗೇ ಆಡಳಿತದ ಖರ್ಚನ್ನು ಬಿಗಿಗೊಳಿಸುವ ನಿರ್ಧಾರವನ್ನು ಕೈಗೊಂಡಿದೆ. ಏನಪ್ಪಾ ಇದರ ಪರಿಣಾಮವೆಂದರೆ ಉದ್ಯೋಗಗಳ ಬೆಳವಣಿಗೆಯಾಗಬೇಕಾದಲ್ಲಿ ಅವು ಕಡಿಮೆಯಾಗುತ್ತವೆ. ಜನಸಂಖ್ಯೆ ಬೆಳೆದಾಗ ಉದ್ಯೋಗಗಳು ಹೆಚ್ಚಾಗಬೇಕು. ಅದರ ಬದಲಿಗೆ ಕಡಿಮೆ ಆದರೆ ನಿರುದ್ಯೋಗ ಹೆಚ್ಚಾಗುತ್ತದೆ.

ಸರ್ಕಾರಿ ವೆಚ್ಚವನ್ನು ಬಿಗಿಗೊಳಿಸಿದರೆ ಅಧಿಕಾರಿಗಳ ಅನುಕೂಲಗಳ ಮೇಲಾಗಲಿ, ರಾಜಕಾರಣಿಗಳ, ಮಂತ್ರಿ ಮಹೋದಯರುಗಳ ಭೋಗದ ಮೇಲೆ ಕಡಿವಾಣ ಬರುವುದಿಲ್ಲ. ಬದಲಿಗೆ ಬಡವರ್ಗದ ಜನರಿಗೆ ಇರುವ ಪರಿಹಾರ/ಅನುಕೂಲ ಕಾರ್ಯಕ್ರಮಗಳ ಮೇಲೆ ಕಡಿತ ಬರುತ್ತದೆ ಅಷ್ಟೇ. ಇಲ್ಲಿಯೂ ಬಡವರಿಗೆ ಮಾತ್ರ ಇಂತಹ ಕ್ರಮಗಳ ಬಿಸಿ ತಟ್ಟುವದು. ಈ ಕ್ರಮಗಳು ರಾಜ್ಯದ ಉಪ ಮುಖ್ಯಮಂತ್ರಿ ಹಾಗೂ ಹಣಕಾಸು ಮಂತ್ರಿ ಶ್ರೀ ಸಿದ್ಧರಾಮಯ್ಯನವರ ನೇತೃತ್ವದ ಸಮಿತಿ ಮಾಡಿದ ಶಿಫಾರಸ್ಸುಗಳಿಗನುಗುಣವಾಗಿ ಬಂದಂತಹವು. ಸಂಕ್ಷಿಪ್ತವಾಗಿ ಈ ಶಿಫಾರಸ್ಸುಗಳು ಕೆಳಗಿನಂತಿವೆ.

1. ಸರ್ಕಾರದ ಪಾತ್ರ ಅನಾವಶ್ಯಕವಾಗಿರುವ ವಿಭಾಗಗಳನ್ನು ಗುರುತಿಸಿ ಇಂತಹ ಕಡೆ ಸರ್ಕಾರದ ಪಾತ್ರವನ್ನು ತೊಡೆದು ಹಾಕಬೇಕು. ನಗರ ಪ್ರದೇಶಗಳಲ್ಲಿ ಖಾಸಗಿಯವರಿಗೆ ಈ ಪಾತ್ರ ನೀಡಬೇಕು.
2. ಕೆಲವು ಇಲಾಖೆಗಳನ್ನು ತೆಗೆದು ಹಾಕಿ ಅವುಗಳ ಕಾರ್ಯಗಳನ್ನು ಬೇರೆ ಇಲಾಖೆಗಳಿಗೆ ವಹಿಸಬೇಕು.
3. ಒಂದೇ ಕಾರ್ಯವನ್ನು ಎರಡು ಹುದ್ದೆಗಳು ಮಾಡುತ್ತಿದ್ದರೆ ಒಂದನ್ನು ತೆಗೆದು ಹಾಕಬೇಕು.
4. ಸೆಕ್ರೆಟಾರಿಯೆಟ್‌ಗಳಲ್ಲಿನ ಸಿಬ್ಬಂದಿ ಸಂಖ್ಯೆಯನ್ನು ಕಡಿಮೆ ಮಾಡಬೇಕು.
5. ಕಛೇರಿ ಕೆಲಸ ಮಾಡುವವರಿಗೆ ಕ್ಷೇತ್ರ ಕೆಲಸಗಳನ್ನು ಪರಿಚಯಿಸಿ ಅವರು ಕ್ಷೇತ್ರ ಕೆಲಸಗಳನ್ನು ಮಾಡುವಂತೆ ಮಾಡಬೇಕು.
6. ಆಡಳಿತಾತ್ಮಕ ತಲಾ ಖರ್ಚನ್ನು ಕಡಿತಗೊಳಿಸಬೇಕು, ಇತ್ಯಾದಿ.

ಹೀಗೆ ಈ ಸಮಿತಿಯ ಶಿಫಾರಸ್ಸುಗಳು ಸರ್ಕಾರಿ ವೆಚ್ಚವನ್ನು ಕಡಿಮೆ ಮಾಡುವ ಉದ್ದೇಶದ್ದು. ಐ.ಎಂ.ಎಫ್ ಮತ್ತು ವಿಶ್ವಬ್ಯಾಂಕುಗಳು ಹೇಳುವ ಹಣಕಾಸು ಕೊರತೆಯನ್ನು ಕಡಿಮೆ ಮಾಡುವ ದಿಸೆಯಲ್ಲಿ ಬಂದ ಒಂದು ಕ್ರಮ ಇದು. ಉದಾರೀಕರಣದ ಉಡುಗೊರೆಯಲ್ಲವೆ ಇದು?

ಕಾಮಧೇನುಗಳ ಕೆಚ್ಚಲುಗಳಿಂದ ರಕ್ತ ಹರಿಯುತ್ತಿದೆ

ಸರ್ಕಾರಿ ವಲಯದ ಉದ್ದಿಮೆಗಳನ್ನು ಭಾರತದ ಕಾಮಧೇನುಗಳೆಂದು ಕರೆಯಲಾಗುತ್ತಿದೆ. ಸ್ವಾತಂತ್ರ್ಯನಂತರ ನಾವು ಸಾಧಿಸಿರುವ ಔದ್ಯಮಿಕ ಪ್ರಗತಿಗೆ, ಸ್ವಾವಲಂಬನೆಗೆ ಈ ಸರ್ಕಾರಿ ವಲಯದ ಉದ್ದಿಮೆಗಳು ಮುಖ್ಯ ಕಾರಣ. ಸಾಮ್ರಾಜ್ಯಶಾಹಿಗಳ ಬೆದರಿಕೆಗಳಿಗೆ ಮಣಿಯದೆ ಎದುರು ನಿಂತು ನಮ್ಮ ಗಟ್ಟಿತನವನ್ನು ತೋರಿಸಲು ಈ ಉದ್ದಿಮೆಗಳೇ ಕಾರಣವಾಗಿದ್ದವು.

ಇಂದು ಉದಾರೀಕರಣ ಬಂದ ಮೇಲೆ ಆಗಲೇ ಆಳುವ ವರ್ಗ ಹಾಳುಗೆಡವಿದ ಹಲವು ಉದ್ದಿಮೆಗಳನ್ನು ಮೂರು ಕಾಸಿಗೆ ಖಾಸಗಿಯವರಿಗೆ ಮಾರಲಾಯಿತು. ಇಂದಿಗೂ ಈ ಕೆಲಸ ನಡೆಯುತ್ತಲೇ ಇದೆ.

ಇದರ ಹೊರತಾಗಿಯೂ ಈ ಸರ್ಕಾರಿ ಉದ್ದಿಮೆಗಳ ಭವಿಷ್ಯಕ್ಕೆ ತೊಡಕಾಗುವಂತಹ ನೀತಿಗಳನ್ನು ಸರ್ಕಾರ ಉದಾರೀಕರಣದ ಹೆಸರಿನಲ್ಲಿ ಜಾರಿಗೆ ತರುತ್ತಲೇ ಇದೆ. ಇಂತಹ ಒಂದೊಂದು ಕ್ರಮದಿಂದಲೂ ಸರ್ಕಾರಿ ವಲಯದ ಉದ್ದಿಮೆಗಳು ಬಸವಳಿಯುತ್ತಿವೆ.

ಈಗ ಸೇಲ್ (ಭಾರತೀಯ ಉಕ್ಕು ಪ್ರಾಧಿಕಾರ) ಎಂಬ ಸರ್ಕಾರೀ ಉದ್ದಿಮೆ 311 ಕೋಟಿ ರೂಪಾಯಿಗಳ ಹಾನಿ ತೋರಿಸಿದೆ. ಇದಕ್ಕೆ ಮುಖ್ಯ ಕಾರಣ ಉಕ್ಕಿನ ಆಮದನ್ನು ಉದಾರೀಕರಣಗೊಳಿಸಿದ್ದು. ಹಿಂದಿನ ಸಂಯುಕ್ತ ರಂಗ ಸರ್ಕಾರ ಉಕ್ಕು ಆಮದಿನ ಮೇಲಿನ ನಿರ್ಬಂದನಗಳನ್ನು ಸಡಿಲಿಸಿ ಆಮದು ಸುಂಕವನ್ನು ಬಹಳ ಕಡಿಮೆ ಮಾಡಿತ್ತು.

ವಿದೇಶೀ ಉತ್ಪಾದಕರು ಮುಖ್ಯವಾಗಿ ಅಮೇರಿಕ ಮತ್ತು ಯುರೋಪಿನ ಸಮುದಾಯದ ದೇಶಗಳ ಉತ್ಪಾದಕರು, ಬಹುರಾಷ್ಟ್ರೀಯ ಕಂಪನಿಗಳು ಭಾರತವನ್ನು ಉಕ್ಕಿನ ತಿಪ್ಪೆ ಎಂದಿದ್ದರು. ಅವರ ಸರಕು ಮಾರಾಟವಾಗುವುದು ಅವರಿಗೆ ಬೇಕಾಗಿತ್ತು. ಭಾರತಕ್ಕೆ ಅದನ್ನು ಸಾಗಿಸಿ ನಮ್ಮಲ್ಲಿ ರಾಶಿ ಹಾಕಿದವು. ಇದರಿಂದ ದೇಶೀ ಉಕ್ಕು ಉತ್ಪಾದಕರ ಮೇಲೆ ದುಷ್ಪರಿಣಾಮ ಆಯಿತು. ದೇಶೀ ಉತ್ಪಾದಕರಿಗೆ ಮಾರುಕಟ್ಟೆಯೇ ಇಲ್ಲವಾಯಿತು. ಬೆಲೆ ಕುಸಿದದ್ದರಿಂದ ಬಹಳ ಕಡಿಮೆ ಬೆಲೆಗೆ ಅವರು ಮಾ_ಬೇಕಾಯಿತು. ಈಗಾಗಲೇ ಟಾಟಾಗಳ ಟಿಸ್ಕೊ ಎಂಬ ಕಂಪನಿ ತನ್ನ ಲಾಭ ಕುಸಿದದ್ದನ್ನು ಬಹಿರಂಗಪಡಿಸಿದೆ.

ಟಿಸ್ಕೊ ಖಾಸಗಿ ಕ್ಷೇತ್ರದಲ್ಲಿದ್ದರೆ ಸೇಲ್ ಸಾರ್ವಜನಿಕ ಕ್ಷೇತ್ರದಲ್ಲಿದೆ. ಸೇಲ್‌ಗೂ ಈ ಸಮಸ್ಯೆ ಬಡಿಯಿತು. ಈಗ ಸೇಲ್ ಎಂಬ ಭಾರತದ ಹೆಮ್ಮೆಯ ಉದ್ದಿಮೆ ರೋಗದ ಹಾದಿಯಲ್ಲಿದೆ. ಜೈ ಉದಾರೀಕರಣ ಎನ್ನೋಣವೆ?

ವಿದ್ಯುತ್ತಾಘಾತದ ನಂತರ ನೀರಿನ ಪ್ರವಾಹ

ನೀರಿನ ಪ್ರವಾಹ ಅಲ್ಲ. ಬದಲಿಗೆ ನೀರಿನ ಬೆಲೆಯ ಪ್ರವಾಹ. ಕೊಚ್ಚಿ ಹೋಗುವಂತಹ ಪ್ರವಾಹ. ಕೆ.ಇ.ಬಿ ವಿದ್ಯುತ್ ದರ ಹೆಚ್ಚಿಸಿದ ನಂತರ ಈಗ ನೀರಿನ ಸರದಿಯಲ್ಲವೆ? ನೀರು ಸರಬರಾಜು ಮಂಡಳಿ ನೀರಿನ ದರಗಳನ್ನು ಹೆಚ್ಚಿಸಿದೆ. ಜನರ ಮೇಲಿನ ಹೊರೆಯ ಪರಿವೆ ಇಲ್ಲ ಸರ್ಕಾರಕ್ಕೆ. ಯಾಕೆಂದರೆ ಉದಾರೀಕರಣದ ಗಾಣಕ್ಕೆ ತನ್ನನ್ನೇ ಒಡ್ಡಿಕೊಂಡ ಸರ್ಕಾರ ಇದು ತನ್ನ ಮೇಲೆ ಬಂದ ಹೊರೆಗಳನ್ನು ಜನರ ಹೆಗಲಿಗೆ ದಾಟಿಸುವುದೇ ಅದರ ಕೆಲಸ. ಈ ಬೆಲೆ ಏರಿಕೆಗಳಿಗೆ ಪರಸ್ಪರ ಸಂಬಂಧವೂ ಇದೆ. ವಿದ್ಯುತ್ ದರ ಹೆಚ್ಚಿದ ಕೂಡಲೇ ನೀರು ಪೂರೈಸು ವಲ್ಲಿ ಬೇಕಾದ ವಿದ್ಯುತ್ ವೆಚ್ಚ ಹೆಚ್ಚುತ್ತದೆ. ನೀರು ಸರಬರಾಜು ಮಂಡಳಿ ತಿಂಗಳಿಗೆ 95 ಲಕ್ಷ ರೂಪಾಯಿಗಳ ಹೆಚ್ಚಿನ ಹೊರೆ ಹೊರಬೇಕಾಗುತ್ತದಂತೆ. ಆದ್ದರಿಂದ ಅದು ಈ ಹೊರೆಯನ್ನು ತಾನೇ ಹೊರಲು ಸಾಧ್ಯವೇ? ಸಾಧ್ಯವಿಲ್ಲ. ಆದ್ದರಿಂದ ಜನರ ಹೆಗಲಿಗೆ ಅದು ದಾಟಿಸ ಲೇಬೇಕಲ್ಲವೆ? ಕೊಂಡಿ ಪ್ರಕ್ರಿಯೆಗಳು ಇವೆಲ್ಲ.

ಶೇ. 10ರಷ್ಟು ಹೆಚ್ಚಾಗಿರುವ ನೀರಿನ ದರಗಳು ಈಗಾಗಲೇ ಬೆಲೆ ಏರಿಕೆಯಿಂದ ಬೆನ್ನು ಬಾಗಿ ಹೋಗಿರುವ ಜನಸಾಮಾನ್ಯನ ಬೆನ್ನನ್ನು ಇನ್ನೂ ಬಗ್ಗಿಸುತ್ತವೆ.

ಉದಾರೀಕರಣದ ಅರ್ಥಶಾಸ್ತ್ರವೇ ಇದು. ಬಡವರನ್ನು ' ಡಿ ಹಿಪ್ಪೆ ಮಾಡುವುದು ಶ್ರೀಮಂತರು ಹೀರಿ ಹೀರಿ ದಪ್ಪಗಾಗುವುದು.

ಬೆಲೆಯೇರಿಕೆಗೆ ಯಾರದು ಅಂಕೆ?

ಬೆಲೆಯೇರಿಕೆಗೆ ಯಾರದು ಅಂಕೆ? ಅಲ್ಲ ಯಾಕೆ ಬೇಕು ಅಂಕೆ? ಉದಾರೀಕರಣದ ಹಾದಿ ಹಿಡಿದಿರುವಾಗ ಬೆಲೆ ಏರಿಕೆಯದೇ ದಾರಿ ಅದು. ಹಾಗಿರುವಾಗ ಅಂಕೆಯ ಪ್ರಶ್ನೆಯೇನು ಬಂತು?

ಬೆಲೆಯೇರಿಕೆಯೆಂಬುದು ಈಗ ದಿನನಿತ್ಯದ ಮಾತಾಗಿ ಹೋಗಿದೆ. ಇಂದು ಇದ್ದ ಬೆಲೆ ನಾಳೆಯಿಲ್ಲ, ನಾಳೆಯಿದ್ದದ್ದು ನಾಡಿದ್ದಿಲ್ಲ. ಬೆಲೆ ಕೆಳಗೆ ಬರುವ ಮಾತೇ ಇಲ್ಲ, ಅದು ಸದಾ ಮೇಲ್ಮುಖಿ. ಆಹಾರ ಪದಾರ್ಥಗಳು ತರಕಾರಿ ಇತ್ಯಾದಿ ಜೀವನವಶ್ಯಕ ಪ್ರಾಥಮಿಕ ಸರಕುಗಳ ಬೆಲೆ ಏರುತ್ತಲೇ ಇದೆ.

ಹಣದುಬ್ಬರದ ಪ್ರಮಾಣ ಜುಲೈ 11ಕ್ಕೆ ಕೊನೆಗೊಂಡ ವಾರದಲ್ಲಿ ಶೇ. 8.08ಕ್ಕೇರಿತು. ತರಕಾರಿ ಬೆಲೆಗಳನ್ನು ಆಹಾರ ಧಾನ್ಯಗಳ ಬೆಲೆಯನ್ನು ನಾವೇ ದಿನವೂ ನೋಡುತ್ತಿದ್ದೇವಲ್ಲ. ಕಳೆದ ವರ್ಷದ ಇದೇ ಅವಧಿಗೆ ಹಣದುಬ್ಬರದ ಪ್ರಮಾಣ ಶೇ.4.14 ರಷ್ಟಿತ್ತು.

ಬೆಲೆಯೇರಿಕೆಯೆಂದರೆ ಅದೊಂದೇ ಹೊರೆಯಲ್ಲ, ಜನ ಸಾಮಾನ್ಯನ ಹೆಗಲಿಗೆ ನಿರುದ್ಯೋಗ, ಬೆಲೆಯೇರಿಕೆ, ಇತರ ಸೌಲಭ್ಯಗಳ ಕೊರತೆ ಎಲ್ಲ ಒಟ್ಟಿಗೆ ಸೇರಿಕೊಳ್ಳುತ್ತವೆ. ಉದಾಹರಣೆಗೆ ರೇಷನ್ ವ್ಯವಸ್ಥೆ ಕ್ಷೀಣವಾಗುವುದು ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಗಳು ದುರ್ಬಲಗೊಳ್ಳುವುದು ಇವೆಲ್ಲ ಸೇರಿ ಜನ ಸಾಮಾನ್ಯನ ಮೇಲೆ ಹೊರೆಯನ್ನು ಹೇರುತ್ತವೆ. ಆದ್ದರಿಂದಲೇ ಒಂದೊಂದು ಬೆಲೆಯೇರಿಕೆಯೂ ಇಷ್ಟು ನೋವುಕಾರಕವಾಗಿರುವುದು.

ಭಾರತ ಕಂಪನಿಗೇನು ಗರ ಬಡಿಯಿತು?

ಹಾಗೆ ನೋಡಿದರೆ 1991 ರ ನಂತರದ ಆರ್ಥಿಕ ನೀತಿಗಳು, ಬಜೆಟ್ಟುಗಳು ಭಾರತದಲ್ಲಿ ಕಾರ್ಯನಿರ್ವಹಿಸುವ ಕಂಪನಿಗಳಿಗೆ ಅನುಕೂಲ ಮಾಡಿಕೊಡುವ ನೀತಿಗಳ ಘೋಷಣೆಗಳನ್ನೇ ಮಾಡಿಕೊಂಡು ಬಂದಿವೆ. ತೆರಿಗೆ ಉದಾರೀಕರಣ, ಆಮದು ಉದಾರೀಕರಣ, ಲೈಸೆನ್ಸು ಉದಾರೀಕರಣ, ಹೆಚ್ಚು ಸೌಲಭ್ಯಗಳ ಘೋಷಣೆ ಇವೆಲ್ಲ ಈ ನೀತಿಗಳ ಭಾಗವಾಗಿ ಹೋಗಿವೆ. ಕಂಪನಿಗಳೇ ಈ ದೇಶದ ಭವಿಷ್ಯ ರೂಪಿಸುವವು ಎಂಬಂತೆ ವಾತಾವರಣವನ್ನು ಸೃಷ್ಟಿಸಲಾಗಿವೆ. ಹೀಗಿರುವಾಗ ಈ ಕಂಪನಿಗಳಾದರೂ ಉತ್ತಮ ಪರಿಣಾಮ ಗಳನ್ನು ತೋರಬೇಕಲ್ಲವೆ? ಕಂಪನಿಗಳ ಬೆಳವಣಿಗೆಗಳ ಜೊತೆಗೆ ದೇಶದ ಅಭಿವೃದ್ಧಿಯೂ ಆಗುತ್ತದೆ ಎಂಬ ಮಾತನ್ನು ಸದ್ಯಕ್ಕೆ ಮರೆಯೋಣ.

ಆದರೆ ಕಂಪನಿಗಳ ಇಂದಿನ ಪರಿಸ್ಥಿತಿ ಏನು?

ಭಾರತೀಯ ಕಂಪನಿಗಳು ಪ್ರಪಾತಕ್ಕೆ ಬೀಳುತ್ತಿವೆ ಎಂದು ದಿನ ಪತ್ರಿಕೆಗಳು ಹೇಳುತ್ತಿವೆ. ಉಕ್ಕು, ಸಿಮೆಂಟ್ ಮತ್ತು ಸಾಗಾಣಿಕೆ ವಲಯಗಳ ಕುಸಿತದಿಂದಾಗಿ ಶೇ. 50 ಕ್ಕೂ ಹೆಚ್ಚಿನಷ್ಟು ಕಂಪನಿಗಳು 1998-99 ರ ಮೊದಲ ಮೂರು ತಿಂಗಳಲ್ಲಿ ನಕಾರಾತ್ಮಕ ಬೆಳವಣಿಗೆ ತೋರಿಸು ತ್ತಿವೆಯಂತೆ.

ಐವತ್ತು ಬಹುಮುಖ್ಯ ಕಂಪನಿಗಳು ತಮ್ಮ ಲಾಭದಲ್ಲಿ ತೀವ್ರ ಕುಸಿತ ಅನುಭವಿಸಿವೆಯಂತೆ. ನಲವತ್ತು ಕಂಪನಿ ಗಳು ತೀವ್ರ ಹಾನಿ ಅನುಭವಿಸಿವೆಯಂತೆ. ಒಂದು ಅಧ್ಯಯನಕ್ಕೆ ಆಯ್ದುಕೊಂಡ 180 ಕಂಪನಿಗಳಲ್ಲಿ ಬರೀ 90 ಮಾತ್ರ ತಮ್ಮ ಲಾಭದಲ್ಲಿ ಅಲ್ಪ ಸ್ವಲ್ಪ ಬೆಳವಣಿಗೆ ತೋರಿಸಿವೆಯಂತೆ. ಈ ಕಂಪನಿಗಳು ಬ್ಯಾಂಕಿಂಗ್, ಮಾಹಿತಿ ತಂತ್ರಜ್ಞಾನ ಮತ್ತು ಔಷಧಗಳ ವಲಯದಲ್ಲಿರುವಂತಹವು.

ಸಿಮೆಂಟ್, ಉಕ್ಕು, ಆಟೋಮೊಬೈಲ್, ಎಂಜಿನಿಯರಿಂಗ್ ಮತ್ತು ಪೇಪರ್ ಕಂಪನಿಗಳು ಹಾನಿ ಅನುಭವಿಸಿವೆಯಂತೆ. ಟೆಲ್ಕೊ ಎಂಬ ಟಾಟಾಗಳ ಟ್ರಕ್, ಬಸ್ ಮತ್ತು ಇತರ ವಾಹನ ಉತ್ಪಾದಿಸುವ ಕಂಪನಿ ಹಾನಿ ಅನುಭವಿಸಿದೆ.

ಇಡೀ ಸರ್ಕಾರವೇ ಈ ಕಂಪನಿಗಳ ಸೇವೆಯಲ್ಲಿರುವಾಗಲೂ ಇವು ಹಾನಿ ಅನುಭವಿಸುತ್ತಿರುವುದು ವಿಪರ್ಯಾಸವಲ್ಲವೆ?

ವಿದ್ಯುತ್ ದರ ವಿರೋಧಿಸಿ ರಾಜ್ಯದ ವಿವಿಧೆಡೆ ಸಿಪಿಐ(ಎಂ) ಪ್ರತಿಭಟನೆ



ರಾಜ್ಯ ಸರ್ಕಾರವು ಇತ್ತೀಚಿಗೆ ಏಕಾಏಕಿಯಾಗಿ ಶೇ 5 ರಿಂದ 20 ರಷ್ಟು ವಿದ್ಯುತ್ ದರ ಏರಿಸಿರುವುದನ್ನು ವಿರೋಧಿಸಿ ಸಿಪಿಐ(ಎಂ) ನ ರಾಜ್ಯ ಸಮಿತಿಯು ಜುಲೈ 22 ರಂದು ಪ್ರತಿಭಟನೆಗೆ ಕರೆ ನೀಡಿದ್ದ ಹಿನ್ನೆಲೆಯಲ್ಲಿ ರಾಜ್ಯದ ವಿವಿಧೆಡೆ ನಡೆದ ಪ್ರತಿಭಟನೆಗಳ ವರದಿ.

ಧಾರವಾಡ: ಸಿಪಿಐ(ಎಂ) ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಹಳೇ ಹುಬ್ಬಳ್ಳಿ ಕೆ.ಇ.ಬಿ. ಕಛೇರಿಯ ಮುಂದೆ ನೂರಾರು ಜನರು ಪ್ರತಿಭಟನಾ ಪ್ರದರ್ಶನ ನಡೆಸಿದರು.

ವಿದ್ಯುತ್ ಸರಬರಾಜಿನಲ್ಲಿ ಉಂಟಾಗುವ ಸೋರಿಕೆ ತಡೆಗಟ್ಟುವಂತೆ, ವಿದ್ಯುತ್ ಬಿಲ್ಲುಗಳ ಬಾಕಿ ಹಣವನ್ನು ಶ್ರೀಮಂತ ಗ್ರಾಹಕರಿಂದ ವಸೂಲಿಗೆ ಕಠಿಣ ಕ್ರಮ ಕೈಗೊಳ್ಳುವಂತೆ, ವಿದ್ಯುತ್ ಉತ್ಪಾದನೆ ಹೆಚ್ಚಿಸುವಂತೆ ಒತ್ತಾಯಿಸುವ ಮನವಿಯನ್ನು ಕೆ.ಇ.ಬಿ. ಅಧಿಕಾರಿಗೆ ಸಲ್ಲಿಸಲಾಯಿತು.

ಸಿಪಿಐ(ಎಂ) ಜಿಲ್ಲಾ ಧುರೀಣರಾದ ಸಿ.ಆರ್.ಭಟ್, ಎಂ.ಬಿ.ಕಟ್ಟಿ ಪ್ರದರ್ಶನಕಾರರನ್ನುದ್ದೇಶಿಸಿ ಮಾತನಾಡಿದರು. ವಿವಿಧ ಕಾರ್ಮಿಕ ಸಂಘಟನೆಗಳ ಮುಖಂಡರಾದ ಬಿ.ಇ.ಈಳಿಗೇರ, ಎನ್.ಎಂ.ಪಾಟೀಲ, ಕೆ.ಬಿ.ಜೋಶಿ, ಬಿ.ಎಂ.ದೊಡ್ಡ ಮನಿ ಮುಂತಾದವರು ಹಾಜರಿದ್ದರು.

ಕುಂದಾಪುರ: ಸಿಪಿಐ(ಎಂ) ತಾಲುಕು ಸಮಿತಿ ನೇತೃತ್ವದಲ್ಲಿ ಕುಂದಾಪುರ ವಿಭಾಗದ ವಿದ್ಯುತ್ ಕಛೇರಿ ಮುಂದೆ 500 ಕ್ಕೂ ಹೆಚ್ಚಿನ ಸಿಪಿಐ(ಎಂ) ಕಾರ್ಯಕರ್ತರು ಹಾಗೂ ಕಾರ್ಮಿಕರು ಮೆರವಣಿಗೆ ಮುಖಾಂತರ ಪ್ರತಿಭಟನಾ ಪ್ರದರ್ಶನನ ನಡೆಸಿದರು.

ಏರಿಸಿರುವ ದರವನ್ನು ಕೂಡಲೇ ಇಳಿಸುವಂತೆ ಒತ್ತಾಯಿಸಿದ ಪ್ರತಿಭಟನಾಕಾರರು ಪಂಪ್ ಸೆಟ್‌ಗಳಿಗೆ ಈಗಾಗಲೇ ವಿಧಿಸಿರುವ ಅಶ್ವಶಕ್ತಿಗೆ ರೂ. 300 ದರವನ್ನು 100 ರೂ.ಗೆ ಇಳಿಸುವಂತೆ ಆಗ್ರಹಿಸಿ ವಿದ್ಯುತ್ ಮಂಡಳಿಯ ಕಾರ್ಯನಿರ್ವಾಹಕ ಅಭಿಯಂತರರಿಗೆ ಮನವಿ ಸಲ್ಲಿಸಲಾಯಿತು.

ಅಬ್ರಹಾಂ ಕರ್ಕಡ, ಕೆ.ಶಂಕರ್, ಸಿ.ನಾರಾಯಣ, ಯು.ದಾಸಭಂಡಾರಿ, ವಿ.ನರಸಿಂಹ, ಮಹಾಬಲ ಒಡೇರ ಹೋಬಳಿ, ಹೆಚ್.ನರಸಿಂಹ ಮತ್ತು ವಿ.ಕೊರಗರವರು ನೇತೃತ್ವ ವಹಿಸಿದ್ದರು. ಕೆ.ಶಂಕರ್ ಸಭೆಯನ್ನುದ್ದೇಶಿಸಿ ಮಾತನಾಡಿ ಸರ್ಕಾರದ ಜನವಿರೋಧಿ ನೀತಿಯನ್ನು ಬಲವಾಗಿ ಖಂಡಿಸಿದರು.

ಉಡುಪಿ: ರಾಜ್ಯ ಸರ್ಕಾರವು ಮೂರೂವರೆ ವರ್ಷಗಳಲ್ಲಿ ಮೂರುಬಾರಿ ವಿದ್ಯುತ್ ದರ ಏರಿಸಿ, ಜನಸಾಮಾನ್ಯರಿಗೆ ಮುಟ್ಟಿಕೊಳ್ಳುವಂತ ಶಾಕ್ ನೀಡಿದೆ. ದೊಡ್ಡ ಉದ್ದಿಮೆಗಳಿಂದ ಕೆ.ಇ.ಬಿ.ಗೆ ಬರಬೇಕಾದ ಕೋಟಿಗಟ್ಟಲೆ ರೂಪಾಯಿ ಬಾಕಿಗೆ ವಸೂಲಿ ಕ್ರಮ ಕೈಗೊಳ್ಳುವ ಬದಲು ಬೆಲೆ ಏರಿಸಿದರೆ, ಕೇಂದ್ರ ಸರ್ಕಾರವು ಎಲ್ಲಾ ರೀತಿಯ ಸಬ್ಸಿಡಿಗಳಿಂದ ಉಂಟಾಗುವ ಕೊರತೆಗಳಿಗೆ ರಾಜ್ಯ ಸರ್ಕಾರವೇ ತುಂಬುವಂತೆ ಆದೇಶ ಹೊರಡಿಸಿರುವುದು ಜನಸಾಮಾನ್ಯರನ್ನು ಬಲಿಗೊಡುವುದೇ ಆಗಿದೆ ಎಂದು ಸಿಪಿಐ(ಎಂ)ನ ತಾಲೂಕು ಕಾರ್ಯದರ್ಶಿ ಪಿ.ವಿಶ್ವನಾಥ ರೈ ಪ್ರತಿಭಟನಾಗಾರರನ್ನುದ್ದೇಶಿಸಿ ಮಾತನಾಡಿದರು.

ಎಸ್.ಸಾಧುಅಮೀನ್, ಸಂಜೀವ ನಾಯಕ್, ದೋಗುಸುವರ್ಣ, ಗುರುರಾಜ್ ಕೆ.ಶೆಟ್ಟಿಗಾರ್, ಶೇಖರ್ ಪೂಜಾರಿ, ಸತೀಶ್ ಶೆಟ್ಟಿ ಇವರ ನೇತೃತ್ವದಲ್ಲಿ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಕೆ.ಇ.ಬಿ. ಕಛೇರಿ ಮುಂದೆ ಪ್ರದರ್ಶನ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಗುಲ್ಬರ್ಗ: ಸಿಪಿಐ(ಎಂ)ಪಕ್ಷದ ನೂರಾರು ಕಾರ್ಯಕರ್ತರು ಕ.ವಿ.ಮ. ಮುಖ್ಯ ಅಭಿಯಂತರರ ಕಛೇರಿ ಮುಂದೆ ದರ ಏರಿಕೆ ವಿರುದ್ಧ ಘೋಷಣೆ ಕೂಗುವ ಮುಖಾಂತರ ಧರಣಿ ಸತ್ಯಾಗ್ರಹ ನಡೆಸಿದರು. ವಿದ್ಯುತ್ ಉತ್ಪಾದನೆಗೆ ಹೆಚ್ಚಿನ ಹಣ ತೊಡಗಿಸುವಂತೆ, ಗುಲ್ಬರ್ಗ ಜಿಲ್ಲೆಯ ನಾರಾಯಣ ಪುರ ಡ್ಯಾಂ ಬಿಜಾಪುರದ ಆಲಮಟ್ಟಿ ವಿದ್ಯುತ್ ಉತ್ಪಾದನೆಗೆ ಅವಕಾಶ ಕಲ್ಪಿಸಬೇಕು, ರಾಷ್ಟ್ರೀಯ ವಿದ್ಯುತ್ ಗ್ರಿಡ್ ನಿರ್ಮಿಸಿ, ಕೊರತೆ ಇರುವ ರಾಜ್ಯಗಳಿಗೆ ವಿದ್ಯುತ್ ಪೂರೈಸಬೇಕು, ಜೊತೆ ಜಿಲ್ಲೆಯ ಹಲವು ಪ್ರದೇಶಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸು ವಂತೆ ಒತ್ತಾಯಿಸುವ ಮನವಿಯನ್ನು ಮಂಡಳಿಯ ಅಧಿಕಾರಿಗಳಿಗೆ ಸಿಪಿಐ(ಎಂ) ಜಿಲ್ಲಾ ಸಮಿತಿ ಮುಖಂಡರಾದ ನೀಲಾ.ಕೆ ಸಲ್ಲಿಸಿದರು. ಅನ್ನುಬಾಯಿ, ವೀರೂಪಾಕ್ಷಪ್ಪ ತಡಕಲ, ಅಬ್ದುಲ ಖಾದರ ನೇತೃತ್ವ ವಹಿಸಿದ್ದರು.

ತುಮಕೂರು; ಸಿಪಿಐ(ಎಂ) ಹಾಗೂ ಸಿಐಟಿಯು ಜಿಲ್ಲಾ ಸಮಿತಿಗಳು ರಾಜ್ಯ ಸರ್ಕಾರದ ಬೆಲೆ ಏರಿಕೆಯನ್ನು ಬಲವಾಗಿ ಖಂಡಿಸಿವೆ.

ಹೊಸಪೇಟೆ: ಬಳ್ಳಾರಿ ಜಿಲ್ಲೆಯ ಹೊಸಪೇಟೆ ಸಿಪಿಐ(ಎಂ) ತಾಲುಕು ಸಮಿತಿ ನೇತೃತ್ವದಲ್ಲಿ ನಡೆದ ಪ್ರತಿಭಟನಾ ಮೆರವಣಿಗೆ ನಡೆಸಿ ಕೆ.ಇ.ಬಿ. ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು. ಸರ್ಕಾರವು ದೊಡ್ಡ ಉದ್ದಿಮೆದಾರರಿಂದ ಬರಬೇಕಾಗಿರುವ 1058 ಕೋಟಿ ರೂ. ಬಾಕಿ ವಸೂಲಿ ಮಾಡಿದೆ. ಬಡ ಗ್ರಾಹಕರ ಮೇಲೆ ಹೊರೆ ಹೇರಿರುವುದು ಖಂಡನೀಯ ಎಂದರು.

ಸಭೆಯನ್ನುದ್ದೇಶಿಸಿ ಡಿವೈಎಫ್ಐ ನ ಎಸ್. ಅಶೋಕ್, ಅಂಗನವಾಡಿಯ ನಾಗರತ್ನಮ್ಮ, ಕೆ.ಉಡೇದಪ್ಪ ಮಾತನಾಡಿ ಕೂಡಲೇ ಬೆಲೆ ಇಳಿಸುವಂತೆ ಆಗ್ರಹಿಸಿದರು.

ಎಂ.ಕರುಣಾನಿಧಿ ಮನವಿ ಸಲ್ಲಿಸಿದರೆ ಆಟೋಚಾಲಕರ ಸಂಘದ ಕೊಟ್ರೇಶ್, ರಾಮಚಂದ್ರ ಬಾಬು ಹಾಗೂ ಅಂಗನವಾಡಿ ನೌಕರರ ಸಂಘದ ಕೆಂಚಮ್ಮ ಮುಂತಾದವರು ಮೆರವಣಿಗೆ ನೇತೃತ್ವ ವಹಿಸಿದ್ದರು.

ಕರ್ನಾಟಕದಲ್ಲಿ ಕಳೆದವಾರ

ಜುಲೈ-31

- ಕಾವೇರಿ:ಕೇಂದ್ರ ಕರಡು ಯೋಜನೆಗೆ ರಾಜ್ಯದ ತಿರಸ್ಕಾರ
- ಸತತ ನೆಗಸು ಮಳೆಯಿಂದ ನಲುಗುತ್ತಿರುವ ಕರಾವಳಿ
- ಕೆ.ಜಿ.ಹಳ್ಳಿ ಗಲಭೆಯಲ್ಲಿ ಐ.ಎಸ್.ಐ ಕೈವಾಡ ಪತ್ತೆ.
- ದಂತ ವೈದ್ಯ ಅಧಿಕ ಶುಲ್ಕಕ್ಕೆ ಹೈಕೋರ್ಟ್ ತಡೆ

ಆಗಸ್ಟ್-1

- ಕಾವೇರಿ ವಿವಾದ ಕುರಿತು ಕೇಂದ್ರದ ಪರಿಷ್ಕೃತ ಕರಡಿಗೆ ರಾಜ್ಯದ ತಿರಸ್ಕಾರ. ಹೊಸ ಕಲಂಗಳು ನಮಗೆ ಒಪ್ಪಿಗೆ ಇಲ್ಲ-ಕಾನೂನು ಸಚಿವರು.
- ಬಿಜಾಪುರದ ಜೆಮ್ ಗ್ರಾನೈಟ್‌ನಿಂದ ವಶಪಡಿಸಿಕೊಂಡ 50 ಕೋಟಿ ರೂ ಮೌಲ್ಯದ ಇಳಕಲ್ ಗ್ರಾನೈಟ್ ಕಲ್ಲುಗಳನ್ನು ಹರಾಜು ಮಾಡಲು ರಾಜ್ಯ ಸರ್ಕಾರದ ನಿರ್ಧಾರ.

ಆಗಸ್ಟ್-2

- ಕಾವೇರಿ ನೀರು ಬಳಕೆಗೆ ಕೇಂದ್ರದ ಯಾವುದೇ ಮಿತಿಯನ್ನು ರಾಜ್ಯ ಒಪ್ಪದು ಇದು ನಮ್ಮ ಸ್ವಾಯತ್ತತೆಗೆ ಅಡ್ಡಿತರುತ್ತದೆ ಎಂದು ಮುಖ್ಯಮಂತ್ರಿಗಳು.
- ವೃತ್ತಿ ಶಿಕ್ಷಣಕ್ಕೆ ಪ್ರವೇಶ ನೀಡುವ ಸಿ.ಇ.ಟಿ ಪರೀಕ್ಷೆಯ ಅವ್ಯವಹಾರದಲ್ಲಿ ಪ್ರಭಾವಿ ಕುಟುಂಬಗಳ 16 ವಿದ್ಯಾರ್ಥಿಗಳು ಸಿಕ್ಕಿಕೊಂಡಿದ್ದಾರೆ.

ಆಗಸ್ಟ್-3

- ಪ್ರಕೃತಿ ವಿಕೋಪ ಪರಿಹಾರಕ್ಕೆ ಪ್ರಾಧಿಕಾರ ರಚನೆ
- ಬಂಗಾರ ಪೇಟೆಯಲ್ಲಿ ಅಂಬೇಡ್ಕರ್ ಪ್ರತಿಮೆ ಭಗ್ನ, ಕೋಲಾರ ಜಿಲ್ಲೆ ಉದ್ರಿಕ್ತ
- ನೂತನ ಜಿಲ್ಲೆ ವಿವಾದ : ಶಹಾಪೂರ ಸಂಪೂರ್ಣ ಬಂದ್, ಜೇವರ್ಗಿಯಲ್ಲಿ ರಸ್ತೆ ತಡೆ, ಬಂಧನ.

ಆಗಸ್ಟ್-4

- ಬೆಂಗಳೂರು ನಗರದಲ್ಲಿ ಭಾರೀ ಮಳೆಗೆ ಯುವಕನ ಬಲಿ, ಮನೆಗಳ ಕುಸಿತ. ಜನ ಜೀವನ ಏರುಪೇರು.
- ಕಾವೇರಿ ಸಮನ್ವಯ ಸಮಿತಿ ರಚನೆಗೆ ರಾಜ್ಯದ ಸಲಹೆ
- ಪ್ರತಿಮೆ ಭಗ್ನ ಹಿನ್ನೆಲೆಯಲ್ಲಿ ಕೋಲಾರ ಜಿಲ್ಲೆ ಹಲವೆಡೆ ಬಂದ್
- ಕರ್ನಾಟಕ ಒಲಂಪಿಕ್ಸ್ ಮಿನಿಗೇಮ್ಸ್ ಆರಂಭ

ಆಗಸ್ಟ್-5

- ಕಾವೇರಿ ಪ್ರಾಧಿಕಾರ ರಚನೆಗೆ ರಾಜ್ಯ ಸರ್ವ ಪಕ್ಷಗಳ ಒಮ್ಮತದ ವಿರೋಧ
- ಅಂಬೇಡ್ಕರ್ ಪ್ರತಿಮೆ ಭಗ್ನ ಖಂಡಿಸಿ ಕೋಲಾರ, ಹುಬ್ಬಳ್ಳಿ ಬಂದ್
- ಹೊಸ ಜಿಲ್ಲೆ ವಿವಾದ. ಜೇವರ್ಗಿ ಬಂದ್ -ಶಹಾಪೂರ ಕಛೇರಿಗಳಿಗೆ ಬೀಗ ಮುದ್ರೆ ಸಾವಿರಾರು ಬಂಧನ
- ಕೆ.ಎಸ್.ಆರ್.ಟಿ.ಸಿ ಬಸ್ಸಿಗೆ ಹಸಿರು ಬಣ್ಣ -ನ್ಯಾಯ ಮೂರ್ತಿಗಳ ಆದೇಶ

ಆಗಸ್ಟ್-6

- ಕಾವೇರಿ ಉನ್ನತ ಮಟ್ಟದ ಸಮಿತಿಗೆ ತಾತ್ವಿಕ ಒಪ್ಪಿಗೆ
- ಎಸ್. ಬಂಗಾರಪ್ಪ ಮತ್ತೆ ಕಾಂಗ್ರೆಸ್ ಪಕ್ಷಕ್ಕೆ
- ಬಂಗಾರ ಪೇಟೆಯಲ್ಲಿ ನೂತನ ಪ್ರತಿಮೆ ಅನಾವರಣ
- ಪ್ರತಿಮೆ ಭಗ್ನ-ಚಿಂಚೋಳಿ ಬಂದ್, ಜೇವರ್ಗಿ, ಚಿತ್ತಾಪುರದಲ್ಲಿ ರಸ್ತೆ ತಡೆ
- ಮಿನಿ ಒಲಂಪಿಕ್ಸ್-ರೈಲ್ವೆ ತಂಡಕ್ಕೆ ಸಮಗ್ರ ಪ್ರಶಸ್ತಿ, ಎರಡು ರಾಜ್ಯ ದಾಖಲೆ.

ವಿಶ್ವಖ್ಯಾತ ಮೈಸೂರು ಅರಮನೆ ಯನ್ನು ಸರ್ಕಾರ ವಹಿಸಿಕೊಳ್ಳಲು ಎಲ್ಲಾ ಅಡೆತಡೆಗಳು ನಿವಾರಣೆಯಾಗಿದ್ದರೂ ಸಂಬಂಧ ಪಟ್ಟ ಕಡತ ಕೇಂದ್ರ ಗೃಹ ಮಂತ್ರಿ ಅಡ್ವಾನಿಯವರ ಮೇಜಿನ ಮೇಲೆ ಧೂಳು ತಿನ್ನುತ್ತಿದೆಯೆಂದು ಆಗಸ್ಟ್ 2 ರ ಟೈಂಸ್ ಆಫ್ ಇಂಡಿಯಾ ವರದಿ ಮಾಡಿದೆ.

ರೈತರಿಗೆ ಪರಿಹಾರ ನೀಡಲು ಆಗ್ರಹಿಸಿ ಬೀದರ್ ಬಂದ್

ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಕರ್ನಾಟಕ ರಾಜ್ಯ ರೈತ ಸಂಘ(ಎಐಕೆಎಸ್) ಗಳ ಜಿಲ್ಲಾ ಸಮಿತಿಗಳು ರೈತರಿಗೆ ಪರಿಹಾರ ನೀಡುವಂತೆ ಜಂಟಿ ಹೋರಾಟ ಹಾಗೂ ಜೂನ್ 30 ರಂದು ಬಂದ್‌ಗೆ ಕರೆ ನೀಡಿದ್ದ ಹಿನ್ನೆಲೆಯಲ್ಲಿ ಸಂಪೂರ್ಣ ಯಶಸ್ವಿಯಾಯಿತು.

ಬೀದರ್ ಬಂದ್ ನೇತೃತ್ವ ವಹಿಸಿದ್ದ ಮಾರುತಿ ಮಾನಪಡೆ ಸಭೆಯನ್ನುದ್ದೇಶಿಸಿ ಮಾತನಾಡಿ ಕೇಂದ್ರ-ರಾಜ್ಯ ಹಾಗೂ ಜಿಲ್ಲಾ ಆಡಳಿತ ರೈತರ ವಿರೋಧಿಯಾಗಿದೆ ಎಂದರು. ಬಿ.ಜಿ.ಶೆಟಕಾರ, ಬಸವರಾಜ ತಂಬಾಕೆ, ಮನ್ಮಥಪ್ಪ ಕುಂದೆ, ಲಲಿತಾ, ಮಾಳಪ್ಪ ಅಡಸಾರೆ ಮುಂತಾದವರು ಮಾತನಾಡಿದರು. ಸಭೆಯ ಮೊದಲು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಸರ್ಕಾರದ ರೈತ ವಿರೋಧಿ ನೀತಿಗಳ ವಿರುದ್ಧ ಘೋಷಣೆ ಕೂಗಿದರು. ಸದನ ಸಮಿತಿ ಶಿಫಾರಸ್ಸಿನಂತೆ ರೈತರಿಗೆ ಪರಿಹಾರ ನೀಡಬೇಕು, ತೊಗರಿ ಬೆಳೆಗೆ ಪೂರ್ಣ ಪರಿಹಾರ ಹಣ ನೀಡ ಬೇಕು. ಬಿತ್ತನೆಗಾಗಿ ರೈತರಿಗೆ 5 ಸಾವಿರ ಸಾಲ ನೀಡಬೇಕು, ಕೃಷಿ ಕೂಲಿಕಾರರಿಗೆ ಕೆಲಸ ಒದಗಿಸಲು ಬರಗಾಲ ಪರಿಹಾರ ಕಾಮಗಾರಿ ಆರಂಭಿಸಬೇಕು ಹಾಗೂ ನೀರಾವರಿ ಯೋಜನೆಗಳನ್ನು ಕೂಡಲೇ ಅನುಷ್ಠಾನಕ್ಕೆ ತರಬೇಕೆಂಬ ಬೇಡಿಕೆ ಇಟ್ಟು ಬಂದ್ ಆಚರಿಸಲಾಯಿತು.

ರೈತ ಸಂಘದ ಗಣಿ ಘಟಕ ಉದ್ಘಾಟನೆ

ಅದೊಂದು ಅಪೂರ್ವ, ಉತ್ಸಾಹದಾಯಕ ಕಾರ್ಯಕ್ರಮ. 1946 ರಿಂದಲೂ ಭೂಮಾಲಕರ ವಿರುದ್ಧ ಹೋರಾಡಿದ ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲೂಕಿನ ಗಣಿ ಗ್ರಾಮದಲ್ಲಿ ರೈತಸಂಘದ ಘಟಕ ಉದ್ಘಾಟನೆ, ಗಣಿ ದೇಸಾಯಿಯರ ವಿರುದ್ಧ ಹೋರಾಡಿ ರಾಜೇಸಾಬ ದೊಡ್ಡಮನಿಯವರು ಹುತಾತ್ಮರಾದ ಗ್ರಾಮ ಕೃಷ್ಣಾ ಮೇಲ್ದಂಡೆ ಯೋಜನೆಯಿಂದಾಗಿ ಸಂಪೂರ್ಣ ಮುಳುಗಿ ಹೊಸ ಗ್ರಾಮವಾಗಿ ತಲೆ ಎತ್ತಿದ ಗಣಿ ಗ್ರಾಮದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಗ್ರಾಮ ಘಟಕದ ಸ್ಥಾಪನೆಯ ಸಂಭ್ರಮದ ಉದ್ಘಾಟನಾ ಸಮಾರಂಭ. ಭೂಮಾಲಕರ ವಿರುದ್ಧ ಹೋರಾಡಿದ ಸುತ್ತಮುತ್ತರ ಗ್ರಾಮದ ರೈತರ ಸಮಾಗಮ. ದೇಸಗತಿ ವಿರುದ್ಧ ರೈತರನ್ನು ಸಂಘಟಿಸಿ ನಿರಂತರ ಹೋರಾಡಿ ರೈತರಿಗೆ ಭೂಮಿಯ ಹಕ್ಕು ಕೊಡಿಸಿರುವ ಸ್ವಾತಂತ್ರ್ಯ ಯೋಧ ಎನ್.ಕೆ.ಉಪಾಧ್ಯಾಯರಿಂದ ಘಟಕದ ಉದ್ಘಾಟನೆ. ಬಾಗೇವಾಡಿ ತಾಲೂಕಿನಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ನಡೆದ ರೈತರ ಧೀರ ಹೋರಾಟಗಳನ್ನು ಮೆಲುಕು ಹಾಕುತ್ತ, ಜಿಲ್ಲೆಯ ಬಹುಜನ ಸಮಾಜಕ್ಕೆ ಅನುಕೂಲವಾಗುವ ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಅಭಿವೃದ್ಧಿ ಯೋಜನೆಗಳಿಂದಾಗಿ ಇಡೀ ಗ್ರಾಮವನ್ನೇ ಕಳೆದುಕೊಂಡಿದ್ದರೂ ಕೂಡ ದುಃಖಪಡದೆ ರೈತರ ಸಮಸ್ಯೆಗಳನ್ನು ಎತ್ತಿ ಹಿಡಿದು ಹೋರಾಡಬೇಕೆಂದು ಕರೆಯಿತ್ತರು. ರೈತ ಸಂಘದ ಅಧ್ಯಕ್ಷ ಭೀಮಸಿ ಕಲಾದಗಿಯವರು ನೀರಾವರಿ ಯೋಜನೆಗಳ ಕುರಿತು ಸರಕಾರದ ಮಲತಾಯಿ ಧೋರಣೆಯನ್ನು, ಅದರಲ್ಲಿ ಅಡಗಿರುವ ಭ್ರಷ್ಟಾಚಾರವನ್ನೂ ಬಯಲಿಗೆಳೆದು ರೈತರ ಬಲಿಷ್ಠ ಸಂಘಟನೆ ಮೂಡಿಬರಬೇಕೆಂದರು. ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಅಣ್ಣಾರಾಯ ಈಳಿಗೇರ ಅವರು ಹೊಸ ಆರ್ಥಿಕ ನೀತಿಯಿಂದ, ರೈತರಿಗಾಗುತ್ತಿರುವ ಅನ್ಯಾಯವನ್ನು ಬಯಲಿಗೆಳೆದು, ಅದರ ಪರಿಣಾಮವಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವಂಥ ಗಂಭೀರ ಪರಿಸ್ಥಿತಿಯತ್ತ ಗಮನ ಸೆಳೆದರು. ಮಹಿಳಾ ಸಂಘಟನೆಯ ಸುರೇಖಾ ರಜಪೂತ ರೈತರ ಹೋರಾಟಕ್ಕೆ ಬೆಂಬಲ ಕೋರಿ ಮಾತನಾಡಿದರು. ಪಟ್ಟಣಶೆಟ್ಟಿಯವರು ಸ್ವಾಗತ ಕೋರಿ, ರೈತರಬೇಡಿಕೆಗಳನ್ನು ಮಂಡಿಸಿದರು. 25 ಜನರ ರೈತ ಸಂಘದ ಘಟಕ ರಚನೆ ಮಾಡಲಾಯಿತು.

ದೇವದುರ್ಗದಲ್ಲಿ ಅಂಗನವಾಡಿ ನೌಕರರ ಯಶಸ್ವಿ ಹೋರಾಟ

ಜುಲೈ 20 ರಂದು ಅಂಗನವಾಡಿ ನೌಕರರ ಸಂಘದ (CITU) ತಾಲೂಕು ಸಮಿತಿಯು ತಾಲೂಕಿನ ಕಾರ್ಯಕರ್ತೆ/ಸಹಾಯಕಿಯರಿಗೆ ಯಲ್ಲಮ್ಮನವರು ಕಿರುಕುಳ ಕೊಡುವುದನ್ನು ವಿರೋಧಿಸಿ ಹಾಗೂ ಡಿಪಿಯಿಪಿ ವೇತನ, ಪಲ್ಸ್‌ಪೋಲೀಯ ಹಣ ಕೊಡಬೇಕು, ಮತ್ತು ಸರಕಾರದ ಆದೇಶದಂತೆ 75 ರೂ ಸಾಂಬರ ಪದಾರ್ಥ ಹಣ ಕೊಡಬೇಕೆಂದು ಬೇಡಿಕೆಗಳನ್ನಿಟ್ಟು ಹೋರಾಟ ನಡೆಯಿತು. ಈ ಹೋರಾಟದಲ್ಲಿ 250 ಜನ ನೌಕರರು ಭಾಗವಹಿಸಿದ್ದರು. ತಹಶೀಲ್ದಾರರಿಗೆ ಮನವಿ ಪತ್ರ ಕೊಡಲಾಯಿತು. ಧರಣಿ ಕುಳಿತ ಸ್ಥಳಕ್ಕೆ ಸಹಾಯಕ ನಿರ್ದೇಶಕರು ಆಗಮಿಸಿ ಎಲ್ಲಾ ಬೇಡಿಕೆಗಳ ಬಗ್ಗೆ ದೀರ್ಘವಾಗಿ ಚರ್ಚಿಸಿ ಡಿಪಿಇಪಿ - ಪಲ್ಸ್ ಪೋಲೀಯೋ ಹಣ ಕೊಡುತ್ತೇವೆ ಎಂದು ಭರವಸೆ ನೀಡಿದರು. ಜೂನ್ ರಿಂದ ಆಗಸ್ಟ್ ತಿಂಗಳಿನ ... ಸಾಂಬರ ಪದಾರ್ಥ ಹಣ ಕೊಡುತ್ತೇವೆ ಎಂದು ಎಡಿ ಆಶ್ವಾಸನೆ ಕೊಟ್ಟರು.

ಈ ಹೋರಾಟದ ನೇತೃತ್ವವನ್ನು ಸಂಘದ ಗೌರವ ಅಧ್ಯಕ್ಷರಾದ ಪಿ.ಗಿರಿಯಪ್ಪ ಚನ್ನಮ್ಮ ಚಿಕ್ಕಲ್, ಸಂಗಮ್ಮಬಿರೆದಾರ ಮತ್ತು ಚನ್ನಮ್ಮ ಗೌರಂಪಲ್ಲಿ ಹಾಗೂ ರಂಗಮ್ಮ ವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ರಂಗಮ್ಮ ಪಿ.ಗಿರಿಯಪ್ಪ ಮಾತನಾಡಿದರು. ಬೆಂಬಲಿಸಿ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಬಸವನ ಗೌಡ ದೇಸಾಯಿ ವಕೀಲರು ಹಾಗೂ ಡಿವೈಎಫ್ಐ ಮುಖಂಡ ಸಿ.ಎಸ್.ನಾಡಗೌಡ ಮಾತನಾಡಿದರು.

ಅಂಗನವಾಡಿ ನೌಕರರ ತಾಲೂಕು ಸಮ್ಮೇಳನ

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು)ದ ಭಟ್ಕಳ ತಾಲೂಕು ಸಮ್ಮೇಳನವು ಶಿರಾಲಿಯಲ್ಲಿ ಇತ್ತೀಚೆಗೆ ನಡೆಯಿತು. ಯೋಜನೆ ಪ್ರಾರಂಭದಿಂದಲೂ ಪ್ರಾಮಾಣಿಕವಾಗಿ ದುಡಿಯುತ್ತ ಅಸಮಂಜಸವಾದ ವೇತನ ಪಡೆಯುತ್ತಿರುವ ನೌಕರರಿಗೆ ಉದ್ಯೋಗದ ಭದ್ರತೆಯಾಗಲಿ ಕನಿಷ್ಟ ಸೌಕರ್ಯಗಳನ್ನು ಈಡೇರಿಸದಿರು ವುದು ವಿಷಾದನೀಯವೆಂದು ಮುಖ್ಯ ಅತಿಥಿಗಳಾಗಿದ್ದ ರಾಜ್ಯ ಡಿ.ವೈ.ಎಫ್.ಐ ಅಧ್ಯಕ್ಷ ಶಾಂತರಾಂ ನಾಯಕ್ ಹೇಳಿದರು. ಎಲ್ಲಾ ಜನ ವಿಭಾಗದ ಬೆಂಬಲದೊಂದಿಗೆ ಪ್ರಬಲ ಹೋರಾಟ ನಡೆಸಿ ಬೇಡಿಕೆ ಈಡೇರಿಸಿಕೊಳ್ಳುವಂತೆ ಕರೆ ನೀಡಿದರು.

ನಾಗರತ್ನಾ ಪಡಿಯಾರರ ಅಧ್ಯಕ್ಷತೆಯಲ್ಲಿ ನಡೆದ ಸಮ್ಮೇಳನದಲ್ಲಿ ಜಿಲ್ಲಾ ಕಾರ್ಯದರ್ಶಿ ರಜನಿ ಹಬ್ಬು, ಸುಭಾಸ್ ಕೊಪ್ಪಿಕರ ಮಾತನಾಡಿ ಜಿಲ್ಲೆಯಲ್ಲಿ ಪ್ರಬಲ ಸಂಘಟನೆಯೊಡನೆ ಹೋರಾಟ ನಡೆಸಲು ಕರೆ ನೀಡಿದರು.

ನೂತನ ಪದಾಧಿಕಾರಿಗಳು

ಅಧ್ಯಕ್ಷರು-ಶ್ರೀದೇವಿ ಭಟ್, ಉಪಾಧ್ಯಕ್ಷರುಗಳು-ಶಾಂತಾ. ವಿ. ಕೊಂಡಿಯಾ ಪದ್ಮಾ ಖಾರ್ವಿ, ನಸೀಮಾ ಶೇಖ್, ಕಾರ್ಯದರ್ಶಿ ಗೀತಾ.ಪಿ. ನಾಯಕ್, ಸಹಕಾಯದರ್ಶಿಗಳು- ಸರೋಜಾ ಆಚಾರಿ, ಮಾದೇವಿ ದೇವಾಡಿಗ, ಮಂಜಮ್ಮ ಎನ್. ನಾಯ್ಕ್ ಹಾಗೂ ಖಜಾಂಚಿಯಾಗಿ ಶಕುಂತಲಾ ಶೆಟ್ಟಿ ಆಯ್ಕೆಗೊಂಡಿದ್ದಾರೆ.

ಕೊಡಗು ಪ್ರತ್ಯೇಕ ರಾಜ್ಯ : ಕೇಂದ್ರ ಸಚಿವರ ನಿಲುವಿಗೆ ಖಂಡನೆ

ಕೊಡಗನ್ನು ಪ್ರತೇಕ ರಾಜ್ಯವನ್ನಾಗಿಸಬೇಕೆಂದು ಕೊಡಗು ರಾಜ್ಯ ಮುಕ್ತಿ ಮೋರ್ಚಾ ನಡೆಸುತ್ತಿರುವ ಹೋರಾಟವನ್ನು ಮನ್ನಿಸುವಂತೆ ಪ್ರಧಾನಿ ಯವರಿಗೆ ಶಿಫಾರಸ್ಸು ಪತ್ರ ಬರೆದಿರುವ ಕೇಂದ್ರ ಪೆಟ್ರೋಲಿಯಂ ಖಾತೆ ಸಚಿವರ ನಿಲುವನ್ನು ವಿರಾಜಪೇಟೆ ಸಿಪಿಐ(ಎಂ) ಸಮಿತಿ ಬಲವಾಗಿ ಖಂಡಿಸಿ, ಇದು ಯಾವುದೇ ಪೂರ್ವಾಪರ ವಿವೇಚನೆಯಿಲ್ಲದ ಶಿಫಾರಸ್ಸು ಪತ್ರವೆಂದು ವಿರೋಧಿಸಿದೆ.

ಉನ್ನತ ತನಿಖೆಗೆ ಒತ್ತಾಯ

ಕಳೆದ ನಾಲ್ಕು ವರ್ಷಗಳಿಂದಲೂ ಕರ್ನಾಟಕ ರಾಜ್ಯ ಕೊಡವ ಸಾಹಿತ್ಯ ಅಕಾಡೆಮಿಯಲ್ಲಿ ನಡೆದಿದೆಯೆನ್ನಲಾದ ಲಕ್ಷಾಂತರ ರೂ.ಗಳ ಅವ್ಯವಹಾರದ ಬಗ್ಗೆ ಸರ್ಕಾರ ಉನ್ನತ ತನಿಖೆ ನಡೆಸಿ ಜಿಲ್ಲೆಯ ಜನತೆಯ ಮುಂದೆ ಸತ್ಯಾಸತ್ಯತೆಯನ್ನು ಇಡಬೇಕೆಂದು ವಿರಾಜಪೇಟೆ ಸಿಪಿಐ(ಎಂ) ಸಮಿತಿ ಒತ್ತಾಯಿಸಿದೆ.

ಹದಿನಾರನೆ ಮಹಾಧಿವೇಶನದತ್ತ

“ಮುಂಬರುವ ದಿನಗಳಲ್ಲಿ ಸಿ.ಪಿ.ಐ.(ಎಂ) ಮುಂದಿರುವ ಪ್ರಧಾನ ಕಾರ್ಯಭಾರವೆಂದರೆ ಮಾರ್ಚ್ ೧೯೯೮ ರಲ್ಲಿ ಕೇಂದ್ರದಲ್ಲಿ ಆರ್.ಎಸ್.ಎಸ್. ಮಾರ್ಗದರ್ಶನದ ಬಿ.ಜೆ.ಪಿ. ನೇತೃತ್ವದ ಸರಕಾ ಮೂಡಿಬರುವುದರೊಂದಿಗೆ ಪ್ರಭುತ್ವ ವ್ಯವಸ್ಥೆಯ ಮೇಲೆ ಹಾಗೂ ಸಮಾಜದ ಮೇಲೆ ತಮ್ಮ ಹಿಡಿತವನ್ನು ಬಹುಪಾಲು ಹೆಚ್ಚಿಸಿಕೊಂಡಿರುವ ಕೋಮು ಶಕ್ತಿಗಳ ವಿರುದ್ಧ ಹೋರಾಡುವುದು. ಈ ಹೋರಾಟವನ್ನು ಮುಂದೊಯ್ಯಲು ಹಾಗೂ ಜನಗಳ ಬದುಕಿನ ಮೇಲಿನ ಪ್ರಹಾರಗಳನ್ನು ಪ್ರತಿರೋಧಿಸಲು ಒಂದು ಮೂರನೇ ಪರ್ಯಾಯವನ್ನು ಮುಂದಿಡುವುದು ಅಗತ್ಯ. ಇದಕ್ಕಾಗ ಎಡ ಶಕ್ತಿಗಳು, ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯಾತೀತ ಶಕ್ತಿಗಳ ಐಕ್ಯತೆಯನ್ನು ಮತ್ತೆ ಬೆಸೆಯಬೇಕು. ಅದೇ ವೇಳೆಗೆ ಈ ಕಾರ್ಯತಂತ್ರವಷ್ಟೇ ವರ್ಗ ಶಕ್ತಿಗಳ ಬಲಾಬಲದಲ್ಲಿ ಒಂದು ತೀವ್ರಗಾಮಿ ಬದಲಾವಣೆ ಮಾಡಿ ಒಂದು ನಿಜವಾದ ಪರ್ಯಾಯವನ್ನು ತರಲು ಸಾಲದು. ನಿಜವಾದ ಪರ್ಯಾಯ ಬರಬೇಕಾದರೆ ಅದು ಬಂಡವಾಳಶಾಹಿ ಭೂಮಾಲಕ ಧೋರಣೆಗಳ ವಿರುದ್ , ಆಳುವ ವರ್ಗಗಳ ಸಿದ್ಧಾಂತಗಳ ವಿರುದ್ಧ ರಾಜಕೀಯ ಮತ್ತು ಸೈದ್ಧಾಂತಿಕ ಹೋರಾಟಗಳ ಮೂಲಕ ಬಲಗೊಳ್ಳುವ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯತೆಯಿಂದ ಮಾತ್ರವೇ ಸಾಧ್ ರಾಜಕೀಯವಾಗಿ, ಸೈದ್ಧಾಂತಿಕವಾಗಿ ಮತ್ತು ಸಂಘಟನಾತ್ಮಕವಾಗಿ ಪಕ್ಷದ ಎಲ್ಲಾ ಕೆಲಸ ಎಡ ಮತ್ತು ಪ್ರಜಾಪ್ರಭುತ್ವವಾದಿ ರಂಗವನ್ನು ಕಟ್ಟುವ, ಬಲಿಷ್ಟಗೊಳಿಸುವ ಕೇಂದ್ರ ಕಾರ್ಯಭಾರದ ಇರಬೇಕು”. ಇವು ಜುಲೈ ೨೭ರಂದು ಬಿಡುಗಡೆಗೊಳಿಸಿದ ಸಿ.ಪಿ.ಐ.(ಎಂ)ನ ಹದಿನಾರನೇ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯದ ಮುಖ್ಯ ಅಂಶಗಳು ಎಂದು ಕಳೆದ ಸಂಚಿಕೆಯಲ್ಲಿ ಓದಿರುವಿರಿ. ಈ ಕರಡಿನ ಸಾರಾಂಶವನ್ನು ನಮ್ಮ ಓದುಗರಿಗಾಗಿ ಇಲ್ಲಿ ಕೊಡುತ್ತಿದ್ದೇವೆ.

ಕೋಮುವಾದ ಮತ್ತು ಉದಾರೀಕರಣದ ಅವಳಿ ಪಿಡುಗುಗಳ ವಿರುದ್ಧ ಸಮರದಲ್ಲಿ ...

ಅಂತರ್ರಾಷ್ಟ್ರೀಯ ಸನ್ನಿವೇಶ

ಸೋವಿಯತ್ ಒಕ್ಕೂಟದ ವಿಘಟನೆಯ ನಂತರ ಸಾಮ್ರಾಜ್ಯಶಾಹಿ ಹರಿಯಬಿಟ್ಟ ಸೈದ್ಧಾಂತಿಕ ಆಕ್ರಮಣವನ್ನು ವಿಶ್ವಾದ್ಯಂತ ಪ್ರಗತಿಪರ ಶಕ್ತಿಗಳು ಪ್ರತಿರೋಧಿಸುತ್ತಿವೆ. ಇದನ್ನು ಸಿಪಿಐ(ಎಂ)ನ 15ನೇ ಮಹಾಧಿವೇಶನದ ನಂತರದ ಮೂರೂವರೆ ವರ್ಷದ ಘಟನೆಗಳು ದೃಢಪಡಿಸಿವೆ. ಆದರೆ ಈಗಾಗಲೇ ಗಮನಿಸಿದಂತೆ ವಿಶ್ವ ಸಮಾಜವಾದದ ಈ ಸೋಲುಗಳು ಬಂಡವಾಳಶಾಹಿಯ ವಿಸ್ತರಣೆಗೆ, ವರ್ಗ ಬಲಾಬಲ ತಾತ್ಕಾಲಿಕವಾಗಿ ಸಾಮ್ರಾಜ್ಯ ಶಾಹಿಯ ಪರವಾಗಿ ಪಲ್ಲಟಗೊಳ್ಳಲು ಒಂದು ಅವಕಾಶ ಒದಗಿಸಿದೆ.

ಆದರೂ ಈ ಅವಧಿಯಲ್ಲಿ ತಾನು ಮಾನವ ಕುಲದ ಮೂಲಭೂತ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಅಸಮರ್ಥ ಎಂದು ಬಂಡವಾಳಶಾಹಿ ಇನ್ನಷ್ಟು ಸ್ಪಷ್ಟವಾಗಿ ತೋರಿಸಿಕೊಂಡಿದೆ. ಬಂಡವಾಳಶಾಹಿ ದೇಶಗಳಲ್ಲಿನ ಬೆಳವಣಿಗೆಯನ್ನು ಹೆಚ್ಚೆಂದರೆ “ಉದ್ಯೋಗ ರಹಿತ ಬೆಳವಣಿಗೆ” ಎಂದು ವರ್ಣಿಸಬಹುದಷ್ಟೆ. ನವ-ಉದಾರವಾದಿ ಆರ್ಥಿಕ ನೀತಿಗಳು ಮತ್ತು ಕಲ್ಯಾಣ ಕ್ರಮಗಳಿಗೆ ಖರ್ಚಿನಲ್ಲಿ ತೀವ್ರ ಕಡಿತದಿಂದಾಗಿ ದುಡಿಯುವ ಜನರ ಮೇಲೆ ಹೆಚ್ಚೆಚ್ಚು ಹೊರೆಗಳನ್ನು ಹಾಗೂ ಅಭದ್ರತೆ ಹೇರಲಾಗಿದೆ. ಇದರಿಂದಾಗಿ ಹಲವಾರು ಹೋರಾಟಗಳು ನಡೆದಿವೆ. ಮುಖ್ಯವಾಗಿ ಯುರೋಪಿನಲ್ಲಿ ಜನಗಳ ಅಸಂತೃಪ್ತಿಯಿಂದಾಗಿ ಹಲವಾರು ದೇಶಗಳ ಚುನಾವಣೆಗಳನ್ನು ಆಳುವ ಬಲಪಂಥೀಯ ಪಕ್ಷಗಳು ಸೋತಿವೆ, ಇದಕ್ಕೆ ತೀರಾ ಇತ್ತೀಚಿನ ಉದಾಹರಣೆ ಜಪಾನ್.

ಮೂರನೇ ಜಗತ್ತಿನ ದೇಶಗಳ ವಿರುದ್ಧ ಸಾಮ್ರಾಜ್ಯಶಾಹಿ ಒಂದು ಹೊಸ ಆರ್ಥಿಕ ಧಾಳಿಗಿಳಿದಿದೆ. ಹಣಕಾಸು ಬಂಡವಾಳದ ಜಾಗತೀಕರಣ ಮತ್ತು ಮೂರನೇ ಜಗತ್ತಿನ ಶೋಷಣೆಗೆ ಹೆಚ್ಚಿನ ಅವಕಾಶ, ಆಯ್ಕೆಯಿಂದಾಗಿ ಸಾಮ್ರಾಜ್ಯಶಾಹಿಗೆ ಇಂತಹ ಧಾಳಿ ನಡೆಸಲು ಸಾಧ್ಯವಾಗಿದೆ. ಮುಖ್ಯವಾಗಿ ಮೂರು ಪ್ರಮುಖ ಸಂಸ್ಥೆಗಳು ಐ.ಎಂ.ಎಫ್-ವಿಶ್ವಬ್ಯಾಂಕ್ ಮತ್ತು ವಿಶ್ವ ವ್ಯಾಪಾರ ಸಂಸ್ಥೆಯ ಮೂಲಕ ಈ ಧಾಳಿಗಳು ನಡೆಯುತ್ತಿವೆ. ಸಂರಚನಾ ಹೊಂದಾಣಿಕೆಯ ಹೇರಿಕೆ, ಶ್ರಮಶಕ್ತಿಯ ವಿಪರೀತ ಶೋಷಣೆ, ಸಾಮ್ರಾಜ್ಯ ಶಾಹಿಗಳು ಮತ್ತು ಬಹುರಾಷ್ಟ್ರೀಯ ಕಂಪನಿಗಳಿಂದ ನೈಸರ್ಗಿಕ ಸಂಪನ್ಮೂಲಗಳ ಕೊಳ್ಳೆ ಇವೆಲ್ಲಾ ಮೂರನೇ ಜಗತ್ತಿನ ಮೇಲೆ ಅಸಹನೀಯ ಹೊರೆ ಹಾಕುತ್ತಿವೆ.

ಐ.ಎಂ.ಎಫ್- ವಿಶ್ವಬ್ಯಾಂಕ್ ಸೂಚಿಸಿದ ಪಥ್ಯಗಳನ್ನು ಪಾಲಿಸಿದರೆ ಮಾತ್ರವೇ, ಮುಂದುವರಿದ ದೇಶಗಳ ಬಾಲಂಗೋಚಿಗಳಾಗಿದ್ದರೆ ಮಾತ್ರವೇ ಮೂರನೇ ಜಗತ್ತಿನ ದೇಶಗಳು ಮುನ್ನಡೆಯಲು ಸಾಧ್ಯ ಎಂದು ಸಾಮ್ರಾಜ್ಯಶಾಹಿ ಸೃಷ್ಟಿಸಿದ ಭ್ರಮೆ ಆಗ್ನೇಯ ಏಶ್ಯಾದ ದೇಶಗಳ ಆರ್ಥಿಕದ ಆಳವಾದ ಬಿಕ್ಕಟ್ಟಿನಿಂದ ನುಚ್ಚುನೂರಾಗಿದೆ.

ರಾಜಕೀಯವಾಗಿ, ಈ ಅವಧಿಯಲ್ಲಿ ಸಾಮ್ರಾಜ್ಯಶಾಹಿ ವಿಶ್ವದ ಮೇಲೆ ತನ್ನ ಆಧಿಪತ್ಯ ಹೇರಲು ಪ್ರಯತ್ನಿಸಿದ್ದನ್ನು ಕಂಡಿದ್ದೇವೆ. ನಾಟೋವನ್ನು ಪೂರ್ವದತ್ತ ವಿಸ್ತರಿಸಲು ವಿಶ್ವಸಂಸ್ಥೆಯನ್ನು ಹೈಜಾಕ್ ಮಾಡಲು, ಪಶ್ಚಿಮ ಏಶ್ಯಾ ಶಾಂತಿ ಪ್ರಕ್ರಿಯೆಯನ್ನು ಬುಡಮೇಲು ಮಾಡಲು ಪ್ರಯತ್ನಿಸಿದ ಸಾಮ್ರಾಜ್ಯಶಾಹಿ ಬಾಲ್ಕನ್ ದೇಶಗಳಲ್ಲಿ ಅಮೇರಿಕನ್ ಹಸ್ತಕ್ಷೇಪಕ್ಕೆ ಅವಕಾಶ ಮಾಡಿಕೊಡುವ ಡೇಟನ್ ಒಪ್ಪಂದವನ್ನು ಮಾಡಿಸಿತು. ಇವೆಲ್ಲ ಕೆಲವು ಉದಾಹರಣೆಗಳಷ್ಟೆ.

ಇಂತಹ ಸನ್ನಿವೇಶದಲ್ಲಿ ಅಸಮಾನ ವಿಶ್ವ ವ್ಯವಸ್ಥೆಯನ್ನು ಹೇರುವ ಸಾಮ್ರಾಜ್ಯಶಾಹಿಯ ಪ್ರಯತ್ನಗಳಿಗೆ ವಿಶ್ವವ್ಯಾಪ್ತಿ ಪ್ರತಿರೋಧವನ್ನು ಬಲಪಡಿಸುವ ಅಗತ್ಯವನ್ನು ಸಿಪಿಐ(ಎಂ) ಒತ್ತಿ ಹೇಳುತ್ತದೆ. ಸಿಪಿಐ(ಎಂ) ಸಾಮ್ರಾಜ್ಯಶಾಹಿಯ ವಿರುದ್ಧ ಈ ಅಂತರ್ರಾಷ್ಟ್ರೀಯ ಹೋರಾಟ ಹಾಗೂ ಸೌಹಾರ್ದದ ಅಭಿನ್ನ ಭಾಗ. ಶ್ರಮಜೀವಿ ವರ್ಗದ ಅಂತರ್ರಾಷ್ಟ್ರೀಯತೆಯ ಮೇಲೆ ನಿಂತಿರುವ ಪಕ್ಷವಾಗಿ ಸಿಪಿಐ(ಎಂ) ಅವಿರತವಾಗಿ ಭಾರತೀಯ ಜನತೆ ಸಾಮ್ರಾಜ್ಯಶಾಹಿ ವ್ಯವಸ್ಥೆಯ ವಿರುದ್ಧ ಹೋರಾಟದಲ್ಲಿ ಭಾರತೀಯ ಜನ ತಮ್ಮ ಪಾತ್ರವನ್ನು ವಹಿಸುವಂತೆ ಅವರನ್ನು ಅಣಿನೆರೆಸುತ್ತದೆ.

ರಾಷ್ಟ್ರೀಯ ಸನ್ನಿವೇಶ

ಈ ಅವಧಿಯಲ್ಲಿ ಎರಡು ಸಾರ್ವತ್ರಿಕ ಚುನಾವಣೆಗಳು ನಡೆದವು. ರಾಜಕೀಯ ಅಸ್ಥಿರತೆಯ ಅವಧಿ ನಮ್ಮ ಮುಂದಿದೆ ಎಂಬ 15ನೇ ಮಹಾಧಿವೇಶನದ ವಿಶ್ಲೇಷಣೆಯನ್ನು ಇವು ದೃಢಪಡಿಸಿವೆ. ಯಾವುದೇ ಒಂದು ಪಕ್ಷ ಬಹುಮತ ಪಡೆಯಲಾಗದೆ ಅಸ್ಥಿರತೆಯ ಅವಧಿ ಮುಂದುವರೆದಿದೆ. ಅಲ್ಲದೆ ಕಾಂಗ್ರೆಸ್ ತನ್ನ ಅಧಿಕಾರದ ಗುತ್ತೇದಾರಿಕೆಯನ್ನು ಕಳಕೊಳ್ಳುವುದರೊಂದಿಗೆ ಏಕ ಪಕ್ಷ ಆಳ್ವಿಕೆಯ ಅವಧಿಯೂ ಮುಗಿದಿದೆ.

ಮಾರ್ಚ್ 1998ರಲ್ಲಿ ಬಿಜೆಪಿ ನೇತೃತ್ವದ ಸರಕಾರ ಅಧಿಕಾರ ವಹಿಸುವುದರೊಂದಿಗೆ ದೇಶದಲ್ಲಿ ಒಂದು ಹೊಸ ಸನ್ನಿವೇಶ ಮೂಡಿಬಂದಿದೆ. ಮೊತ್ತ ಮೊದಲ ಬಾರಿಗೆ ಕೇಂದ್ರದಲ್ಲಿ ಅಧಿಕಾರ ಸೂತ್ರ ಆರ್.ಎಸ್.ಎಸ್.ನ ಮಾರ್ಗದರ್ಶನದಲ್ಲಿ ನಡೆಯುವ, ಕೋಮುವಾದಿಯೆಂದು ಸ್ಪಷ್ಟವಾಗಿರುವ ಒಂದು ಪಕ್ಷದ ಕೈಗಳಲ್ಲಿದೆ. ಇದು ನಮ್ಮ ರಾಜಕೀಯ ವ್ಯವಸ್ಥೆಯ ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಅಡಿಪಾಯಕ್ಕೆ, ರಾಷ್ಟ್ರೀಯ ಐಕ್ಯತೆಗೆ ಕೋಮುವಾದಿ ಬೆದರಿಕೆಯನ್ನು ವಿಪರೀತವಾಗಿ ಹೆಚ್ಚಿಸಿದೆ. ಇಷ್ಟೇ ಅಲ್ಲ, ಬಿಜೆಪಿ-ಆರ್.ಎಸ್.ಎಸ್. ಪ್ರತಿಗಾಮಿ ಸ್ವರೂಪದಿಂದಾಗಿ ದುಡಿಯುವ ಜನಗಳ ಮೇಲೆ ಹಾಗೂ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಮೇಲೆ ಇನ್ನೂ ದೊಡ್ಡ ಧಾಳಿಗಳನ್ನು ನಿರೀಕ್ಷಿಸಬಹುದು.

1998ರ ಚುನಾವಣೆಗಳಲ್ಲಿ ಪ್ರಧಾನ ಪಕ್ಷವಾಗಿ ಮೂಡಿಬಂದ ಬಿಜೆಪಿಯ ಸೈದ್ಧಾಂತಿಕ ಮತ್ತು ತಾತ್ವಿಕ ಅಡಿಪಾಯ ಇರುವುದು ಹಿಂದೂರಾಷ್ಟ್ರದ ದುಷ್ಟ ಸಿದ್ಧಾಂತದಲ್ಲಿ. ಇದು ಸಾಮ್ರಾಜ್ಯಶಾಹಿಯ ಮತ್ತು ಆಳುವ ವರ್ಗಗಳ ವಿಭಾಗಗಳ ಹಿತಾಸಕ್ತಿಗಳಿಗೆ ಅನುಕೂಲಕರವಾಗಿದೆ, ಆದರೆ ನಮ್ಮಂತಹ ವೈವಿಧ್ಯಮಯ ಹಾಗೂ ಬಹುಸ್ವರೂಪದ ದೇಶದಲ್ಲಿ ರಾಷ್ಟ್ರೀಯ ಐಕ್ಯತೆ ಮತ್ತು ಸಾಮಾಜಿಕ ಸಾಮರಸ್ಯವನ್ನು ಛಿದ್ರಗೊಳಿಸುತ್ತದೆ. ಬಿಜೆಪಿಯ ಈ ಸೈದ್ಧಾಂತಿಕ ನೆಲೆ ಸ್ವತಂತ್ರ ಭಾರತದ ಸಂವಿಧಾನದ ಆಧಾರವಾದ ಜಾತ್ಯಾತೀತ ಪ್ರಜಾಪ್ರಭುತ್ವದ ಮೂಲಭೂತ ನೆಲೆಗಳಿಗೆ ತದ್ವಿರುದ್ಧವಾದದ್ದು. ಆದ್ದರಿಂದ ಇವರು ಅಧಿಕಾರ ಸೂತ್ರ ಹಿಡಿದಿರುವುದು ರಾಷ್ಟ್ರೀಯ ಐಕ್ಯತೆಗೂ ಪ್ರಜಾಪ್ರಭುತ್ವ ಆಂದೋಲನಕ್ಕೂ ಮಹಾ ಅಪಾಯವನ್ನುಂಟುಮಾಡಿದೆ. ಬಿಜೆಪಿ ಅಧಿಕಾರಕ್ಕೆ ಬಂದಿರುವುದು ಒಂದು ಬಂಡವಾಳಶಾಹಿ ಪಕ್ಷದಿಂದ ಇನ್ನೊಂದು ಬಂಡವಾಳಶಾಹಿ ಪಕ್ಷ ಅಧಿಕಾರಕ್ಕೆ ಬಂದಿರುವ ಸಾಮಾನ್ಯ ಬದಲಾವಣೆಯಲ್ಲ. ಏಕೆಂದರೆ ಬಿಜೆಪಿ ಇತರ ಪಕ್ಷಗಳಂತಿರದೆ ಆರ್.ಎಸ್.ಎಸ್.ನ ರಾಜಕೀಯ ಅಂಗವಾಗಿದೆ.

ಎರಡು ಸಾರ್ವತ್ರಿಕ ಚುನಾವಣೆಗಳು ತೋರಿಸಿರುವಂತೆ ಎಡ ಪಕ್ಷಗಳು ಬಲಿಷ್ಠಗೊಳ್ಳದೆ, ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಮಧ್ಯಪ್ರವೇಶ ಸತತವಾಗಿ ಹೆಚ್ಚದೆ ತೀವ್ರ ಬದಲಾವಣೆ ತರಲು ಸಾಧ್ಯವಿಲ್ಲ. ಕೋಮುವಾದಿ ಮತ್ತು ಬಲಪಂಥೀಯ ಶಕ್ತಿಗಳು ಬಂಡವಾಳಶಾಹಿ-ಭೂಮಾಲಿಕ ಆಳ್ವಿಕೆ ಉಂಟುಮಾಡಿದ ಜನತೆಯ ಅಸಂತೃಪ್ತಿಯನ್ನು ತಮಗೆ ಬೇಕಾದಂತೆ ಇನ್ನು ಮುಂದೆಯೂ ಬಳಸುತ್ತಾರೆ. ಈ ಸಾಮೂಹಿಕ ಅಸಂತೃಪ್ತಿಗೆ ಮುಖ್ಯಕಾರಣವಾದ ಉದಾರೀಕರಣ ನೀತಿಗಳನ್ನು ಈ ಶಕ್ತಿಗಳೇ ಸ್ವತಃ ಬೆಂಬಲಿಸಿದರೂ ಹೀಗೆ ಮಾಡಲು ಅವುಗಳಿಗೆ ಸಾಧ್ಯವಾಗುತ್ತದೆ. ಇದಕ್ಕೆ ಕಾರಣ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ನಿರ್ಬಲತೆ. ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಹೆಚ್ಚೆಚ್ಚು ಮಧ್ಯ ಪ್ರವೇಶಿಸಲು ಸಾಧ್ಯವಾದಾಗ ಮಾತ್ರವೇ ಜನಗಳನ್ನು ತಪ್ಪು ದಾರಿಗೆಳೆಯುವ ಕೋಮುವಾದಿ ಮತ್ತು ವಿಚ್ಛಿದ್ರಕಾರದ ಶಕ್ತಿಗಳನ್ನು ತಡೆಯಲು ಸಾಧ್ಯ.

ಆರ್ಥಿಕ ಸನ್ನಿವೇಶ

1991ರಿಂದ ಬಂದ ಸರಕಾರಗಳೆಲ್ಲಾ ಐ.ಎಂ.ಎಫ್. ವಿಶ್ವ ಬ್ಯಾಂಕ್ ಆದೇಶದಂತೆ ಅನುಸರಿಸಿದ ಉದಾರೀಕರಣ ಮತ್ತು ‘ಸಂರಚನಾ ಹೊಂದಾಣಿಕೆ’ ನೀತಿಗಳನ್ನು ಬಿಜೆಪಿ ಸರಕಾರ ಇನ್ನೂ ಬಹಳ ಮುಂದೊಯ್ಯುತ್ತಿದೆ. ಅದು ‘ಸ್ವದೇಶಿ’ಯ ಪ್ರಚಾರ ಮಾಡುತ್ತಿತ್ತು. ಆದರೆ ಅಧಿಕಾರದಲ್ಲಿರುವ ಅಲ್ಪ ಅವಧಿಯಲ್ಲೇ ಈ ಪ್ರಚಾರದ ಟೊಳ್ಳುತನ ಸಂಪೂರ್ಣವಾಗಿ ಬಯಲಾಗಿದೆ. ಉದಾರೀಕರಣ ನೀತಿಗಳಿಂದ ಸತತ ಬೆಳವಣಿಗೆಯಾಗುತ್ತದೆ, ಅದರ ಪರಿಣಾಮವಾಗಿ ಜನಗಳಿಗೆ ಪ್ರಯೋಜನ ವಾಗುತ್ತದೆ ಎಂಬ ಉದಾರೀಕರಣವಾದಿಗಳ ಪ್ರತಿಪಾದನೆಯ ಟೊಳ್ಳುತನವೂ ಕಳೆದ ಮೂರೂವರೆ ವರ್ಷಗಳಲ್ಲಿ ಬಯಲಾಗಿದೆ. ವಿದೇಶೀ ಬಂಡವಾಳಕ್ಕೆ ಮತ್ತು ದೊಡ್ಡ ವ್ಯಾಪಾರಸ್ಥರಿಗೆ ಅನುಕೂಲ ಮಾಡಿಕೊಡುವ ಈ ನೀತಿಗಳು ವಾಸ್ತವವಾಗಿ ಆರ್ಥಿಕ ಸಾರ್ವಭೌಮತೆಗೆ ಮಾರಕ ಹಾಗೂ ಬಹುಪಾಲು ಜನಗಳ ಹಿತಾಸಕ್ತಿಗಳಿಗೆ ಹಾನಿಕಾರಕ ಎಂಬ ವಾಸ್ತವ ಸಂಗತಿ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ.

ಐ.ಎಂ.ಎಫ್-ವಿಶ್ವ ಬ್ಯಾಂಕ್ ಪಥ್ಯಗಳ ಏಳು ವರ್ಷಗಳು ಸಾಮಾನ್ಯ ಜನರ ನಿರ್ದಿಷ್ಟವಾಗಿ ಗ್ರಾಮೀಣ ಬಡವರ ಜೀವನ ಪರಿಸ್ಥಿತಿ ನಿರಂತರವಾಗಿ ಹದಗೆಟ್ಟ ಅವಧಿ ಕೂಡಾ. ಬಡತನದ ರೇಖೆಯ ಕೆಳಗಿರುವ ಜನಗಳ ಸಂಖ್ಯೆಯು 1989-90ರಲ್ಲಿ 34.3 ಶೇ. ಇದ್ದದ್ದು 1994-95ರಲ್ಲಿ 39.6 ಶೇ. ಕ್ಕೇರಿದೆ. ಗ್ರಾಮೀಣ ಜನಸಂಖ್ಯೆ 16 ಶೇ ಜನರಿಗೆ ದಿನಕ್ಕೆ 3 ರೂ ಕೂಡಾ ಸಿಗುವುದಿಲ್ಲ. ಅಧಿಕೃತ ಅಂಕಿ-ಅಂಶಗಳ ಪ್ರಕಾರ 1991-92 ರಿಂದ 1996-97 ರ ಆರು ವರ್ಷಗಳ ಅವಧಿಯಲ್ಲಿ ಅಕುಶಲ ಕೃಷಿಕಾರ್ಮಿಕರ ಕೂಲಿ ದರ ಕೇವಲ ಶೇ 6ರಷ್ಟು ಹೆಚ್ಚಿತು. ದ್ವಿದಳ ಧಾನ್ಯಗಳ ತಲಾ ಬಳಕೆ 1991 ರಲ್ಲಿ 41.6 ಗ್ರಾಂ ಇದ್ದದ್ದು 1996 ರಲ್ಲಿ 34 ಗ್ರಾಂಗಿಳಿಯಿತು. ಬೇರೆಲ್ಲಾ ಸರಕುಗಳಿಗಿಂತ ಆಹಾರ ವಸ್ತುಗಳ ಬೆಲೆಗಳಲ್ಲೇ ಹೆಚ್ಚಿನ ಹೆಚ್ಚಳವಾಗಿರುವುದರಿಂದಾಗಿ ಬೆಲೆಯೇರಿಕೆ ಎಂಬುವುದು ಬಡವರನ್ನೇ ಅತಿ ಹೆಚ್ಚು ತಟ್ಟಿದೆ.

ಸಿಪಿಐ(ಎಂ) ಒಂದು ಪೂರ್ಣಪ್ರಮಾಣದ ಪರ್ಯಾಯ ಆರ್ಥಿಕ ಧೋರಣೆಯನ್ನು ಮುಂದಿಟ್ಟಿದೆ. ತೆರಿಗೆ ಬಗೆಯನ್ನು ವ್ಯಾಪಕಗೊಳಿಸಿ, ಸಿರಿವಂತ ವಿಭಾಗಗಳ ಮೇಲಿನ ನೇರ ತೆರಿಗೆಗಳನ್ನು ಹೆಚ್ಚಿಸಿ ಆಂತರಿಕ ಸಂಪನ್ಮೂಲಗಳನ್ನು ಹೆಚ್ಚಿಸುವುದು, ಅನಗತ್ಯ ಖರ್ಚುಗಳಲ್ಲಿ ಕಡಿತ ಮತ್ತು ಸಾರ್ವಜನಿಕ ಹೂಡಿಕೆಯಲ್ಲಿ ಹೆಚ್ಚಳ- ಇವು ನಮ್ಮ ಪರ್ಯಾಯ ನಿಲುವಿನ ಮುಖ್ಯ ಅಂಶಗಳು. ಆಯಕಟ್ಟಿನ ಮತ್ತು ಪ್ರಮುಖ ಕ್ಷೇತ್ರಗಳಲ್ಲಿ ಸಾರ್ವಜನಿಕ ವಲಯವನ್ನು ಬಲಪಡಿಸಿ ಸುದಕ್ಷಗೊಳಿಸುವುದು ಕೈಗಾರಿಕಾ ಧೋರಣೆಯ ಮುಖ್ಯ ಅಂಗವಾಗಬೇಕು. ಜೊತೆಗೆ ದೇಶೀ ಉದ್ದಿಮೆ ಮತ್ತು ದೇಶೀ ತಂತ್ರಜ್ಞಾನಕ್ಕೆ ಪ್ರೋತ್ಸಾಹ ನೀಡಬೇಕು. ರಾಷ್ಟ್ರೀಯ ಆದ್ಯತೆಗಳು ಹಾಗೂ ನಮ್ಮ ತಂತ್ರಜ್ಞಾನದ ಅಗತ್ಯಗಳ ಆಧಾರದ ಮೇಲಷ್ಟೇ ವಿದೇಶೀ ಬಂಡವಾಳವನ್ನು ಆಹ್ವಾನಿಸಬೇಕು.

15ನೇ ಮಹಾಧಿವೇಶನ ಒಂದು ಪರ್ಯಾಯ ದಾರಿಯನ್ನು ಸೂಚಿಸಿತ್ತು. ತೀವ್ರಗಾಮಿ ಭೂಸುಧಾರಣೆಯ ಅನುಷ್ಠಾನ, ಹೆಚ್ಚಿನ ಕೃಷಿ ಬೆಳವಣಿಗೆ ತರಲು ಕೃಷಿಯಲ್ಲಿ ಸಾರ್ವಜನಿಕ ಹೂಡಿಕೆಯ ಹೆಚ್ಚಳ, ದೇಶದ ಎಲ್ಲಾ ಪ್ರದೇಶಗಳಲ್ಲೂ 14 ಜೀವನಾವಶ್ಯಕ ಸರಕುಗಳನ್ನು ಒದಗಿಸುವ ಒಂದು ಸಾರ್ವಜನಿಕ ವಿತರಣಾ ವ್ಯವಸ್ಥೆ, ಪ್ರಾಥಮಿಕ ಶಿಕ್ಷಣ, ಸಾಕ್ಷರತೆ, ಆರೋಗ್ಯ ಕೇಂದ್ರಗಳ ವಿಸ್ತರಣೆ, ಕೇಂದ್ರದಿಂದ ರಾಜ್ಯಗಳಿಗೆ ರಾಜ್ಯದಿಂದ ಕೆಳಗೆ ಪಂಚಾಯತು ಮಟ್ಟದವರೆಗೂ ಹೆಚ್ಚಿನ ಅಧಿಕಾರಗಳ ಮತ್ತು ಹಣಕಾಸಿನ ವಿಕೇಂದ್ರೀಕರಣ ಇದರ ಮುಖ್ಯ ಅಂಶಗಳಾಗಿದ್ದವು.

ಕೋಮುವಾದಿ ಬೆದರಿಕೆ

ಒಂದು ದಶಕದ ಹಿಂದೆ ಅಯೋಧ್ಯಾ ಪ್ರಶ್ನೆಯಲ್ಲಿ ಬಿಜೆಪಿ, ಆರ್.ಎಸ್.ಎಸ್.-ವಿ.ಹೆಚ್.ಪಿ ಧಾಳಿಗಳೊಂದಿಗೆ ಕೋಮುವಾದಿ ಬೆದರಿಕೆ ಮಡುಗಟ್ಟುತ್ತಾ ಬಂತು. ಬಿಜೆಪಿ ನೇತೃತ್ವದ ಸರಕಾರ ಬರುವುದರೊಂದಿಗೆ ಅದಕ್ಕೆ ಒಂದು ಹೊಸ ಆಯಾಮ ಬಂದಿದೆ. ಜನಗಳ ನಡುವೆ ಕೋಮು ಭಾವೋನ್ಮಾದವನ್ನು ತುಂಬಿ ಕೋಮು ಭಾವನೆಗಳನ್ನು ಬಡಿದೆಬ್ಬಿಸಿ ಮಾಡುತ್ತಿದ್ದುದಕ್ಕೆ ಪೂರಕವಾಗಿ ಈಗ ಪ್ರಭುತ್ವ ಶಕ್ತಿಯನ್ನು ಬಳಸಲಾಗುತ್ತಿದೆ. ಪ್ರಭುತ್ವ ಯಂತ್ರದೊಳಗೆ ಆರ್. ಎಸ್.ಎಸ್.ನ ಸಂಘಟನೆಗಳು ನುಸುಳುತ್ತಿವೆ. ಇನ್ನು ಮುಂದೆ ಬಿಜೆಪಿ -ಆರ್.ಎಸ್.ಎಸ್. ಅಜೆಂಡಾವನ್ನು ಸರಕಾರದ ಮೂಲಕ ನೇರವಾಗಿಯೂ, ಪರೋಕ್ಷವಾಗಿಯೂ ಪ್ರತಿಪಾದಿಸಲಾಗುವುದು. ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳು ಮುಂದಿಟ್ಟ “ರಾಷ್ಟ್ರೀಯ ಅಜೆಂಡಾ” ದಲ್ಲಿ ಹಿಂದುತ್ವ ಶಕ್ತಿಗಳ ಕೆಲವು ಪ್ರಮುಖ ಗುರಿಗಳಿಲ್ಲ. ಅಯೋಧ್ಯೆಯಲ್ಲಿ ದೇವಸ್ಥಾನ ನಿರ್ಮಾಣ, 370 ನೇ ಕಲಮಿನ ರದ್ಧತಿ, ಅಲ್ಪಸಂಖ್ಯಾತರಿಗೆ ರಕ್ಷಣೆ ನೀಡುವ 30ನೇ ಕಲಮಿನ ರದ್ದತಿ ಹಾಗೂ ಸಮರೂಪದ ನಾಗರೀಕ ಸಂಹಿತೆಯ ಹೇರಿಕೆ ಈ ಅಜೆಂಡಾದಲ್ಲಿಲ್ಲ. ಆದರೆ ಇದನ್ನು ಬೇರ ರೀತಿಯಲ್ಲಿ ಅನುಸರಿಸಲಾಗುವುದು ವಿಶ್ವಹಿಂದೂ ಪರಿಷತ್ತು, ಭಜರಂಗ ದಳದಂತಹ ಆರ್.ಎಸ್.ಎಸ್. ಮುಖ್ ಸಂಘಟನೆಗಳು ಬಿಜೆಪಿ ಕೇಂದ್ರದಲ್ ಅಧಿಕಾರದಲ್ಲಿರುವ ಸಂದರ್ಭದ ಪ್ರಯೋಜನ ಪಡೆದು ತಮ್ಮ ಕೋಮುವಾದಿ ಅಜೆಂಡಾವನ್ ಜಾರಿಗೆ ತರುವ ಪ್ರಯತ್ನ ಮುಂದುವರೆಸು ತ್ತಿದ್ದಾರೆ. ಅಯೋಧ್ಯೆಯಲ್ಲಿ ರಾಮ ದೇವಸ್ಥಾನಕ್ಕೆ ವಿ.ಹೆಚ್.ಪಿ. ರಾಜಸ್ತಾನ ಮತ್ತು ಉತ್ತರ ಪ್ರದೇಶದ ಹಲವೆಡೆ ಕಟ್ಟಡ ಸಾಮಗ್ರಿಗಳ ಸಿದ್ಧತೆ, ಕೆತ್ತನೆ ಕೆಲಸಗಳನ್ ನಡೆಸುತ್ತಿದೆ. ಭಜರಂಗದಳ ದೇಶದ ಪ್ರತಿಯೊಂದು ಬ್ಲಾಕಿನಲ್ಲೂ ಕ್ರಿಶ್ಚಿಯನ್ ಮಿಶನರಿಗಳು ಮತ್ತು ಸಾಂಸ್ಕೃತಿಕ ಅತಿಕ್ರಮಣಕೋರರ ಚಟುವಟಿಕೆಗಳನ್ ಎದುರಿಸಲು ಹಿಂದೂ ಯುವಜನರನ್ ತರಬೇತು ಮಾಡುವುದಾಗಿ ಪ್ರಕಟಿಸಿದೆ. ಬಿಜೆಪಿ ಮೂರು ಪ್ರಮುಖ ಮಂತ್ರಾಲಯ ಗಳ ಹತೋಟಿ ಪಡೆದಿದೆ. ಗೃಹ ಇಲಾಖೆ, ಸುದ್ದಿ ಮತ್ತು ಪ್ರಸಾರ ಇಲಾಖೆ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ. ಪ್ರಧಾನ ಮಂತ್ರಿಗಳ ಕಾರ್ಯಾಲಯ ಈಗಿನ ವ್ಯವಸ್ಥೆಯಲ್ಲಿ ಉನ್ನತ ಸ್ಥಾನಗಳಿಗೆ ನೇಮಕದಲ್ಲಿ ಪ್ರಮುಖ ಸ್ಥಾನಮಾನ ಪಡೆದಿರುವುದರಿಂದ ಇದನ್ನು ಹಾಗೂ ಈ ಮೂರು ಇಲಾಖೆಗಳನ್ ಬಳಸಿ ಆಡಳಿತದಲ್ಲಿ, ಶಿಕ್ಷಣ ವ್ಯವಸ್ಥೆಯಲ್ ಮತ್ತು ಮಾಧ್ಯಮದಲ್ಲಿ ನುಸುಳಲು ಪ್ರಯತ್ನಿಸಲಾಗುತ್ತದೆ. ಶೈಕ್ಷಣಿಕ ವ್ಯವಸ್ಥೆಯ ಮತ್ತು ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಕೋಮುವಾದಿ ಸಿದ್ಧಾಂತವನ್ನು ನುಸುಳಿಸಿ ಜಾತ್ಯಾತೀತ ನೀತಿಗಳನ್ನು ಬುಡಮೇಲು ಮಾಡಲಾಗುವುದು.

ಪರಮಾಣು ರಾಷ್ಟ್ರಾಂಧತೆ

ವಾಜಪೇಯಿ ಸರಕಾರ ಗುಟ್ಟಿನಲ್ಲಿ ಹಾಗೂ ಆಕ್ರಮವಾಗಿ ಭಾರತದ ದೀರ್ಘಕಾಲದ ಪರಮಾಣು ಧೋರಣೆಯನ್ ತಿರುಗು ಮುರುಗುಗೊಳಿಸಿದೆ. 1998ರ ವರೆಗೆ ಭಾರತದ ಪರಮಾಣು ಧೋರಣೆಯಲ್ಲಿ ಮೂರು ಅಂಶಗಳಿದ್ದವು. ಮೊದಲನೆಯದು ಪರಮಾಣು ಶಸ್ತ್ರಾಸ್ತ್ರ ದೇಶಗಳಿಗೆ ಹಾಗೂ ಪರಮಾಣು ಶಸ್ತ್ರಾಸ್ತ್ರಗಳ ಮೇಲೆ ಅವುಗಳ ಗುತ್ತೇದಾರಿಕೆಗೆ ಅನುಕೂಲ ಮಾಡಿಕೊಡುವ ಎನ್.ಪಿ.ಟಿ., ಸಿ.ಟಿ.ಬಿ.ಟಿ ಗಳಂತಹ ಪಕ್ಷಪಾತಪೂರ್ಣ ಸಂಧಿಗಳನ್ನು ಭಾರತ ಒಪ್ಪಿಕೊಂಡಿಲ್ಲ. ಎರಡನೆಯದು, ಭಾರತ ತನ್ನ ಪರಮಾಣು ಆಯ್ಕೆಯನ್ನು ತೆರೆದಿಟ್ಟಿತ್ತು- ಹಾಗೂ ಪರಮಾಣು ತಂತ್ರಜ್ಞಾನದ ಸಂಶೋಧನೆ ಗಳನ್ನು ಮುಂದುವರೆಸಿ, ಅದನ್ನು ಪ್ರಥಮವಾಗಿ ಶಾಂತಿಯುತ ಉದ್ದೇಶಗಳಿಗೆ ಬಳಸಿತ್ತು. ಮೂರನೆಯದು ಭಾರತ ಸತತವಾಗಿ ಸಾರ್ವತ್ರಿಕ ಪರಮಾಣು ನಿಶ್ಶಸ್ತ್ರೀಕರಣವನ್ನು ಪ್ರತಿಪಾದಿಸಿಕೊಂಡು ಬಂದು ಹಾಗೂ ಈ ದಿಕ್ಕಿನಲ್ಲಿ ಪರಮಾಣು ಶಸ್ತ್ರ ದೇಶಗಳು ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕರೆ ನೀಡಿತು. ಈ ಧೋರಣೆ ಭಾರತಕ್ಕೆ ಒಳಿತು ಮಾಡಿದೆ. ತನ್ನ ಸಾರ್ವಭೌಮ ಹಕ್ಕುಗಳನ್ನು ಕಾಯ್ದುಕೊಳ್ಳಲು ನೆರವಾಗಿದೆ ಹಾಗೂ ಇದು ಅಲಿಪ್ತ ವಿದೇಶಾಂಗ ನೀತಿ ಮತ್ತು ಪರಮಾಣು ನಿಶ್ಶಸ್ತ್ರೀಕರಣ ಮೂಲಕ ವಿಶ್ವ ಶಾಂತಿಯ ನೀತಿಗೂ ಅನುಗುಣವಾಗಿದೆ.

ಆದರೆ ಇವನ್ನೆಲ್ಲಾ ಬದಲಿಸಿದ ಬಿಜೆಪಿಯ ಪರಮಾಣು ಧೋರಣೆಯಿಂದಾಗಿ ಭಾರತ ಸಾಮ್ರಾಜ್ಯಶಾಹೀ ಒತ್ತಡಗಳಿಗೆ ಹೆಚ್ಚೆಚ್ಚು ಬಲಿಯಾಗುವಂತಾಗಿದೆ. ನಮ್ಮ ಉಪಖಂಡ ದಲ್ಲಿ ಅಸ್ಥಿರತೆಯ ಒಂದು ಸನ್ನಿವೇಶವಿದ್ದರೆ ಅದರಿಂದ ಸಾಮ್ರಾಜ್ಯಶಾಹಿ ಸಾಮರಿಕ ತಂತ್ರಗಳಿಗೆ ಪ್ರಯೋಜನವಾಗುತ್ತದೆ. ಈಗ

> “ಐ.ಎಂ.ಎಫ್- ವಿಶ್ವಬ್ಯಾಂಕ್ ಸೂಚಿಸಿದ ಪಥ್ಯಗಳನ್ನು ಪಾಲಿಸಿದರೆ ಮಾತ್ರವೇ ಮುಂದುವರಿದ ದೇಶಗಳ ಬಾಲಂಗೋಚಿಗಳಾಗಿದ್ದರೆ ಮಾತ್ರವೇ ಮೂರನೇ ಜಗತ್ತಿನ ದೇಶಗಳು ಮುನ್ನಡೆಯಲು ಸಾಧ್ಯ ಎಂದು ಸಾಮ್ರಾಜ್ಯಶಾಹಿ ಸೃಷ್ಟಿಸಿದ ಭ್ರಮೆ ಆಗ್ನೇಯ ಏಶ್ಯಾದ ದೇಶಗಳ ಆರ್ಥಿಕದ ಆಳವಾದ ಬಿಕ್ಕಟ್ಟಿನಿಂದ ನುಚ್ಚುನೂರಾಗಿದೆ.”

ನ್.ಪಿ.ಟಿ., ಸಿಟಿಬಿಟಿಗಳಂತಹ ಸಂಧಿಗಳಿಗೆ ಹಿ ಹಾಕಲು ಭಾರತದ ಮೇಲೆ ಹೆಚ್ಚೆಚ್ಚು ತ್ತಡಗಳು ಬರುತ್ತಿವೆ. ಆರ್ಥಿಕ ದಿಗ್ಬಂಧನ ನ್ನು ಪ್ರತಿರೋಧಿಸುವ ಹೆಸರಿನಲ್ಲಿ ದೇಶದ ರ್ಥಿಕವನ್ನು ಇನ್ನಷ್ಟು ವೇಗದಲ್ಲಿ ತೆರೆದು ಡಲಾಗುತ್ತಿದೆ. ಇದರಿಂದ ಕೇವಲ ಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕಷ್ಟೇ ಭ. ಎಲ್ಲಕ್ಕೂ ಮಿಗಿಲಾಗಿ, ಪರಮಾಣು ಸ್ತ್ರ ಪೈಪೋಟಿಗೆ ಸಂಪನ್ಮೂಲಗಳು ಬೇಕು. ದಕ್ಕಾಗಿ ಭಾರತ ಅಂತರ್ರಾಷ್ಟ್ರೀಯ ಸಾಲಕ್ಕೆ ಯೊಡ್ಡಬೇಕಾಗುತ್ತದೆ. ಇದಕ್ಕೆ ದೇಶದ ರ್ಥಿಕವನ್ನು ಇನ್ನಷ್ಟು ಒತ್ತೆಯಿಡಲಾಗುತ್ತದೆ.

ಸ್ಥಿರತೆಯ ಸನ್ನಿವೇಶ ಮುಂದುವರಿದಿದೆ

ಬಿಜೆಪಿ ನೇತೃತ್ವದ ಸರಕಾರ ಒಂದು ತ್ಯಲ್ಪ ಬಹುಮತದಿಂದ ಅಧಿಕಾರದಲ್ಲಿ ಮುಂದುವರೆಯಲು ಸಾಧ್ಯವಾಗಿದೆ. ಇದಕ್ಕೆ .ಡಿ.ಪಿ.ಯ ಬೆಂಬಲ ಕಾರಣ. ಬಿಜೆಪಿ ೇತೃತ್ವದ ಮೈತ್ರಿಕೂಟ ಆಂತರಿಕ ಕಿತ್ತಾಟ ಳಿಂದ, ವಿಭಿನ್ನ ಜಗ್ಗಾಟಗಳಿಂದ, ತ್ತಡಗಳಿಂದ ಜರ್ಝರಿತವಾಗಿದೆ. ಅಧಿಕಾರ ಕ್ಕಾಗಿ ಹಂಬಲಿಸುವ ಸಮಯ ಸಾಧಕ ುಖಂಡರನ್ನು ನಾಚಿಕೆಯಿಲ್ಲದೆ ಓಲೈಸುವ, ಂತೃಪ್ತಗೊಳಿಸುವ, ಅವರೊಡನೆ ರಾಜಿ ಾಡಿಕೊಳ್ಳುವ ಮೂಲಕ ಬಿಜೆಪಿ ನೇತೃತ್ವದ ೈತ್ರಿಕೂಟ ಚುನಾವಣೆಯ ವೇಳೆಯಲ್ಲಿ ೀಡಿದ 'ಸ್ಥಿರ ಸರ್ಕಾರ'ದ ಘೋಷಣೆಯನ್ನು ಂದು ಅಪಹಾಸ್ಯದ ಮಟ್ಟಕ್ಕಿಳಿಸಿದೆ.

ಇಂತಹ ಎಲುಬುಗೂಡಿನ ಹಂದರವಾದ ೈತ್ರಿಕೂಟದ ನೇತೃತ್ವ ವಹಿಸಿರುವ ಬಿಜೆಪಿ ನ್ನ ಸ್ಥಾನಮಾನವನ್ನು ಕ್ರೋಢೀಕರಿಸಲು ಚ್ಚೆಚ್ಚು ಹತಾಶ ಕ್ರಮಗಳನ್ನು ಕೈಗೊಳ್ಳಲಿದೆ. ದ್ದಕ್ಕಿದ್ದಂತೆ ಅದು ಮಾಡಬಹುದಾದ ಂತಹ ಕಸರತ್ತುಗಳು ಈಗಾಗಲೇ ರಮಾಣು ಬಾಂಬು ಪ್ರಶ್ನೆಯಲ್ಲಾದಂತೆ ೇಶದ ಹಿತಾಸಕ್ತಿಗಳಿಗೆ, ರಾಷ್ಟ್ರೀಯ ಐಕ್ಯತೆಗೆ ಾನಿಕಾರಕವಾಗುತ್ತವೆ. ಈಗಾಗಲೇ ್ಟಾಚಾರದೊಂದಿಗೆ ರಾಜಿಯಿಂದಾಗಿ ರ್ಕಾರಿ ಯಂತ್ರದ ಆದಾಯ ತೆರಿಗೆ ಇಲಾಖೆ ತ್ತಿತರ ಕ್ಷೇತ್ರಗಳಲ್ಲಿ ದೊಡ್ಡ ಪ್ರಮಾಣದ ಸ್ತಕ್ಷೇಪ ನಡೆದಿದೆ. ಜಯಲಲಿತಾ ಷಯದಲ್ಲಾಗಲೀ, ಸುಖ್‌ರಾಂ ಷಯದಲ್ಲಾಗಲೀ ಈ ಸಮಯ ಸಾಧಕತನ, ್ಟಾಚಾರದ ಓಲೈಕೆ ಬಿಜೆಪಿಯ ೀಗಲಾಡಿತನವನ್ನು ಬಯಲಿಗೆಳೆದಿದೆ.

ಸಂಸದೀಯ ಮತ್ತು ಪ್ರಭುತ್ವ ಸಂಸ್ಥೆಗಳಲ್ಲಿ ಣುವ ಒಟ್ಟಾರೆ ಅವನತಿ ಬಂಡವಾಳ ಹಿ- ಭೂಮಾಲಕ ವ್ಯವಸ್ಥೆಯ ಬಿಕ್ಕಟ್ಟಿನ ಂದು ಲಕ್ಷಣ. ಸಾಂವಿಧಾನಿಕ ಸಂಸ್ಥೆಗಳ ವಸಾನ ವಲ್ಲದೆ ರಾಜಕೀಯದ ಅಪರಾಧೀ ಣದ ಪಿಡುಗೂ ಹೆಚ್ಚುತ್ತಿದೆ. ಈಗ ಇದು ಲ್ಲಾ ಬಂಡವಾಳಶಾಹಿ ರಾಜಕೀಯ ಕ್ಷಗಳನ್ನು ಆವರಿಸಿದೆ. ಸಾಮಾನ್ಯವಾಗಿ ೊಲೀಸರೊಂದಿಗೆ ಶಾಮೀಲಾಗಿರುವ ಾಫಿಯಾ ಗುಂಪುಗಳಿಂದ, ಕ್ರಿಮಿನಲ್ ಂದ ಸಾಮಾನ್ಯ ನಾಗರಿಕರಿಗೆ ಬೆದರಿಕೆಗಳು ್ತೀಚಿನ ಅವಧಿಯಲ್ಲಿ ಹೆಚ್ಚಿವೆ. ಈಗ ಅದು ಜಕೀಯ ವ್ಯವಸ್ಥೆಗೂ ವಿಸ್ತರಿಸಿದೆ.

ಬಂಡವಾಳಶಾಹಿ ಭೂಮಾಲಕ ವಸ್ಥೆಯ ಹೆಚ್ಚುತ್ತಿರುವ ಅಸ್ಥಿರತೆಯಿಂದಾಗಿ ಜಕೀಯ ವ್ಯವಸ್ಥೆಯನ್ನು ಾರ್ಪಡಿಸಬೇಕು ಎಂದು ಪ್ರಭಾವಿ ಯಗಳಿಂದ ಕರೆಗಳು ಬರುತ್ತಿವೆ. ಇಂತಹ ದು ಪ್ರಸ್ತಾಪವೆಂದರೆ ಸದ್ಯದ ಸಂಸದೀಯ ವಸ್ಥೆಯ ಸ್ಥಾನದಲ್ಲಿ ಅಧ್ಯಕ್ಷೀಯ ಮಾದರಿ ಾರ ರಚಿಸುವುದು. ಬಿಜೆಪಿ ಇದನ್ನು ಬಲಿಸುತ್ತದೆ. ಇದು ರಾಜಕೀಯ ರತೆಗೆ ಒಂದು ಸರ್ವಾಧಿಕಾರಿ ಕ್ರಿಯೆಯೇ ಸರಿ. ಬೇರೆ ಪ್ರಸ್ತಾವಗಳೆಂದರೆ ೋಕಸಭೆಗೆ ಐದು ವರ್ಷಗಳ ಅವಧಿಯನ್ನು ಪಡಿಸುವುದು, ರಾಷ್ಟ್ರೀಯ ಕಾರಗಳ ರಚನೆ ಮತ್ತು ಪ್ರಧಾನ ಂತ್ರಿಗಳನ್ನು ಲೋಕಸಭೆ ನೇರವಾಗಿ ಸುವುದು. ಪರಿಣತರ ಸಮಿತಿಯೊಂದ ದ ಸಂವಿಧಾನದ ಒಂದು ಸಮಗ್ರ ರ್ಶೆ ಮಾಡಲಾಗುವುದೆಂದು ಬಿಜೆಪಿ ಾರದ ಪ್ರಸ್ತಾವವನ್ನು ಈ ಹಿನ್ನೆಲೆಯಲ್ಲಿ ಬೇಕು. ಈ ಎಲ್ಲಾ ಕ್ರಮಗಳು ದೀಯ ಪ್ರಜಾ ಪ್ರಭುತ್ವವನ್ನು ಮೊಟಕು ಸುತ್ತವೆಯಾದ್ದರಿಂದ ಅದನ್ನು ದೃಢವಾಗಿ ೋಧಿಸಬೇಕು.

ಪಕ್ಷದ ಮುಂದಿರುವ ಕೆಲಸ

ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವುದು ರಾಷ್ಟ್ರೀಯ ರಾಜಕಾರಣದಲ್ಲಿ ಬಲಪಂಥದತ್ತ ಒಂದು ಪಲ್ಲಟ ಪೂರ್ಣವಾಗಿರುವುದನ್ನು ತೋರಿಸುತ್ತದೆ. ಈ ಪ್ರಕ್ರಿಯೆಯಲ್ಲಿ ಕೋಮುವಾದದ ಹಾಗೂ ಕುರುಡು ದೇಶಭಕ್ತಿಯ ಏರಿಕೆ ನಮ್ಮ ರಾಜಕೀಯ ವ್ಯವಸ್ಥೆಯ ಜಾತ್ಯಾತೀತ, ಪ್ರಜಾಸತ್ತಾತ್ಮಕ ಅಡಿಪಾಯದ ಮೇಲೆ, ರಾಷ್ಟ್ರೀಯ ಐಕ್ಯತೆಯ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಕೋಮುವಾದಿ ಪಕ್ಷವೊಂದು ಅಧಿಕಾರದ ಸೂತ್ರಗಳನ್ನು ಹಿಡಿದಿರುವುದರ ಅಪಾಯವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಈ ಶಕ್ತಿಗಳ ವಿರುದ್ಧ ಹೋರಾಟ ಮುಂಬರುವ ದಿನಗಳಲ್ಲಿ ಪಕ್ಷದ ಪ್ರಧಾನ ಕೆಲಸವಾಗಬೇಕು.

ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟ ಜನಗಳನ್ನು ವಿಶಾಲ ತಳಹದಿಯ ಮೇಲೆ ಅಣಿನೆರೆಸಿದರೆ ಮಾತ್ರವೇ ಸಾಧ್ಯ. ಚುನಾವಣಾ ದೃಷ್ಟಿಯಲ್ಲಿ ಮೂರನೇ ಪರ್ಯಾಯವನ್ನು ಬೆಸೆಯುವ ಹಾಗೂ ಬಲಿಷ್ಟಗೊಳಿಸುವ ಪ್ರಯತ್ನಗಳು ಬಲಗೊಳ್ಳಬೇಕು. ಕಾಂಗ್ರೆಸ್‌ನ ಪ್ರಸಕ್ತ ನೀತಿಗಳಿಂದಾಗಿ ಅದರೊಡನೆ ಒಂದು ಮೈತ್ರಿಯ ಅಥವಾ ಸಂಯುಕ್ತ ರಂಗದ ಪ್ರಶ್ನೆಯೇ ಇಲ್ಲವಾದರೂ ಅದರ ಸಾಮೂಹಿಕ ನೆಲೆಯನ್ನು ತಲುಪಲು ಪ್ರಯತ್ನ ನಡೆಸಬೇಕು. ಏಕೆಂದರೆ ಅವರಲ್ಲಿ ಗಮನಾರ್ಹ ಸಂಖ್ಯೆಯ ಜನ ಜಾತ್ಯಾತೀತತೆಗೆ ಬದ್ಧರಾಗಿದ್ದಾರೆ.

ಕಳೆದ ಚುನಾವಣೆಗಳಲ್ಲಿ ಸಂಯುಕ್ತ ರಂಗಕ್ಕೆ ಹಿನ್ನಡೆಯಾಗಿದ್ದರೂ ಕೋಮುವಾದಿ ಶಕ್ತಿಗಳನ್ನು ಜನಗಳಿಂದ ದೂರಮಾಡುವ ಹೋರಾಟವನ್ನು ಮುನ್ನಡೆಸಲು ಮತ್ತು ಜನಗಳ ಬದುಕಿನ ಮೇಲಿನ ಧಾಳಿಗಳನ್ನು ಹಿಮ್ಮೆಟ್ಟಿಸಲು ಒಂದು ಮೂರನೇ ಪರ್ಯಾಯವನ್ನು ಮುಂದಿಡುವುದು ಅತ್ಯಗತ್ಯ. ಮೂರನೇ ಪರ್ಯಾಯ ಬೆಸೆಯುವ ಕೆಲಸ ಈಗಲೂ ನಡೆಯಬೇಕಾಗಿದೆ. ತಕ್ಷಣದ ಸನ್ನಿವೇಶವನ್ನು ಎದುರಿಸಲು ಎಲ್ಲಾ ಎಡ, ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯಾತೀತ ಶಕ್ತಿಗಳ ಐಕ್ಯತೆಯನ್ನು ಮತ್ತೆ ಬೆಸೆಯುವ ಕೆಲಸವನ್ನು ಮಾಡಲೇಬೇಕಾಗಿದೆ. ಮೂರನೇ ಪರ್ಯಾಯದ ರಚನೆ ಒಂದು ಸತತ ಹೋರಾಟ. ಇದರಲ್ಲಿ ಕೆಲವು ಬಂಡವಾಳಶಾಹಿ ಪಕ್ಷಗಳು ಬರಬಹುದು, ಕೆಲವು ಹೊರ ಹೋಗಬಹುದು. ಆದರೆ ಮೂರನೇ ಪರ್ಯಾಯವನ್ನು ಬಲಿಷ್ಟಗೊಳಿಸುವ ಪ್ರಶ್ನೆ, ಎಡ ಮತ್ತು ಪ್ರಜಾಪ್ರಭುತ್ವವಾದೀ ಶಕ್ತಿಗಳು ಕೋಮುವಾದದ ವಿರುದ್ಧ ಹೋರಾಟ, ಉದಾರೀಕರಣದ ವಿರುದ್ಧ ಹೋರಾಟದಂತಹ ಪ್ರಮುಖ ಪ್ರಶ್ನೆಗಳಲ್ಲಿ ಸಾಮೂಹಿಕ ಹೋರಾಟಗಳನ್ನು ಹರಿಯಬಿಟ್ಟು ಎಷ್ಟರ ಮಟ್ಟಿಗೆ ಜನಗಳನ್ನು ಅಣಿನೆರೆಸಬಲ್ಲವು ಎಂಬುದನ್ನು ಅವಲಂಬಿಸಿದೆ.

ಸಿಪಿಐ(ಎಂ) ಮತ್ತು ಎಡ ಶಕ್ತಿಗಳು ಈ ಧೋರಣೆಗಳ ವಿರುದ್ಧ ಹೋರಾಟದಲ್ಲಿ ನೇತೃತ್ವ ವಹಿಸಬೇಕು ಈ ಪ್ರತಿರೋಧವನ್ನು ತೀವ್ರಗೊಳಿಸುವಲ್ಲಿ ಅವರು ನಿರಂತರವಾಗಿ ಮೊದಲಡಿಯಿಡಬೇಕು. ಉದಾರೀಕರಣದ ವಿರುದ್ಧ ಹೋರಾಟ ಮತ್ತು ಕೋಮುವಾದದ ವಿರುದ್ಧ ಹೋರಾಟ ಇವೆರಡರ ನಡುವಿನ ಕೊಂಡಿಯನ್ನು ಕಾಣುವುದು ಅಗತ್ಯ. ಬಿಜೆಪಿಯನ್ನು ದೂರತಳ್ಳಲು ಎಲ್ಲಾ ಜಾತ್ಯಾತೀತ ಬಂಡವಾಳಶಾಹಿ ಪಕ್ಷಗಳೊಂದಿಗೆ ಸಹಕರಿಸುತ್ತಲೇ, ಸಿಪಿಐ(ಎಂ) ರಾಷ್ಟ್ರೀಯ ಮಟ್ಟದಲ್ಲಾಗಲೀ, ರಾಜ್ಯ ಮಟ್ಟದಲ್ಲಾಗಲೀ ಉದಾರೀಕರಣ ಧೋರಣೆಗಳಿಗೆ ವಿರೋಧವನ್ನು ಸಡಿಲಗೊಳಿಸಬಾರದು.

ಈ ಪ್ರಮುಖ ಕೆಲಸಗಳಾಗಬೇಕಾದರೆ ಎಡ ಐಕ್ಯತೆ ಬಲಗೊಳ್ಳಬೇಕು, ಎಡಪಂಥೀಯರ ಶಕ್ತಿ ಹೆಚ್ಚಬೇಕು. ಇದಕ್ಕೆ ಪ್ರಥಮತಃ ಸಿಪಿಐ(ಎಂ)ನ ಸ್ವತಂತ್ರ ಶಕ್ತಿ ವಿಸ್ತರಿಸಬೇಕು, ಹೀಗಾಗಬೇಕಾದರೆ ಅದು ಕೋಮುವಾದದ ವಿರುದ್ಧ, ರಾಷ್ಟ್ರೀಯ ಐಕ್ಯತೆಯ ರಕ್ಷಣೆ ಮತ್ತು ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟಗಳಲ್ಲಿ ಮುಂಚೂಣಿಯಲ್ಲಿರಬೇಕು. ಪ್ರತಿಗಾಮಿ ಮತ್ತು ವಿಭಜಕ ಶಕ್ತಿಗಳ ವಿರುದ್ಧ ರಾಜಕೀಯ-ಸೈದ್ಧಾಂತಿಕ ಹೋರಾಟವನ್ನು ಇನ್ನಷ್ಟು ದೊಡ್ಡ ಪ್ರಮಾಣದಲ್ಲಿ ಕೈಗೆತ್ತಿಕೊಳ್ಳಬೇಕು. ಹಿಂದುತ್ವದ ದುಷ್ಟ ಸಿದ್ಧಾಂತದ ಅಂತಸ್ವರೂಪವೇ ಪ್ರಜಾಪ್ರಭುತ್ವ-ವಿರೋಧಿ ಹಾಗೂ ಫ್ಯಾಸಿಸ್ಟ್ ಮಾದರಿಯದ್ದು. ಇದನ್ನು ಜನಗಳ ನಡುವೆ ಬಯಲಿಗೆಳೆಯಬೇಕು. ಬಂಡವಾಳಶಾಹಿ ಪಕ್ಷಗಳು ಹೆಚ್ಚೆಚ್ಚು ಜಾತಿ ರಾಜಕೀಯವನ್ನು ಅವಲಂಬಿಸಿರುವುದನ್ನು, ಜಾತೀಯತೆಯನ್ನು ಶಾಶ್ವತಗೊಳಿಸುವುದನ್ನು ಎದುರಿಸಬೇಕು. ಪಕ್ಷದ ಕಾರ್ಯಕ್ರಮಾತ್ಮಕ ತಿಳಿವಿನ ಆಧಾರದಲ್ಲಿ ಪಕ್ಷದ ಸ್ವತಂತ್ರ ನಿಲುವುಗಳನ್ನು ಜನರ ನಡುವೆ ಒಯ್ಯಬೇಕು ಹಾಗೂ ದೊಡ್ಡ ಪ್ರಮಾಣದಲ್ಲಿ ಜನಗಳ ಮುಂದಿಡಬೇಕು. ಈ ಸತತ ರಾಜಕೀಯ-ಸೈದ್ಧಾಂತಿಕ ಚಟುವಟಿಕೆಗಳ ಮೂಲಕವೇ ಪಕ್ಷ ಸಾಮೂಹಿಕ ಹೋರಾಟಗಳ ರಂಗದಲ್ಲಿ ಹಾಗೂ ಆರ್ಥಿಕ ಧೋರಣೆಗಳ ವಿರುದ್ಧ ಹೋರಾಟಗಳ ರಂಗದಲ್ಲಿ ಮಾಡಿದ ಕೆಲಸವನ್ನು ರಾಜಕೀಯವಾಗಿ ಕ್ರೋಢೀಕರಿಸಲು ಸಾಧ್ಯ.

ಎಡ ಮತ್ತು ಪ್ರಜಾಪ್ರಭುತ್ವವಾದಿ ಕಾರ್ಯಕ್ರಮದ ಆಧಾರದಲ್ಲಿ ದುಡಿಯುವ ಜನಗಳ ಎಲ್ಲಾ ವಿಭಾಗಗಳನ್ನು ಅಣಿನೆರೆಸಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಮುನ್ನಡೆಯುವಲ್ಲಿ ಯಶಸ್ವಿಯಾಗಬೇಕಾದರೆ ಪಕ್ಷದ ಬಲದಲ್ಲಿ ಒಂದು ತ್ವರಿತ ಹಾಗೂ ಗಮನಾರ್ಹ ಹೆಚ್ಚಳವಾಗಬೇಕು. ಸಿಪಿಐ(ಎಂ) ಕಾರ್ಮಿಕ ವರ್ಗದ ಸಿದ್ಧಾಂತವನ್ನು ಅಂಗೀಕರಿಸುವ ಅತ್ಯಂತ ಮುಂದುವರೆದ ವಿಭಾಗಗಳನ್ನು ಪ್ರತಿನಿಧಿಸುತ್ತದೆ. ಸಮಾಜವಾದದ ಹಿನ್ನಡೆಯ ಅವಧಿಯಲ್ಲೂ ಮಾರ್ಕ್ಸ್‌ವಾದ-ಲೆನಿನ್‌ವಾದದ ಮೂಲಭೂತ ನೀತಿಗಳಿಗೆ ದೃಢವಾಗಿ ಬದ್ಧವಾಗಿ ನಿಂತ ಪಕ್ಷ ಇದು. ಈ ಪಕ್ಷ ಮಾರ್ಕ್ಸ್‌ವಾದದ ಮತ್ತು ಶ್ರಮಜೀವಿ ವರ್ಗದ ಅಂತರ್ರಾಷ್ಟ್ರೀಯತೆಯನ್ನು ಆಧರಿಸುವ ತನ್ನ ಕಣ್ಣೋಟವನ್ನು ತೀಕ್ಷ್ಣಗೊಳಿಸಿ, ನವೀಕರಿಸಿ, ಆ ಮೂಲಕ ಎಡ ಮತ್ತು ಪ್ರಜಾಪ್ರಭುತ್ವವಾದಿ ಪರ್ಯಾಯವನ್ನು ಬೆಸೆಯುವ ತನ್ನ ಹೊಣೆಗಾರಿಕೆಯನ್ನು ನಿರ್ವಹಿಸಲು, ಜನತಾಪ್ರಜಾಪ್ರಭುತ್ವ ಕ್ರಾಂತಿಯತ್ತ ಮುನ್ನಡೆಯಲು ಸಾಧ್ಯವಾಗಬೇಕು. 1992ರ ಸೈದ್ಧಾಂತಿಕ ನಿರ್ಣಯದಲ್ಲಿ ಆರಂಭಿಸಿದ ಸೈದ್ಧಾಂತಿಕ ಚರ್ಚೆಗಳನ್ನು ಮುಂದೊಯ್ಯಬೇಕು. ○

“ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವುದು ರಾಷ್ಟ್ರೀಯ ರಾಜಕಾರಣದಲ್ಲಿ ಬಲಪಂಥದತ್ತ ಒಂದು ಪಲ್ಲಟ ಪೂರ್ಣವಾಗಿರುವುದನ್ನು ತೋರಿಸುತ್ತದೆ. ಈ ಪ್ರಕ್ರಿಯೆಯಲ್ಲಿ ಕೋಮುವಾದದ ಹಾಗೂ ಕುರುಡು ದೇಶ ಭಕ್ತಿಯ ಏರಿಕೆ ನಮ್ಮ ರಾಜಕೀಯ ವ್ಯವಸ್ಥೆಯ ಜಾತ್ಯಾತೀತ, ಪ್ರಜಾಸತ್ತಾತ್ಮಕ ಅಡಿಪಾಯದ ಮೇಲೆ, ರಾಷ್ಟ್ರೀಯ ಐಕ್ಯತೆಯ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಕೋಮುವಾದಿ ಪಕ್ಷವೊಂದು ಅಧಿಕಾರದ ಸೂತ್ರಗಳನ್ನು ಹಿಡಿದಿರುವುದರ ಅಪಾಯವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಈ ಶಕ್ತಿಗಳ ವಿರುದ್ಧ ಹೋರಾಟ ಮುಂಬರುವ ದಿನಗಳಲ್ಲಿ ಪಕ್ಷದ ಪ್ರಧಾನ ಕೆಲಸವಾಗಬೇಕು.”

25 ಲಕ್ಷ ಎಕರೆಗೆ ನೀರುಣಿಸುವ ಕೃಷ್ಣ ಯೋಜನೆ 2 ವರ್ಷಗಳಲ್ಲಿ ಮುಗಿದೀತೆ?

ಎನ್.ಕೆ.ಉಪಾಧ್ಯಾಯ

ಬಿಜಾಪುರ, ಗುಲ್ಬರ್ಗಾ, ರಾಯಚೂರು ಜಿಲ್ಲೆಗಳಲ್ಲಿ ಸುಮಾರು 25 ಲಕ್ಷ ಎಕರೆ ಭೂಮಿಗೆ ನೀರುಣಿಸಲಿರುವ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಎರಡು ವರ್ಷಗಳಲ್ಲಿ ಪೂರ್ಣಗೊಳಿಸುವ ಯೋಜನೆಯೊಂದನ್ನು ಮುಖ್ಯಮಂತ್ರಿ ಜೆ.ಹೆಚ್ ಪಟೇಲರು ಪ್ರಕಟಿಸಿದ್ದಾರೆ. ಕೃಷ್ಣಾ ಜಲಾನಯನ ಪ್ರದೇಶದ ನೀರಾವರಿ ಯೋಜನೆಗಳಿಗೆ ಹೆಚ್ಚುವರಿಯಾಗಿ 800 ಕೋಟಿ ರೂಪಾಯಿ ಮಂಜೂರು ಮಾಡುವ ಜೊತೆಯಲ್ಲಿಯೇ ಕೃಷ್ಣ ಭಾಗ್ಯ ಜಲನಿಗಮದಿಂದ ಬಾಂಡ್‌ಗಳ ಮೂಲಕ, ಕೇಂದ್ರ ಸರಕಾರದ ವಿಶೇಷ ನೀರಾವರಿ ಯೋಜನೆ ಮೂಲಕ, ಹಾಗೆಯೇ ನಬಾರ್ಡ ಮತ್ತು ಮತ್ತೊಂದು ಹಣಕಾಸು ನಿಗಮ ಸ್ಥಾಪಿಸಿ ಅದರ ಮೂಲಕ ಬಾಂಡ್‌ಗಳನ್ನೆತ್ತುವ ಮೂಲಕ ಮಾತ್ರವಲ್ಲ ಯೋಜನೇತರ ಕೆಲವು ಕಾರ್ಯಕ್ರಮಗಳನ್ನು ಕೈ ಬಿಟ್ಟು ಆ ಹಣವನ್ನು ಈ ಯೋಜನೆಗಾಗಿಯೇ ಕ್ರೋಢೀಕರಿಸುವ ಮೂಲಕ 2000 ಇಸವಿಯೊಳಗಾಗಿ ಕೃಷ್ಣ ಯೋಜನೆಯಡಿಯಲ್ಲಿ ಬಿಜಾಪುರ, ಗುಲ್ಬರ್ಗಾ, ರಾಯಚೂರು ಜಿಲ್ಲೆಗಳಲ್ಲಿ ಕೈಗೊಂಡಿರುವ ಅಣೆಕಟ್ಟು ಕಾಲುವೆ, ಏತ ನೀರಾವರಿ ಯೋಜನೆಗಳನ್ನೆಲ್ಲ ಪೂರ್ಣಗೊಳಿಸುವ ಸಚಿವ ಸಂಪುಟದ ನಿರ್ಣಯವನ್ನು ಭಾರಿ ನೀರಾವರಿ ಮಂತ್ರಿ, ಕೆ.ಎನ್. ನಾಗೇಗೌಡರು "ಐತಿಹಾಸಿಕ ನಿರ್ಧಾರ" ವೆಂದು ಬಣ್ಣಿಸಿದ್ದಾರೆ. ಸ್ವಾತಂತ್ರ್ಯ ಬಂದು, ಕರ್ನಾಟಕ ಏಕೀಕರಣವಾದ ನಂತರವೂ ಬರಗಾಲ ಪೀಡಿತ ಪ್ರದೇಶಗಳ ಈ ನೀರಾವರಿ ಯೋಜನೆ ಕುರಿತು ಬರೇ ಕಣ್ಣೀರು ಸುರಿಸುತ್ತಾ ಬಂದ ಕಾಂಗ್ರೆಸ್ ಸರಕಾರವನ್ನು ಕುಂಭಕರ್ಣ ನಿದ್ದೆಯಿಂದ ಎಬ್ಬಿಸಿ ಈ ಮಹತ್ವದ ಯೋಜನೆಯತ್ತ ಗಮನ ಹರಿಸುವಂತೆ ಮಾಡಲು ಕೊನೆಯ ಅಸ್ತ್ರವಾಗಿ ಬಿಜಾಪುರ ಜಿಲ್ಲಾ ಕಮ್ಯುನಿಸ್ಟ್ ಪಾರ್ಟಿ 1964ರಲ್ಲಿ ನಗರ ಸಭೆ, ವ್ಯಾಪಾರಸ್ಥರು ಸಾರ್ವಜನಿಕರ ಬೆಂಬಲದಿಂದ ಒಂದು ತಿಂಗಳ ಉಪವಾಸ ಸತ್ಯಾಗ್ರಹ ಕೈಗೊಂಡ ಫಲವಾಗಿ ಆಲಮಟ್ಟಿಯಲ್ಲಿ (ಬಿಜಾಪುರ ಜಿಲ್ಲೆ) ಅಣೇಕಟ್ಟಿನ ಶಂಕುಸ್ಥಾಪನೆ ದಿ|| ಲಾಲ್‌ಬಹುದ್ದೂರ ಶಾಸ್ತ್ರೀಯವರಿಂದ ನೆರವೇರಿತ್ತು. ಮೂರನೇ ಆಯೋಗದ ವರದಿ ಪ್ರಕಾರ ಈ ಯೋಜನೆ ಒಂದು ನೂರು ಕೋಟಿ ರೂಪಾಯಿಯಲ್ಲಿ ಪೂರ್ಣಗೊಳ್ಳಬಹುದಾಗಿತ್ತು. ಅಂದಿನ ಯೋಜನಾ ಆಯೋಗದ ಉಪಾಧ್ಯಕ್ಷ ಅಶೋಕ ಮೆಹತಾ ಅವರ ವರದಿ ಪ್ರಕಾರ ಆಲಮಟ್ಟಿ ಅಣೆಕಟ್ಟೆಗೆ 46 ಕೋಟಿ ರೂಪಾಯಿ ನಾರಾಯಣಪುರ ಅಣೆಕಟ್ಟೆಗೆ 56 ಕೋಟಿ ರೂಪಾಯಿ.

ಐವರೂ ಮುಖ್ಯಮಂತ್ರಿಗಳೂ ಬಂದರೂ

1956 ರಿಂದ 1998 ರ ವರೆಗೆ ಕರ್ನಾಟಕ ರಾಜ್ಯದಲ್ಲಿ ಆಳಿದ 10 ಮುಖ್ಯಮಂತ್ರಿಯವರ ಪೈಕಿ ಐವರು ಕೃಷ್ಣ ಜಲಾನಯನ ಪ್ರದೇಶದಿಂದಲೇ ಆರಿಸಿಬಂದವರು. ಎಸ್. ನಿಜಲಿಂಗಪ್ಪ (ಬಾಗಲಕೋಟೆ) ಎಸ್.ಆರ್. ಕಂಠಿ(ಇಳಕಲ್) ಬಿ.ಡಿ.ಜತ್ತಿ (ಜಮಖಂಡಿ) ರಾಮಕೃಷ್ಣ ಹೆಗಡೆ (ಬಾಗಲಕೋಟೆ) ಹಾಗೂ ವೀರೇಂದ್ರ ಪಾಟೀಲ (ಚಿಂಚೋಳಿ). ಈ ಕಾಲಘಟ್ಟದಲ್ಲಿ 199 ಶಾಸಕರೂ ಈ ಪ್ರದೇಶದಿಂದ ಆರಿಸಿ ಬಂದಿದ್ದಾರೆ, ಈ ಪ್ರದೇಶದಲ್ಲಿಯ ಅಕಾಲಿಕ ಮಳೆ, ಬರಗಾಲ, ಲಕ್ಷಾವಧಿ ರೈತರು ಗುಳೇ ಹೋಗುವ ಅಂದರೆ ಹಳ್ಳಿಯಲ್ಲಿ ಮನೆಮಠ ಬಿಟ್ಟು ಗೋವಾ, ಮಹಾರಾಷ್ಟ್ರ, ಬೆಂಗಳೂರು, ಮಂಗಳೂರುಗಳಿಗೆ ಹೋಗುವ ದಾರುಣ ದೃಶ್ಯ ಈ ಮುಖ್ಯಮಂತ್ರಿಗಳ, ಶಾಸಕರ ಕಣ್ಣಮುಂದೆ ನಲಿಯುತ್ತಿತ್ತು, ಆಕ್ರಂದನ ಕಿವಿಗೆ ಬೀಳುತ್ತಿತ್ತು. ಆದರೆ ಇವರ್‍ಯಾರು ಅವುಗಳಿಗೆ ಸ್ಪಂದಿಸಲಿಲ್ಲ.

ಎರಡೂ ಕಮ್ಯುನಿಸ್ಟ್ ಪಕ್ಷಗಳು, ಕರ್ನಾಟಕ ಪ್ರಾಂತ ರೈತ ಸಂಘ ನಿರಂತರ ಹೋರಾಟ ನಡೆಸುತ್ತ ಬಂದಿವೆ, ರಾಜ್ಯ ರೈತ ಸಂಘದವರೂ, 30 ಸ್ವಾಮಿಗಳೂ ಪ್ರಬಲ ಹೋರಾಟ ನಡೆಸಿದ್ದರು. ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ ಮಾತ್ರ ನಾರಾಯಣಪುರ ಅಣೆಕಟ್ಟು ಕಟ್ಟಿದರು. ರಾಯಚೂರು, ಗುಲ್ಬರ್ಗ ಕೆಲವು ಪ್ರದೇಶಗಳಿಗೆ ನೀರು ಸಿಗುವಂತೆ ಮಾಡಿದರು. ಆದರೆ ಕಾಲುವೆ ಕೆಲಸವನ್ನು ಪೂರ್ಣಗೊಳಿಸಲಿಲ್ಲ. ರಾಮಕೃಷ್ಣ ಹೆಗಡೆಯವರು 1983ರಲ್ಲಿ ಜನತಾ ಪಕ್ಷದ ಮುಖ್ಯ ಮಂತ್ರಿಯಾಗಿದ್ದಾಗ ಈ ಯೋಜನೆಗೆ ಸಾಕಷ್ಟು ಹಣ ಮಂಜೂರು ಮಾಡಲು ನಿರಾಕರಿಸಿದಾಗ ಲೋಕೋಪಯೋಗಿ ಮಂತ್ರಿಯಾಗಿದ್ದ ದೇವೇಗೌಡರು ಪ್ರತಿಭಟಿಸಿ ಮಂತ್ರಿ ಪದವಿಗೆ ರಾಜೀನಾಮೆ ಕೊಡಬೇಕಾಗಿಯೂ ಬಂತು.

ಬಚಾವತ್ ಅವಾರ್ಡಿನ ಪ್ರಕಾರ ನಮ್ಮ ಪಾಲಿನ 729 ಟಿ.ಎಂ.ಸಿ. ನೀರನ್ನು ಪೂರ್ಣ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಬೇಕು. ಆವಾಗ ಬೇಕಾದರೆ ಆಲಮಟ್ಟಿ ಅಣೆಕಟ್ಟು, ಮುಳವಾಡಿ ಏತ ನೀರಾವರಿ, ಭೀಮಾ ಏತ ನೀರಾವರಿ, ಇಂಡಿ ಏತ ನೀರಾವರಿ, ರಾಮಪುರ ಏತ ನೀರಾವರಿ, ಕೃಷ್ಣ ಮೇಲ್ದಂಡೆ ನೀರು ನಾಲೆಗಳು ಒಂದು ಮತ್ತು ಎರಡು ಯೋಜನೆಗಳು, ಹಿಪ್ಪರಗಿ ಅಣೆಕಟ್ಟು (ಬಿಜಾಪುರ ಜಿಲ್ಲೆಯಲ್ಲಿ) ಬೆಣ್ಣೆತೊರೆ, ದೂಧಗಂಗಾ, ಅಮರ್ಜಾ, ರಾಣಿಕೆರೆ, ಗಂಡೋರಿ ನಾಲಾ ಹರಿನಾಲಾ ಹೀರೇಹಳ್ಳಿ, ಕೆಳ ಮುಲ್ಲಾ ಮಾರಿ(ಗುಲ್ಬರ್ಗಾ ಜಿಲ್ಲೆ) ತುಂಗಾ ಮೇಲ್ದಂಡೆ ನಾರಾಯಣಪುರ ಬಲದಂಡೆ ಕಾಲುವೆ, ಮಸ್ಕಿ ನಾಲಾ, (ರಾಯಚೂರ ಜಿಲ್ಲೆ)ಗಳ ಕೆಲಸ ಪೂರ್ಣಗೊಳ್ಳ ಬೇಕಾಗಿದೆ. ಹಾಗಾದರೆ ಮಾತ್ರ ನಮ್ಮ ಪಾಲಿನ ನೀರು ನಮ್ಮ ಭೂಮಿಗೆ ಲಭ್ಯವಾಗಲು ಸಾಧ್ಯ. ಈ ಭಾಗದ ಜಿಲ್ಲೆಗಳ ಬಿಸಿಲಿನ ಧಗೆ ತಣಿಯಲು ಸಾಧ್ಯ. ಭಾವಿಗಳಲ್ಲಿ ನೀರಿನ ಸೆಲೆ ಹೆಚ್ಚಲು ಸಾಧ್ಯ. ಗಿಡಮರ ಬೆಳೆದು ವಾತಾವರಣ-ಪರಿಸರ ನೆಮ್ಮದಿಯಾಗಲು ಸಾಧ್ಯ. ಕೃಷಿ ಕೈಗಾರಿಕೆಗಳು ಹುಟ್ಟಿಕೊಳ್ಳಲು ಸಾಧ್ಯ. ಹೊಲ ಸತತ ಹಸಿರಾಗಿದ್ದು ಸಮೃದ್ಧ ಬೆಳೆ ಬೆಳೆದು ರೈತರೆಲ್ಲ ಆರ್ಥಿಕವಾಗಿ ಅಭಿವೃದ್ಧಿಗೊಳ್ಳಲು ಸಾಧ್ಯ.

ಕಳೆದ ಮೂರು ವರ್ಷಗಳಲ್ಲಿ

ಕಳೆದ ಮೂರು ವರ್ಷಗಳಲ್ಲಿ ಜನತಾದಳ ಸರಕಾರ ಜನರ ಒತ್ತಡದಿಂದ ಮಣಿದು ಕೃಷ್ಣ ಮೇಲ್ದಂಡೆ ಯೋಜನೆಗೆ ಹೆಚ್ಚು ಗಮನ ಹರಿಸುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಆದರೆ 2000 ಇಸವಿಯೊಳಗಾಗಿ ನಮ್ಮ ಪಾಲಿನ ನೀರನ್ನುಪಯೋಗಿಸಿ ಕೊಳ್ಳಬೇಕಾಗಿರುವುದರಿಂದ ಈ ಯೋಜನೆಗಳಿಗೆ ಪ್ರಾಧಾನ್ಯತೆ ಕೊಟ್ಟು ಕೆಲಸ ಮಾಡಬೇಕಾಗಿದೆ ಎಂಬ ರಾಜಕೀಯವಾದ 'ಧೃಢ ನಿರ್ಧಾರ' ಕೈಗೊಳ್ಳುವಲ್ಲಿ ಹಿಂದಿನ ಸರಕಾರಗಳಂತೆಯೇ ಈ ಸರಕಾರವೂ ಕೂಡ ತಪ್ಪಿದೆಂದು ಹೇಳಬೇಕಾಗುತ್ತದೆ. ಆದರೆ ಇಷ್ಟು ತಡವಾಗಿಯಾದರೂ ಜೆ.ಹೆಚ್. ಪಟೇಲ್ ಸರಕಾರ ತನ್ನ ಐತಿಹಾಸಿಕ ನಿರ್ಧಾರದ ಮೂಲಕ ಈ ಯೋಜನೆ ಪೂರ್ಣಗೊಳಿಸಲಿಕ್ಕೆ ಬೇಕಾಗಿರುವ 4900 ಕೋಟಿ ರೂಪಾಯಿ ಒದಗಿಸುವ ನಿರ್ಧಾರ ಕೈಗೊಂಡಿರುವುದು ಸ್ವಾಗತಾರ್ಹ. ಕಾಂಗ್ರೆ ಮತ್ತು ಬಿಜೆಪಿ ಮುಖಂಡರುಗಳು ಅದರಲ್ಲೂ ವಿಶೇಷವಾಗಿ ಬಿಜೆಪಿ ಮುಖಂಡರು ಕೃಷ್ಣ ಯೋಜನೆಯ ಸಮಸ್ಯೆಯನ್ನೆತ್ತಿಕೊಂಡು ಮುಂಬರುವ ಗ್ರಾಮ ಪಂಚಾಯತಿ ಮತ್ತು ವಿಧಾನ ಸಭಾ ಚುನಾವಣೆಗಳಲ್ಲಿ ಲಾಭ ಪಡೆಯಬೇಕೆಂಬ ಹೊಂಚು ಹಾಕಿದ್ದಾರೆ. 1956 ರಿಂದಲೂ ಆಡಳಿತ ನಡೆಸುತ್ತಿದ್ದ ಕಾಂಗ್ರೆಸ್ ಸರಕಾರ ಈ ಯೋಜನೆ ಕುರಿತು ಗಮನ ಹರಿಸುವುದರಲ್ಲಿ ಸಂಪೂರ್ಣ ವಿಫಲಗೊಂಡಿರುವಾಗ ಭೀಮಣ್ಣ ಖಂಡ್ರೆಯವರು ಈ ಸರಕಾರ ಕೃಷ್ಣ ಯೋಜನೆಯನ್ನು ಸಂಪೂರ್ಣ ಕೈಬಿಟ್ಟಿತೆಂದು ಉದ್ದುದ್ದ ಹೇಳಿಕೆಗಳನ್ನು ನೀಡುತ್ತಿರುವುದು ಅಪಹಾಸ್ಯಕರವಾಗಿದೆ. ಇಷ್ಟು ವರ್ಷ ಶಾಸಕರಾಗಿದ್ದ ಯಡೆಯೂರಪ್ಪನವರಿಗೂ

ಪುಟ 8 ಕ್ಕೆ



ಭಯೋತ್ಪಾದಕರಿಂದ ಮುಗ್ಧರ ನರಮೇಧ

ನಮ್ಮ ಬಳಿ ಪರಮಾಣು ಬಾಂಬ್ ಇದೆ, ಹುಷಾರ್ ಎಂದು ಪಾಕಿಸ್ತಾನಕ್ಕೆ ವಾಜಪೇಯಿ, ಅಡ್ವಾಣಿ ಎಚ್ಚರಿಕೆ ನೀಡುತ್ತಿರುವಾಗಲೇ (!) ಇತ್ತ ಪಾಕ್ ಬೆಂಬಲಿತ ಭಯೋತ್ಪಾದಕರು ಮುಗ್ಧರ ನರಬೇಟೆಯಲ್ಲಿ ತೊಡಗಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಪ್ರತ್ಯೇಕತೆಗಾಗಿ ಹೋರಾಡುತ್ತಿರುವ ಉಗ್ರಗಾಮಿಗಳು ಇದೀಗ ಕಾಶ್ಮೀರ ಬಿಟ್ಟು ಹೊರ ರಾಜ್ಯಕ್ಕೂ ತಮ್ಮ ಕಬಂಧ ಬಾಹುವನ್ನು ಚಾಚಿದ್ದಾರೆ. ಕಾಶ್ಮೀರದ ಗಡಿಭಾಗದಲ್ಲಿರುವ ಹಿಮಾಚಲ ಪ್ರದೇಶದ ಚಂಬಾ ಜಿಲ್ಲೆಯ ಎರಡು ಪ್ರದೇಶಗಳ ಮೇಲೆ ಆಗಸ್ಟ್ ಮೂರರ ಮುಂಜಾನೆ ಆಕ್ರಮಣ ನಡೆಸಿದ ಭಯೋತ್ಪಾದಕರು ಕನಿಷ್ಠ ಪಕ್ಷ 35 ಜನರನ್ನು ಸಂಹರಿಸಿದರು.

ದುರುಳರ ದುಷ್ಕೃತ್ಯಕ್ಕೆ ಬಲಿಯಾದವರೆಲ್ಲರೂ ಹೊಟ್ಟೆಪಾಡಿಗಾಗಿ ರಸ್ತೆ ಕಾಮಗಾರಿಯಲ್ಲಿ ತೊಡಗಿದ್ದ ಕಾರ್ಮಿಕರು. ಕಾಲಬಾನ್ ಮತ್ತು ಶೊವರೆಡ್ ಹಳ್ಳಿಗಳಲ್ಲಿ ರಸ್ತೆ ಕಾಮಗಾರಿ ನಡೆಸುತ್ತಿದ್ದ ಕಾರ್ಮಿಕರು ಗುಡಿಸಲುಗಳಲ್ಲಿ ನಿದ್ರಿಸಿದ್ದಾಗ ರಾತ್ರಿ ಮೂರು ಗಂಟೆ ವೇಳೆಗೆ ಉಗ್ರಗಾಮಿಗಳು ಹಠಾತ್ತನೆ ಎರಗಿ ಗುಂಡಿನ ಸುರಿಮಳೆಗರೆದರು. 35 ಮಂದಿ ಸತ್ತರಲ್ಲದೆ ಅನೇಕ ಜನರು ಗಾಯಗೊಂಡಿದ್ದಾರೆ.

ಕೇವಲ ಒಂದು ವಾರದ ಹಿಂದೆ (ಜುಲೈ 28) ನಿಷೇಧಿತ ಹಿಜಬುಲ್ ಮುಜಾಹಿದಿನ್ ಸಂಘಟನೆಯ ಉಗ್ರಗಾಮಿ ಗಳು ಕಾಶ್ಮೀರದ ದೋಡಾ ಜಿಲ್ಲೆಯಲ್ಲಿ 17 ಜನರ ಹತ್ಯೆ ಮಾಡಿದ್ದರು. ಅದರ ಕರಾಳತೆ ಇನ್ನೂ ಹಸಿರಾಗಿರುವಾಗಲೇ ಪ್ರತ್ಯೇಕತಾ ವಾದಿಗಳು ನೆರೆರಾಜ್ಯದಲ್ಲಿ ಘೋರ ಹತ್ಯಾಕಾಂಡ ನಡೆಸಿದ್ದಾರೆ.

14 ಮಕ್ಕಳ ಕಗ್ಗೊಲೆ

ಹಿಮಾಚಲ ಪ್ರದೇಶದ ಚಂಬಾ ಜಿಲ್ಲೆಯಲ್ಲಿ ಏನಾಯಿತು ಎಂದು ಸರಿಯಾಗಿ ಮನಸ್ಸಿಗೆ ಹೋಗುವ ಮೊದಲೇ ಕಾಶ್ಮೀರದ ಪೂಂಛ್ ಜಿಲ್ಲೆಯಿಂದ ಇನ್ನೊಂದು ಹತ್ಯಾಕಾಂಡದ ವರದಿ ಬಂದಿದೆ. ಇದು ಭಯೋತ್ಪಾದಕರ ಎರಡು ಸಂಘಟನೆಗಳ ನಡುವಿನ ವೈರತ್ವದಿಂದಾಗಿ ನಡೆದ ಘಟನೆಯಾದರೂ ಬಲಿಯಾದವರಲ್ಲಿ 14 ಮುಗ್ಧ ಮಕ್ಕಳು ಸೇರಿದ್ದಾರೆನ್ನುವುದು ನೋವಿನ ವಿಷಯವಾಗಿದೆ.

ಇತ್ತೀಚೆಗೆ ಶರಣಾಗಿ ಪೋಲೀಸ್ ಅಧಿಕಾರಿಯಾಗಿದ್ದ ಝುಕೀರ್ ಹುಸೇನ್ ಎಂಬಾತನನ್ನು ಆಗಸ್ಟ್ 3 ರಂದು ನಿಷೇಧಿತ ಹರ್ಕತ್ ಉಲ್ ಅನ್ಸಾರ್‌ನ ಇಮ್ತಿಯಾಜ್ ಎಂಬಾತ ಕೊಂದಿದ್ದ. ಇದಕ್ಕೆ ಸೇಡು ತೀರಿಸಿಕೊಳ್ಳಲೆಂದು ಝುಕೀರ್ ಹುಸೇನ್ ಬೆಂಬಲಿಗರು ಪೂಂಛ್ ಜಿಲ್ಲೆಯ ಸಲ್ವಾನ್ ಗ್ರಾಮಕ್ಕೆ ಎರಗಿ ಇಮ್ತಿಯಾಜ್‌ನ ಮೂವರು ಪುತ್ರರ ಮನೆಗಳಿಗೆ ನುಗ್ಗಿ, ಯದ್ವಾತದ್ವ ಗುಂಡು ಹಾರಿಸಿದರು. ಈ ಮತಿಹೀನ ಕಾರ್ಯಕ್ಕೆ 11 ಹೆಣ್ಣು ಮಕ್ಕಳು, ಮೂವರು ಚಿಕ್ಕ ಗಂಡುಮಕ್ಕಳು, ಇಬ್ಬರು ಹೆಂಗಸರು ಮತ್ತುಮೂವರು ಗಂಡಸರು ಬಲಿಯಾದರು.

ಒಟ್ಟಿನಲ್ಲಿ ಭಯೋತ್ಪಾದಕರಿಂದ ಸರಣಿ ನರಸಂಹಾರ ನಡೆಯುತ್ತಿದ್ದು, ಕೇಂದ್ರ ಸರ್ಕಾರ ಭಯೋತ್ಪಾದನೆಯನ್ನು ಮೆಟ್ಟಿ ಹಾಕುವುದಾಗಿ ಗುಡುಗುತ್ತಿದೆಯೇ ಹೊರತು ಆ ನಿಟ್ಟಿನಲ್ಲಿ ಪೂರ್ಣ ವಿಫಲವಾಗಿದೆ.

ಅಡ್ವಾಣಿ ರಾಜೀನಾಮೆಗೆ ಆಗ್ರಹ

ಮುಗ್ಧ ಜನರ ಹತ್ಯಾಕಾಂಡ ಪ್ರಕರಣಗಳು ಸಂಸತ್ತಿನಲ್ಲಿಯೂ ಪ್ರತಿಧ್ವನಿಸಿವೆ. ಜಮ್ಮುಮತ್ತು ಕಾಶ್ಮೀರ ಹಾಗೂ ಹಿಮಾಚಲ ಪ್ರದೇಶದಲ್ಲಿ ಮುಗ್ಧ ಜನರಿಗೆ ರಕ್ಷಣೆ ಒದಗಿಸಲು ಸರಕಾರ ವಿಫಲವಾಗಿದೆ ಎಂದು ಪ್ರತಿ ಪಕ್ಷಗಳು ರಾಜ್ಯಸಭೆಯಲ್ಲಿ ಆಪಾದಿಸಿವೆ. ಈ ಹಿನ್ನೆಲೆಯಲ್ಲಿ ಗೃಹಮಂತ್ರಿ ಎಲ್.ಕೆ. ಅಡ್ವಾಣಿ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿವೆ.

ಜನತೆಗೆ ರಕ್ಷಣೆ ಒದಗಿಸಲು ಆಗದಿದ್ದರೆ ಅಧಿಕಾರದಲ್ಲಿ ಮುಂದುವರಿಯಲು ಗೃಹ ಸಚಿವರಿಗೆ ನೈತಿಕ ಹಕ್ಕಿಲ್ಲ ಎಂದು ಸದಸ್ಯರು ಪ್ರತಿಪಾದಿಸಿದರು.

ಉಗ್ರಗಾಮಿಗಳು ನೆರೆ ರಾಜ್ಯಗಳಿಗೂ ತಮ್ಮ ಕರಾಳ ಹಸ್ತವನ್ನು ಚಾಚಿರುವ ಹಿನ್ನೆಲೆಯಲ್ಲಿ ಸರಕಾರ ತನ್ನ ಕಾಶ್ಮೀರ ನೀತಿಗಳ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಸಿಪಿಐ(ಎಂ)ನ ಮಹಮದ್ ಸಲೀಂ ಹೇಳಿದರು.

ಭಯೋತ್ಪಾದಕರು ದೋಡಾದಿಂದ ಚಂಬಾಕ್ಕೆ ತಮ್ಮ ನೆಲೆಯನ್ನು ಬದಲಾಯಿಸಿಕೊಂಡಿದ್ದಾರೆಯೇ ಅಥವಾ ಅವರು ತಮ್ಮ ಕಾರ್ಯಕಲ್ಪಗಳನ್ನು ನೆರೆ ರಾಜ್ಯಕ್ಕೂ ವಿಸ್ತರಿಸಿದ್ದಾರೆಯೇ ಎಂಬುದನ್ನು ಸರಕಾರ ತಿಳಿಸಬೇಕು ಎಂದು ಸಲೀಂ ಹೇಳಿದರು.

ಬಿ.ಜೆ.ಪಿ. ಬಂದ ಮೇಲೆ ಹೆಚ್ಚಿದ ಹತ್ಯಾಕಾಂಡ

ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಭಯೋತ್ಪಾದಕರಿಂದ ಹತ್ಯಾಕಾಂಡಗಳು ಹೆಚ್ಚಿವೆ ಎಂದು ಜನತಾದಳದ ಎಸ್.ಆರ್ ಬೊಮ್ಮಾಯಿ ಹೇಳಿದರು.

ಮುಗ್ಧಜನರ ಜೀವಗಳನ್ನು ರಕ್ಷಿಸಲು ಆಗದಿದ್ದರೆ ಸರಕಾರಕ್ಕೆ ಆಳುವ ಹಕ್ಕಿಲ್ಲ ಎಂದು ಅಡ್ವಾಣಿ ಹೇಳಿರುವುದರತ್ತ ಗಮನ ಸೆಳೆದ ಬೊಮ್ಮಾಯಿ ಚಂಬಾ ಹತ್ಯಾಕಾಂಡದ ನಂತರವೂ ಅಡ್ವಾಣಿಯವರಿಗೆ ಅಧಿಕಾರದಲ್ಲಿ ಮುಂದುವರಿಯುವ ಹಕ್ಕು ಏನಿದೆ ಎಂದು ಪ್ರಶ್ನಿಸಿದರು.

ದೆಹಲಿ ಕಾನೂನು ಪರಿಸ್ಥಿತಿ ಸರಿಯಿಲ್ಲ.....

ಹೀಗೆಂದವರು ಯಾವುದೇ ಪ್ರತಿ ಪಕ್ಷದ ಸದಸ್ಯರಲ್ಲ ಸ್ವತಃ ಕೇಂದ್ರ ಸರಕಾರದ ಗೃಹ ಸಚಿವ ಎಲ್.ಕೆ. ಅಡ್ವಾಣಿ ಈ ಮಾತನ್ನು ಹೇಳಿದ್ದಾರೆ. ದೆಹಲಿಯಲ್ಲೂ, ಕೇಂದ್ರದಲ್ಲೂ ಬಿಜೆಪಿ ಸರಕಾರವೇ ಆಡಳಿತದಲ್ಲಿರುವಾಗ ರಾಷ್ಟ್ರದ ರಾಜಧಾನಿಯಲ್ಲಿ ಅಪರಾಧಗಳ ಸಂಖ್ಯೆ ಸ್ವಲ್ಪ ಇಳಿದರೂ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ತೃಪ್ತಿದಾಯಕವಾಗಿಲ್ಲ ಎಂದು ಸ್ವತಃ ಗೃಹ ಸಚಿವರೇ ಹೇಳಿರುವುದು ಪರಿಸ್ಥಿತಿಯ ಗಂಭೀರತೆಗೆ ಕೈಗನ್ನಡಿಯಾಗುತ್ತದೆ.

ಜುಲೈ 28 ರಂದು ರಾಜ್ಯ ಸಭೆಯಲ್ಲಿ ಮಾತನಾಡಿದ ಅಡ್ವಾಣಿ, ಪೊಲೀಸರು ಒದಗಿಸಿರುವ ಮಾಹಿತಿ ಪ್ರಕಾರ ಅಪರಾಧಗಳ ಸಂಖ್ಯೆ ಸ್ವಲ್ಪ ಇಳಿಮುಖವಾಗಿದೆ ಎಂದರು. ಆದರೆ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ತೃಪ್ತಿದಾಯಕವಾಗಿಲ್ಲ ಎನ್ನುವುದು ಸಾರ್ವಜನಿಕರ ಅಭಿಪ್ರಾಯವಾಗಿದೆ ಎಂದು ಹೇಳಿದರು.

ಅಂಕಿ-ಸಂಖ್ಯೆಯೇ ಪರಿಸ್ಥಿತಿಯ ಸಂಕೇತವಲ್ಲ. ಸಾರ್ವಜನಿಕ ಅಭಿಪ್ರಾಯವೇ ನಿಜವಾದ ಸೂಚಿಯಾಗಿದೆ. ಸಧ್ಯಕ್ಕೆ ಹೇಳುವುದಾದರೆ, ಸಾರ್ವಜನಿಕರ ಅಭಿಪ್ರಾಯದ ಪ್ರಕಾರ ದೆಹಲಿಯಲ್ಲಿನ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ತೃಪ್ತಿದಾಯಕವಾಗಿಲ್ಲ ಎಂದು ಗೃಹ ಮಂತ್ರಿ ನುಡಿದರು.

ಗುಜರಾತಿನಲ್ಲಿ ಬೆಲೆಯೇರಿಕೆಗೆ ಬಿಜೆಪಿ ಅತೃಪ್ತಿ

ಹೌದು. ಸಹಜವಾಗಿಯೇ ಭಾರತೀಯ ಜನತಾ ಪಕ್ಷ ಆಡಳಿತದಲ್ಲಿರುವ ಗುಜರಾತ್ ರಾಜ್ಯವೂ ಬೆಲೆಯೇರಿಕೆ ಪಿಡುಗಿನಿಂದ ಹೊರತಾಗಿಲ್ಲ.

ಜನ ಸಾಮಾನ್ಯರು ಬಳಸುವ ಅವಶ್ಯಕ ಸಾಮಗ್ರಿಗಳ ಬೆಲೆಗಳು ಗಗನಕ್ಕೇರುತ್ತಿರುವುದೇಕೆ ಎಂಬುದನ್ನು ಜನರಿಗೆ ವಿವರಿಸುವುದಾದರೂ ಹೇಗೆ ಎಂಬುದು ಬಿಜೆಪಿ ಕಾರ್ಯಕರ್ತರ ಪೀಕಲಾಟವಾಗಿದೆ.

ಬರೋಡಾದಲ್ಲಿ ಈ ವಾರದ ಆರಂಭದಲ್ಲಿ ನಡೆದ ಬಿಜೆಪಿ ರಾಜ್ಯ ಮಟ್ಟದ ಸಮಾವೇಶವೊಂದರಲ್ಲಿ ಬಿಜೆಪಿ ಕಾರ್ಯಕರ್ತರು ತಮ್ಮ ಈ ಅಳಲನ್ನು ತೋಡಿಕೊಂಡರು.

ಸರಕಾರದ ಕಾರ್ಯಶೈಲಿಯ ಬಗ್ಗೆಯೂ ಅನೇಕ ಕಾರ್ಯಕರ್ತರು ಅತೃಪ್ತಿ ವ್ಯಕ್ತಪಡಿಸಿದರು. ಪಕ್ಷಕ್ಕೆ ಸೇವೆ ಸಲ್ಲಿಸಿದ ಹಿರಿಯರನ್ನು ಕಡೆಗಣಿಸಿ ಕಿರಿಯರಿಗೆ ಆದ್ಯತೆ ಕೊಡಲಾಗುತ್ತಿದೆ, ಮಂತ್ರಿ ಸ್ಥಾನ, ನಿಗಮ ಮಂಡಳಿಗಳ ಅಧ್ಯಕ್ಷ ಸ್ಥಾನಗಳೂ ಕಿರಿಯರ ಪಾಲಾಗುತ್ತಿದೆ ಎಂದು ಹಲವರು ಆಕ್ಷೇಪಿಸಿದರು.

ಗುಜರಾತಿನ ಆಳುವ ಬಿಜೆಪಿ ಕೂಡ ಅತೃಪ್ತಿಯ ಗೂಡಾಗಿದೆ ಎನ್ನುವುದು ಇವುಗಳಿಂದ ಗೊತ್ತಾಗುತ್ತದೆ.

ಬಿಜೆಪಿ ರಾಜ್ಯಭಾರದಲ್ಲಿ ನಲುಗಿದ ಶಾಸಕಿ!

ಬಿಜೆಪಿ ಹಾಗೂ ಬಿಜೆಪಿ ಮೈತ್ರಿ ಕೂಟ ಆಡಳಿತವಿರುವ ರಾಜ್ಯಗಳಲ್ಲಿ ಮಹಿಳೆಯರು, ಪರಿಶಿಷ್ಟರು, ಅಲ್ಪಸಂಖ್ಯಾತರ ಮೇಲಿನ ಅನ್ಯಾಯ ದೌರ್ಜನ್ಯಗಳು ಹೆಚ್ಚುತ್ತಿವೆ. ಒಂದೊಂದು ಕಡೆಯಿಂದ ಒಂದೊಂದು ರೀತಿ ವರದಿಗಳು ಈ ಸಂಬಂಧ ಬರುತ್ತಲೇ ಇವೆ. ಬಿಜೆಪಿ ಕೇಂದ್ರದಲ್ಲಿ ಅಧಿಕಾರ ಹಿಡಿದ ಮೇಲಂತೂ ಇಂಥ ಪ್ರಕರಣಗಳು ಏಕ್‌ದಂ ಜಾಸ್ತಿಯಾಗಿವೆ.

ಬಿಜೆಪಿ ಆಡಳಿತದ ರಾಜಸ್ಥಾನದಲ್ಲಿ ಶಾಸಕಿಯೊಬ್ಬರು ಪೊಲೀಸ್ ವಶದಲ್ಲಿ ಪಡಬಾರದ ಕಷ್ಟಪಟ್ಟ ವರದಿ ಬಂದಿವೆ.

ಶಶಿ ಸೋಮದತ್ತ ಮಹಿಳೆಯೂ ಹೌದು, ಪರಿಶಿಷ್ಟ ಜಾತಿಗೆ ಸೇರಿದವರೂ ಹೌದು. ಅವರು ತಿಬಿ (ಮೀಸಲು) ಕ್ಷೇತ್ರದ ಶಾಸಕಿ, ಪಕ್ಷೇತರರು. ಇವರು ಮಾಜಿ ಮಂತ್ರಿಯೂ ಹೌದು.

ತಮ್ಮ ಕ್ಷೇತ್ರದ ಸಮಸ್ಯೆಯೊಂದನ್ನು ಬಗೆಹರಿಸಲು ಸರಕಾರ ವಿಫಲವಾದರೆ ಆತ್ಮಾಹುತಿ ಮಾಡಿಕೊಳ್ಳುವುದಾಗಿ ಶಶಿ ಬೆದರಿಕೆ ಹಾಕಿದ್ದರು. ಸಮಸ್ಯೆ ಪರಿಹಾರ, ಬೇಡಿಕೆ ಈಡೇರಿಕೆಗೆ ಆತ್ಮಾಹುತಿ ಎಂಬ ಕೆಟ್ಟ ಪ್ರವೃತ್ತಿ ಈಚೆಗೆ ಬೆಳೆದು ಬರುತ್ತಿದೆ. ಈಚೆಗೆ ಬಿಜೆಪಿ ಕಾರ್ಪೋರೇಟರ್ ಒಬ್ಬರು ಆತ್ಮಾಹುತಿ ಮಾಡಿಕೊಂಡಿದ್ದರು. ಆತ್ಮಾಹುತಿ ಸರಿಯೋ ತಪ್ಪೋ ಬೇರೆ ಪ್ರಶ್ನೆ.

ಇಲ್ಲಿ ಆತ್ಮಾಹುತಿ ಬೆದರಿಕೆ ಹಾಕಿದ ಶಶಿ ಸೋಮದತ್ತರನ್ನು ಪೊಲೀಸರು ಬಂಧಿಸಿದರು. ಶಶಿ ಹಾಗೂ ಅವರ ಕುಟುಂಬದ ಸದಸ್ಯರೊಂದಿಗೆ ಹನುಮಂತಗಢ್ ಜಿಲ್ಲಾ ಎಸ್.ಪಿ. ತೀರಾ ಅಸಭ್ಯವಾಗಿ ವರ್ತಿಸಿದರು.

ಮಾನಸ ಸರೋವರದಲ್ಲಿರುವ ನಿವಾಸದಿಂದ ಬಂಧಿಸಲಾದ ಶಶಿ ಅವರನ್ನು ಪೊಲೀಸ್ ವಾಹನಗಳಲ್ಲಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಕರೆದೊಯ್ಯಲಾಯಿತು. ಗಂಟೆಗಟ್ಟಲೆ ಆಹಾರ ಅಥವಾ ನೀರನ್ನು ಕೊಡಲಿಲ್ಲ. ಅಷ್ಟೇ ಏಕೆ, ಶೌಚಾಲಯಕ್ಕೆ ಹೋಗಲೂ ಬಿಡಲಿಲ್ಲ. ಎಷ್ಟು ಹೊತ್ತು ಹೀಗೆ ನನ್ನನ್ನು ಹಿಡಿದಿಟ್ಟುಕೊಳ್ಳುವಿರಿ ಎಂದು ಪ್ರಶ್ನಿಸಿದಾಗ ಪೊಲೀಸರು ಅನುಚಿತವಾಗಿ ವರ್ತಿಸಿದ್ದಲ್ಲದೆ 'ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ' ಎಂದು ಬೆದರಿಕೆ ಹಾಕಿದರು.

ಇವೆಲ್ಲವನ್ನು ಸ್ವತಃ ಶಾಸಕಿಯೇ ರಾಜ್ಯ ವಿಧಾನಸಭೆಗೆ ವಿವರಿಸಿದರು. ಬಿಜೆಪಿಯ ಪೊಲೀಸ್ ರಾಜ್‌ಗೆ ಪ್ರತಿಪಕ್ಷ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು. ಶಾಸಕಿ ತಮಗಾದ ಅನ್ಯಾಯ, ಅವಮಾನವನ್ನು ವಿವರಿಸಿದಾಗ 'ನಾಚಿಕೆಗೇಡು ನಾಚಿಕೆಗೇಡು' ಘೋಷಣೆ ಮೊಳಗಿತು.

ಅಂತೂ ಶಾಸಕಿಯೇ ಇಂಥ ಸನ್ನಿವೇಶವನ್ನು ಎದುರಿಸಬೇಕಾದರೆ ಇನ್ನು ಈ ಬಿಜೆಪಿ ರಾಜ್ಯದಲ್ಲಿ ಜನ ಸಾಮಾನ್ಯರ ಪಾಡು ಹೇಗಿರಬೇಕು, ಅಲ್ಲಿನ ಪೊಲೀಸ್ ಠಾಣೆಗಳಲ್ಲಿ ಏನು ನಡೆಯುತ್ತಿರಬಹುದು. ಕಲ್ಪಿಸಿಕೊಳ್ಳಿ!

ಮಾಫಿಯಾ ತಂಡದ ದುಷ್ಕೃತ್ಯ

ಕಾಮ್ರೇಡ್ ಶಂಕರಯ್ಯ ಹತ್ಯೆಗೆ ಯತ್ನ

ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಹಾಗೂ ತಮಿಳುನಾಡು ರಾಜ್ಯ ಸಮಿತಿ ಕಾರ್ಯದರ್ಶಿ ಕಾಮ್ರೇಡ್ ಎನ್. ಶಂಕರಯ್ಯ ಅವರನ್ನು ಹತ್ಯೆ ಮಾಡಲು ಪ್ರಯತ್ನ ನಡೆದಿದೆ. ಜುಲೈ 28 ರಂದು ಕಡಲೂರು ಜಿಲ್ಲೆಯ ಚಿದಂಬರಂ ಬಳಿ ಅವರು ಪ್ರಯಾಣಿಸುತ್ತಿದ್ದ ಕಾರಿನ ಮೇಲೆ ದುಷ್ಕರ್ಮಿಗಳು ಆಕ್ರಮಣ ನಡೆಸಿದ್ದು, ಕಾರು ಚಾಲಕನ ಪ್ರಸಂಗಾವಧಾನತೆಯಿಂದ ಕಾ. ಶಂಕರಯ್ಯ ಅಪಾಯದಿಂದ ಪಾರಾಗಿದ್ದಾರೆ.

ಸ್ಥಳೀಯ ಮಾಫಿಯಾ ತಂಡದಿಂದ ಎಂ.ಡಿ.ಎಂ.ಕೆ ನಾಯಕರೊಬ್ಬರ ಹತ್ಯೆಯನ್ನು ಪ್ರತಿಭಟಿಸಲು ನಡೆಯುತ್ತಿದ್ದ ಸರ್ವ ಪಕ್ಷ ಸಭೆಯಲ್ಲಿ ಪಾಲ್ಗೊಳ್ಳಲು ಕಾ. ಶಂಕರಯ್ಯ ತೆರಳುತ್ತಿದ್ದಾಗ ಅದೇ ಮಾಫಿಯಾ ತಂಡ ಸಿಪಿಐ(ಎಂ) ನ ಹಿರಿಯ ನಾಯಕನ ಹತ್ಯೆಗೆ ಯತ್ನಿಸಿತು. ಮುಖಂಡನ ಹತ್ಯೆ ಯತ್ನವನ್ನು ವಿಫಲಗೊಳಿಸಿದ ಕಾರು ಚಾಲಕ ಗಂಭೀರವಾಗಿ ಗಾಯಗೊಂಡಿದ್ದಾರೆ.

ತಾವು ಪ್ರಯಾಣಿಸುತ್ತಿದ್ದ ಹಾಗೂ ಇತರ ನಾಲ್ಕು ವಾಹನಗಳು ರೈಲ್ವೆ ಕ್ರಾಸಿಂಗ್ ದಾಟುತ್ತಿದ್ದಾಗ ಎದುರುಗಡೆಯಿಂದ ಲಾರಿಯೊಂದು ಬಂದಿತು. ಮಾರಕ ಅಸ್ತ್ರಗಳನ್ನು ಹಿಡಿದಿದ್ದ ಸುಮಾರು 50 ರಿಂದ 100 ಜನರು ಲಾರಿಯಲ್ಲಿದ್ದರು ಎಂದು ಶಂಕರಯ್ಯ ಚೆನ್ನೈನಲ್ಲಿ ಸುದ್ದಿಗೋಷ್ಠಿಯೊಂದರಲ್ಲಿ ಘಟನೆ ಬಗ್ಗೆ ವಿವರಣೆ ನೀಡುತ್ತಾ ತಿಳಿಸಿದರು.

ಏನಾಗುತ್ತಿದೆ ಎಂದು ತಿಳಿಯುವಷ್ಟರಲ್ಲಿ ಕಾರಿನ ಮುಂಭಾಗದ ಗಾಜನ್ನು ಒಡೆಯಲಾಯಿತು. ದಾಳಿಯನ್ನು ತಪ್ಪಿಸಲು ಚಾಲಕ ಯತ್ನಿಸಿದರೂ ಗಾಜು ತಾಗಿ ಅವರಿಗೆ ಗಾಯವಾಯಿತು ಎಂದರು.

ರಸ್ತೆಯಲ್ಲಿ ಸ್ವಲ್ಪ ದೂರದಲ್ಲಿ ಪೊಲೀಸರು ಬೀಡು ಬಿಟ್ಟಿದ್ದರು. ಹಾಗಾದರೆ ಅಲ್ಲಿ ಗೂಂಡಾಗಳಿಗೆ ಬರಲು ಯಾರು ಅನುಮತಿ ಕೊಟ್ಟರು ಎಂದು ಪ್ರಶ್ನಿಸಿದ ಶಂಕರಯ್ಯ, ಸಮವಸ್ತ್ರಧಾರಿ ಪೊಲೀಸರಿದ್ದರೂ ಧಾಳಿಮಾಡುವ ಧೈರ್ಯ ಅವರಿಗೆ ಹೇಗೆ ಬಂತು ಎಂದು ಕೇಳಿದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಐದು ಜನರನ್ನು ಬಂಧಿಸಲಾಗಿದೆ. ಆದರೆ ಇದು ಕಣ್ಣೊರೆಸುವ ತಂತ್ರವಾಗಿದೆ. ಬಂಧಿತ ಐವರು ಯುವಕರು ನಿಜವಾದ ಅಪರಾಧಿಗಳು ಆಗಿರಲಾರರು, ಸಮಗ್ರ ತನಿಖೆ ನಡೆಸಿ ನಿಜವಾದ ದುಷ್ಕರ್ಮಿಗಳನ್ನು ಬಂಧಿಸಬೇಕು ಎಂದು ಮಾರ್ಕ್ಸಿಸ್ಟ್ ನೇತಾರ ಒತ್ತಾಯಿಸಿದರು.

ನಿಗೂಢತೆಯನ್ನು ಬೇಧಿಸುವಲ್ಲಿ ತಮಿಳುನಾಡು ಸರಕಾರದ ವಿಶ್ವಾಸಾರ್ಹತೆಯೇ ಅವಲಂಬಿತವಾಗಿದೆ. ಎಂದು ಶಂಕರಯ್ಯ ನುಡಿದರು.

ಮಾಫಿಯಾ ವಿರುದ್ಧದ ಚಳವಳಿ ಕಾರಣ

ಚಿದಂಬರಂನಲ್ಲಿ ಜುಲೈ 9ರಂದು ಪಳನಿವೇಲು ಎಂಬ ಎಂ.ಡಿ.ಎಂ.ಕೆ ಕಾರ್ಯಕರ್ತನ ಹತ್ಯೆ ನಡೆದಿದ್ದು ಇದಕ್ಕೆ ಕಾರಣವಾದವರನ್ನು ಬಂಧಿಸಲು ಒತ್ತಾಯಿಸಿ ಸಿಪಿಐ(ಎಂ) ತೀವ್ರ ಚಳವಳಿ ನಡೆಸುತ್ತಿರುವುದೇ ಮಾರ್ಕ್ಸ್‌ವಾದಿ ಮುಖಂಡನ ಮೇಲೆ ಆಕ್ರಮಣ ನಡೆಯಲು ಕಾರಣವಾಗಿದೆ.

ಚಿದಂಬರಂನ ಒಂದು ಪ್ರಭಾವೀ ಕುಟುಂಬದ ವಿರುದ್ಧ ಎಫ್.ಐ.ಆರ್ ದಾಖಲಾಗಿದ್ದರೂ ಯಾರೊಬ್ಬರನ್ನು ಬಂಧಿಸಿಲ್ಲ. ಆದರೆ ಇನ್ನೊಂದೆಡೆ, ಪಳನಿವೇಲು ಹತ್ಯೆಯ ಆರೋಪಿಗಳೆಂದು ಶಂಕಿಸಲಾದವರಿಗೆ ಪೊಲೀಸ್ ರಕ್ಷಣೆ ನೀಡಲಾಗಿದೆ!

ಕೊಲೆ ಬೆದರಿಕೆ

ಸಿಪಿಐ(ಎಂ) ಕಡಲೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ. ಕೆ ಬಾಲಕೃಷ್ಣನ್ ಅವರಿಗೆ ಕೊಲೆ ಬೆದರಿಕೆ ಬಂದಿದ್ದು ಅವರಿಗೆ ಹಾಗೂ ಕುಟುಂಬ ಸದಸ್ಯರಿಗೆ ಪೊಲೀಸ್ ರಕ್ಷಣೆ ನೀಡುವಂತೆ ಕೋರಲಾಗಿದೆ.

ಚಿದಂಬರಂನಲ್ಲಿನ ನಿರ್ದಿಷ್ಟ ಕುಟುಂಬವೊಂದರ ಮಾಲಿಕತ್ವದ ಸಿನಿಮಾ ಮಂದಿರಗಳು ಮತ್ತು ಕಲ್ಯಾಣ ಮಂಟಪಗಳಲ್ಲಿನ 'ಸಶಸ್ತ್ರ ಗೂಂಡಾಗಳನ್ನು' ತೆರವು ಮಾಡುವಂತೆ ನೆಲ್ಲಿಕುಪ್ಪಂ ಕ್ಷೇತ್ರದ ಮಾಜಿ ಶಾಸಕ ಸಿ. ಗೋವಿಂದರಾಜನ್ (ಸಿ.ಪಿ.ಐ-ಎಂ) ಪೊಲೀಸರಿಗೆ ಮನವಿ ಮಾಡಿದ್ದರು. ಆದರೆ ಕ್ರಮ ಕೈಗೊಳ್ಳಲು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ನಿರಾಕರಿಸಿದ್ದರು. ಇದು ಆ ಕುಟುಂಬ ಹೊಂದಿರುವ ಪ್ರಭಾವವನ್ನು ತೋರಿಸುತ್ತದೆ.

ಜಿಲ್ಲೆಯಲ್ಲಿ ಹಿಂದೆ ನೂರಾರು ಕೊಲೆಗಳು ನಡೆದಿದ್ದು ಅವುಗಳನ್ನು ಇನ್ನೂ ಬೇಧಿಸಲಾಗಿಲ್ಲ. ಈ ಕೊಲೆಗಳಲ್ಲಿ ಈ ಕುಟುಂಬದ ಪಾತ್ರವಿದೆ ಎಂದು ಶಂಕಿಸಲಾಗಿದ್ದು, ಆ ಬಗ್ಗೆ ತನಿಖೆ ನಡೆಸಲು ಕ್ರಮ ಕೈಗೊಳ್ಳಲು ಸರಕಾರಕ್ಕಿದು ಸಕಾಲ.

ಕಳೆದ ಕೆಲವು ವರ್ಷಗಳಿಂದ ಈ ಕುಟುಂಬವೇ ಎಲ್ಲಾ ಸಾರಾಯಿ ಅಂಗಡಿಗಳ ಗುತ್ತಿಗೆ ಪಡೆಯುತ್ತಿತ್ತು. ಅದನ್ನು ಪಳನಿವೇಲು ಮುರಿದಿದ್ದರು. ಇದೇ ಅವರ ಕೊಲೆಗೆ ಕಾರಣವಾಗಿದೆ ಎಂಬುದು ಸ್ಪಷ್ಟವಾಗಿದೆ.

ಸಮಾಜ ಘಾತುಕ ಶಕ್ತಿಗಳ ವಿರುದ್ಧ ರಾಜಿ ರಹಿತ ಹೋರಾಟ ನಡೆಸುತ್ತಿದ್ದ ಸಿಪಿಐ(ಎಂ) ಕಾರ್ಯಕರ್ತೆ ಕಾ. ಲೀಲಾವತಿ ಅವರನ್ನು ಕಳೆದ ವರ್ಷ ತಮಿಳುನಾಡಿನ ಮಧುರೈಯಲ್ಲಿ ಹೇಯವಾಗಿ ಕೊಲೆ ಮಾಡಲಾಗಿತ್ತು. ಈಗಲೂ ಅದೇ ರೀತಿಯ ಸನ್ನಿವೇಶ ರಾಜ್ಯದಲ್ಲಿ ನೆಲೆಸಿದ್ದು ಡಿ.ಎಂ.ಕೆ ಸರಕಾರ ಇದರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದು ಅಗತ್ಯ.

ಪಾಲಿಟ್‌ಬ್ಯೂರೊ ಖಂಡನೆ

ಕಾ. ಶಂಕರಯ್ಯ ಅವರ ಮೇಲೆ ನಡೆದ ಅಕ್ರಮಣವನ್ನು ಸಿಪಿಐ(ಎಂ) ಪಾಲಿಟ್‌ಬ್ಯೂರ್‍ಯೋ ತೀವ್ರವಾಗಿ ಖಂಡಿಸಿದೆ. ಮಾಫಿಯಾ ತಂಡದ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಅದು ರಾಜ್ಯ ಸರಕಾರವನ್ನು ಒತ್ತಾಯಿಸಿದೆ.

ಅತ್ಯಾಚಾರ ಯತ್ನ ಪ್ರಕರಣ: ಒರಿಸ್ಸಾ ಎ.ಜಿ.ವಜಾಕ್ಕೆ ಆಗ್ರಹ

ಅತ್ಯಾಚಾರಕ್ಕೆ ಯತ್ನಿಸಿದ ಆರೋಪಕ್ಕೆ ಒಳಗಾಗಿರುವ ಒರಿಸ್ಸಾದ ಅಡ್ವಕೇಟ್ ಜನರಲ್ ಇಂದ್ರಜಿತ್ ರೇ ಅವರನ್ನು ವಜಾ ಮಾಡಬೇಕೆಂಬ ಬೇಡಿಕೆ ಬಲವಾಗುತ್ತಿದೆ.

ಸುಮಾರು ಒಂದು ವರ್ಷದ ಹಿಂದೆಯೇ ಈ ಘಟನೆ ನಡೆದಿತ್ತು. ಅನ್ಯಾಯಕ್ಕೆ ಒಳಗಾದ ಮಹಿಳೆಯ ಪರವಾಗಿ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ (AIDWA) ಸಹಿತ ಅನೇಕ ಮಹಿಳಾ ಸಂಘ ಸಂಸ್ಥೆಗಳು ಹೋರಾಟ ನಡೆಸಿದ್ದವು.

ಹೋರಾಟದ ಫಲವಾಗಿ ರೇ ವಿರುದ್ಧ ಆರೋಪ ಪಟ್ಟಿಯೂ ಸಲ್ಲಿಕೆಯಾಗಿತ್ತು. ಆದರೆ ರಾಜ್ಯ ಸರಕಾರ ಅವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ರೇ ರಾಜ್ಯದ ಅಡ್ವಕೇಟ್ ಜನರಲ್‌ರಾಗಿ ಮುಂದುವರಿದಿದ್ದು ಈಗ ಒತ್ತಡಕ್ಕೆ ಹೆದರಿ ರಾಜಿನಾಮೆ ನೀಡಿರುವ ಸುದ್ದಿ ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಬಂದಿದೆ. ಇದು ನಾಚಿಕೆಗೇಡು. ಭ್ರಷ್ಟ ಹಾಗೂ ನೈತಿಕತೆ ಇಲ್ಲದ ಜನರಿಗೆ ಮುಖ್ಯಮಂತ್ರಿ ಜೆ.ಬಿ. ಪಟ್ನಾಯಕ್ ಬೆಂಬಲ ನೀಡುತ್ತಿದ್ದಾರೆ ಎಂಬ ಭಾವನೆ ಜನ ರಲ್ಲಿ ಬಂದಿದೆ. ಮಹಿಳೆಯೊಬ್ಬರ ಶೀಲ ಹರಣಕ್ಕೆ ಯತ್ನಿಸಿದ ಒಬ್ಬ ಹಿರಿಯ ಅಧಿಕಾರಿ ಮೇಲೆ ಶಿಸ್ತು ಕ್ರಮ ಕೈಗೊಳ್ಳದಿದ್ದರೆ ಇನ್ನೇನಾಗುತ್ತದೆ. ಅಲ್ಲವೆ?

ಆಸಿಯನ್ ಪ್ರಾದೇಶಿಕ ವೇದಿಕೆ

ಭಾರತ ಅಣ್ವಸ್ತ್ರ ಪರೀಕ್ಷಣೆಗೆ ಖಂಡನೆಯ ಬದಲು ವಿಷಾದ

ಆಸಿಯನ್ ಪ್ರಾದೇಶಿಕ ಫೋರಂ ಏಶ್ಯಾ-ಪೆಸಿಫಿಕ್ ಹಾಗೂ ಇತರ - ಒಟ್ಟು 19 ದೇಶಗಳ ವೇದಿಕೆ. ದಕ್ಷಿಣ ಪೂರ್ವ ಏಶ್ಯಾದ ಏಳು ದೇಶಗಳ ಆಸಿಯನ್ (ASEAN) ಈ ಫೋರಂನ ಮುಖ್ಯ ಭಾಗ ಫಿಲಿಪೈನ್ಸ್‌ನ ರಾಜಧಾನಿ ಮನಿಲಾದಲ್ಲಿ ಇತ್ತೀಚೆಗೆ ನಡೆದ 5ನೇ ಫೋರಂ ದೇಶಗಳ ವಿದೇಶ ಮಂತ್ರಿಗಳ ಶೃಂಗಸಭೆಯಲ್ಲಿ ಭಾರತ ಮತ್ತು ಪಾಕಿಸ್ತಾನ ಅಣ್ವಸ್ತ್ರ ಪರೀಕ್ಷಣೆ ಮುಖ್ಯ ಚರ್ಚಾ ವಿಷಯವಾಗಿತ್ತು. ಫೋರಂನ ಅಧ್ಯಕ್ಷರ ಕರಡು ಹೇಳಿಕೆಯಲ್ಲಿ ಪ್ಯಾರಾ 21ರಲ್ಲಿ ಭಾರತ ಮತ್ತು ಪಾಕಿಸ್ತಾನದ ಅಣ್ವಸ್ತ್ರ ಪರೀಕ್ಷಣೆಗಳ ಖಂಡನೆಯನ್ನು ಅಂತಿಮ ಹೇಳಿಕೆಯಲ್ಲಿ ತಪ್ಪಿಸಲು, ತನ್ನ ಎಲ್ಲಾ ರಾಯಭಾರ ತಂತ್ರಗಳನ್ನು ಬಳಸಿ ಫಜೀತಿ ಪಡಬೇಕಾಯ್ತು. ಫೋರಂನ ಅಧ್ಯಕ್ಷರ ಕರಡು ಹೇಳಿಕೆಯಲ್ಲಿ ಭಾರತದ ಖಂಡನೆ ಮಾತ್ರವಲ್ಲ, ಎರಡೂ ದೇಶಗಳು ಎನ್‌ಪಿಟಿ ಹಾಗೂ ಸಿಟಿಬಿಟಿ ಗೆ ಯಾವುದೇ ವಿಳಂಬ, ಶರತ್ತು ಮತ್ತು ಹಿಂಜರಿಕೆ ಇಲ್ಲದೆ ಸಹಿಹಾಕಬೇಕು, ಅಣ್ವಸ್ತ್ರ ತಯಾರಿ ಹಾಗೂ ಕ್ಷಿಪಣೆಗಳ ಬಳಕೆಗೆ ತೊಡಗಬಾರದು ಎಂದೂ ಹೇಳಿಕೆ ಹೇಳಿತ್ತು. ಕರಡು ಹೇಳಿಕೆಯಲ್ಲಿ ಅಣ್ವಸ್ತ್ರ ದೇಶಗಳು ಹಾಗೂ ಸಾರ್ವತ್ರಿಕ ಅಣು ನಿಶ್ಯಸ್ತ್ರೀಕರಣದ ಬಗ್ಗೆ ಚಕಾರವಿರಲಿಲ್ಲ. ಈ ಫೋರಂನ ಅಧ್ಯಕ್ಷರ(ಈಗ ಫಿಲಿಫಿನ್ಸ್) ಹೇಳಿಕೆ ಫೋರಂನ ನಿರ್ಣಯದಲ್ಲಿಲ್ಲದಿದ್ದರೂ, ಅದರ ಒಟ್ಟಾರೆ ಅಭಿಪ್ರಾಯ ಎಂದು ಬಗೆಯಲಾಗುತ್ತದೆ. ಆದ್ದರಿಂದ ರಾಜಕೀಯ ಕಾರಣಗಳಿಗೆ ಅಣ್ವಸ್ತ್ರ ಪರೀಕ್ಷಣೆ ನಡೆಸಿರುವ ವಾಜಪೇಯಿ ಸರ್ಕಾರ ಯೋಜನಾ ಆಯೋಗದ ಉಪಾಧ್ಯಕ್ಷ ಜಸ್ವಂತ್ ಸಿಂಗ್‌ರನ್ನು ವಿಶೇಷ ರಾಯಭಾರಿಯಾಗಿ ಕಳಿಸಿತ್ತು.

ಫೋರಂನ ಶೃಂಗಸಭೆ ಅಧ್ಯಕ್ಷರ ಕರಡು ಹೇಳಿಕೆಯನ್ನು ಅಂತಿಮವಾಗಿ ಅದೇ ರೂಪದಲ್ಲಿ ಅಂಗೀಕರಿಸಿದ್ದರೆ, ಅಂತರ್‌ರಾಷ್ಟ್ರೀಯವಾಗಿ ಭಾರತದ ಮಾನ ಹೋಗುತ್ತಿತ್ತು. ಏಕೆಂದರೆ ಈ ಫೋರಂನಲ್ಲಿ ಅಮೆರಿಕ, ಚೀನಾ, ಬ್ರಿಟನ್, ರಶ್ಯಾಗಳಿದ್ದರೂ ಇದು ಮುಖ್ಯವಾಗಿ ಮೂರನೇ ಜಗತ್ತಿನ ದೇಶಗಳ ವೇದಿಕೆ ಎಂದು ಪರಿಗಣಿಸಲಾಗುತ್ತದೆ. ಅಲ್ಲದೆ ಈ ಫೋರಂನ ಸದಸ್ಯ ದೇಶವಾಗಿ ಈ ಹೇಳಿಕೆಯನ್ನು ಅನುಮೋದಿಸುವ ಅಥವಾ ಫೋರಂನಿಂದ ಹೊರಗುಳಿಯುವ ಇಕ್ಕಟ್ಟಿಗೆ ಭಾರತ ಸಿಕ್ಕಿಹಾಕಿ ಕೊಳ್ಳುತ್ತಿತ್ತು. ಆದರೆ ವಾಜಪೇಯಿ ಸರಕಾರ ತನ್ನ 'ರಾಯಭಾರ ಸಾಹಸ' ಎಂದು ಕೊಚ್ಚಿಕೊಂಡ, ಆದರೆ ನಿಜವಾಗಿಯೂ ಭಾರತದ ಹಿಂದಿನ ಅಲಿಪ್ತ ದೇಶಗಳ ನಾಯಕತ್ವ ತಂದುಕೊಟ್ಟ ನೈತಿಕಗೌರವದಿಂದ ಈ ಫಜೀತಿಯಿಂದ ಭಾರತ ಪಾರಾಯಿತು. ಫೋರಂನ ಸಭೆಯ ಮೊದಲು ಮಲೇಶ್ಯಾ, ಇಂಡೋನೇಶ್ಯಾ, ಸಿಂಗಾಪೂರ, ವಿಯೆಟ್ನಾಂ, ಲಾವೋಸ್‌ಗಳ ಜತೆ ನಡೆಸಿದ ಉಭಯ ಮಾತುಕತೆಗಳಿಂದ ಅಂತಿಮ ನಿರ್ಣಯವನ್ನು ಭಾರತದ ಪರವಾಗಿ ಬದಲಾಯಿಸಲಾಯಿತು. ಕರಡು ಹೇಳಿಕೆಯಲ್ಲಿನ 'ಭಾರತ ಮತ್ತು ಪಾಕಿಸ್ತಾನ'ಗಳ ಹೆಸರು ತೆಗೆಯಲಾಯಿತು. ಈ ಪ್ರದೇಶದಲ್ಲಿ ಅಣ್ವಸ್ತ್ರ ಪರೀಕ್ಷಣೆಯ ಖಂಡನೆ ಬದಲು ಆ ಬಗ್ಗೆ ವಿಷಾದ ವ್ಯಕ್ತಪಡಿಸಲಾಯಿತು. ಅಣ್ವಸ್ತ್ರ ದೇಶಗಳು ಸಾರ್ವತ್ರಿಕ ಅಣು ನಿಶ್ಯಸ್ತ್ರೀಕರಣದ ಬಗ್ಗೆ ಸಕಾಲಿಕ ಕ್ರಮ ತೆಗೆದುಕೊಳ್ಳಬೇಕು ಎಂದು ಅಂತಿಮ ಹೇಳಿಕೆಯಲ್ಲಿ ಹೇಳಲಾಯಿತು.

ಭಾರತದ ಮರ್ಯಾದೆ ಉಳಿಯಲು ಸಾಧ್ಯವಾದದ್ದು - ಹಿಂದಿನ ನೈತಿಕ ಗೌರವ, ರಾಯಭಾರದಿಂದಾಗಿ ಒಂದು ಕಡೆಯಾದರೆ, ಇನ್ನೊಂದು ಕಡೆ ಈ ಬಗ್ಗೆ ಫೋರಂನಲ್ಲಿ ನಿಜವಾಗಿ ಇದ್ದ ಭಿನ್ನಾಭಿಪ್ರಾಯ ಮತ್ತು ಅಮೆರಿಕದ ಮೌನದಿಂದಲೂ ಸಾಧ್ಯವಾಯಿತು. ಇದಲ್ಲದೆ ವಾಜಪೇಯಿ ಸರ್ಕಾರ ಸಿಟಿಬಿಟಿ, ಎನ್‌ಪಿಟಿ ಸಹಿ ಹಾಕಿ ಅಮೇರಿಕದ ಬೆದರಿಕೆಗೆ ಶರಣಾಗತಿ ಹೊಂದುವ ಬಗ್ಗೆ ನಡೆಸುತ್ತಿರುವ ಗುಪ್ತ ಮಾತುಕತೆಯಿಂದಾಗಿ, ಅಮೆರಿಕ ಭಾರತ 'ಪಾಕಿಸ್ತಾನಗಳನ್ನು ಫೋರಂನಿಂದ ಖಂಡಿಸುವ ಬಗ್ಗೆ ಹೆಚ್ಚು ಉತ್ಸಾಹ ತೋರಲಿಲ್ಲ. ಭಾರತ ಫೋರಂ ಅಧ್ಯಕ್ಷರ ಅಂತಿಮ ಹೇಳಿಕೆಯ ಬದಲಿಸಲಾದ ಪಾರಾ 21 ರಿಂದಲೂ ತನ್ನನ್ನು ಪ್ರತ್ಯೇಕಿಸುವ ಹೇಳಿಕೆ ನೀಡಬೇಕಾಯಿತು.

ಇರಾನ್ ಪತ್ರಿಕೆ-ನಿಷೇಧ ಉಲ್ಲಂಘಿಸಿ ಪ್ರಸಾರ

ಶರತ್ ಚಂದ್ರ

ಇರಾನ್‌ನ ಉದಾರವಾದಿ ಪತ್ರಿಕೆ ಸರ್ಕಾರದ ನಿಷೇಧ ಎರಡು ಬಾರಿ ಧಿಕ್ಕರಿಸಿ ಬೇರೆ ಹೆಸರಲ್ಲಿ ಪ್ರಕಟಗೊಳ್ಳುತ್ತಿದೆ. ಇದು ಇರಾನಿನ ಇಸ್ಲಾಮಿಕ್ ಧಾರ್ಮಿಕ ಸರ್ಕಾರದ ಎರಡು ಗುಂಪುಗಳು - ಉಗ್ರಗಾಮಿ ಹಾಗೂ ಉದಾರವಾದಿಗಳ ನಡುವೆ ನಡೆಯುತ್ತಿರುವ ಆಂತರಿಕ ಕಲಹದ ಫಲ ಸಹ. ಈಗ ಇರಾನ್‌ನ ಅಧ್ಯಕ್ಷ ಮಹಮ್ಮದ್ ಖತಮಿ ಉದಾರವಾದೀ ಗುಂಪಿನವರು. ಅವರ ಸರ್ಕಾರದ ಕೆಲವು ವಿಭಾಗಗಳು ಪತ್ರಿಕೆಗಳಿಗೆ ಸ್ವಾತಂತ್ರ್ಯ ಕೊಡಬಯಸಿದರೆ, ಇತರ ಹಲವು ವಿಭಾಗಗಳು ಇದನ್ನು ವಿರೋಧಿಸಿದ್ದಾರೆ. ಇರಾನ್‌ನ ಧಾರ್ಮಿಕ ನಾಯಕ ಚುನಾಯಿತ ಅಧ್ಯಕ್ಷರ ಆಡಳಿತದಲ್ಲಿ ಮಧ್ಯ ಪ್ರವೇಶದ ವಿರುದ್ಧ ಈ ಪತ್ರಿಕೆ ಟೀಕಿಸಿದೆ. ಉಗ್ರಗಾಮಿಗಳ ಕೈಯಲ್ಲಿರುವ ನ್ಯಾಯಾಂಗ ಪತ್ರಿಕೆ ಪ್ರಸಾರಕ್ಕೆ ನಿಷೇಧ ಹೊರಿಸಿದೆ. ಆದರೆ ಪತ್ರಿಕೆ ನಡೆಸಲು ಪರವಾನಗಿ ಕೊಡುವ ಸಾಂಸ್ಕೃತಿಕ ಮಂತ್ರಿ ಉದಾರವಾದಿ ಪ್ರತಿ ಬಾರಿ ಪತ್ರಿಕೆ ಮೇಲೆ ನಿಷೇಧವಾದಾಗ, ಮರುದಿನದಿಂದಲೇ ಪತ್ರಿಕೆ ಬೇರೆ ಹೆಸರಲ್ಲಿ ಮುಂದುವರೆಯಲು ಅನುಮತಿ ಕೊಡುತ್ತಾ ಬಂದಿದ್ದಾರೆ. ಇದು ಎರಡೂ ಬಣಗಳ ನಡುವೆ ಆಂತರಿಕ ಕದನಕ್ಕೆ ಕಾರಣವಾಗಿದೆ.

ಇತ್ತೀಚೆಗೆ ಉದಾರವಾದಿ ಟೆಹರಾನ್ ಮೇಯರ್ ಮೇಲೆ ಸುಳ್ಳು ಭ್ರಷ್ಟಾಚಾರ ಆಪಾದನೆ ಹಾಕಿ ಉಗ್ರಗಾಮಿಗಳು ಅವರನ್ನು ರಾಜಕೀಯದಿಂದ ಬುಡಮೇಲು ಮಾಡಲು ತಯಾರಿ ನಡೆಸುತ್ತಿದ್ದಾರೆ. ಇದು ಇರಾನಿನ ಇಸ್ಲಾಮಿಕ್ ಆಳುವ ಪಕ್ಷದ ಎರಡು ಗುಂಪುಗಳ ನಡುವೆ ನಡೆಯುತ್ತಿರುವ ಕಾದಾಟದ ಪ್ರತೀಕವಾಗಿದೆ.

ಈ ನಡುವೆ ಇರಾನ್ ತನ್ನ ಮಧ್ಯಂತರ ಕ್ಷಿಪಣಿ ಪರೀಕ್ಷಣೆ ನಡೆಸಿ ಅಮೆರಿಕಾ ಇಸ್ರೇಲ್‌ಗಳಲ್ಲಿ ನಡುಕ ಉಂಟುಮಾಡಿದೆ. 1300 ಕಿ.ಮಿ. ನಷ್ಟು ದೂರ ಹೋಗಬಲ್ಲ ಈ ಕ್ಷಿಪಣಿಯ ಹಾರಾಟ ನಡೆಸಲಾಗಿದೆ. ಈ ಕ್ಷಿಪಣಿ ಪರೀಕ್ಷಣೆ ಸಹ ಇರಾನ್‌ನ ಆಳುವ ಪಕ್ಷದೊಳಗಿನ ಬಿಕ್ಕಟ್ಟಿನ ಸಂಕೇತವಾಗಿದೆ.

ಸಾಮಾಜಿಕ ಆಸ್ಫೋಟದ ಅಂಚಿನಲ್ಲಿ ರಶ್ಯಾ

ಈಗಾಗಲೇ ತೀವ್ರ ಆರ್ಥಿಕ, ರಾಜಕೀಯ, ಸೈದ್ಧಾಂತಿಕ ಬಿಕ್ಕಟ್ಟಿನಲ್ಲಿರುವ ರಶ್ಯಾದ ಜನತೆಯ ಸಹನೆಯ ಕಟ್ಟೆಯೊಡೆಯುತ್ತಿದೆ. ರಶ್ಯಾ ಭಾರೀ ಸಾಮಾಜಿಕ ಆಸ್ಫೋಟದ ಅಂಚಿನಲ್ಲಿ ನಿಂತಿದೆ ಎಂದು ಹೆಚ್ಚೆಚ್ಚು ಸ್ವತಂತ್ರ ವೀಕ್ಷಕರು ಅಭಿಪ್ರಾಯ ಪಡುತ್ತಾರೆ. ಈಗಾಗಲೇ ತತ್ತರಿಸುತ್ತಿರುವ ರಶ್ಯಾದಲ್ಲಿ ಯೆಲ್ಸಿನ್ ಸರ್ಕಾರ ಐಎಂಎಫ್‌ನ 17 ಶತಕೋಟಿ ಡಾಲರುಗಳ ಸಾಲಕ್ಕಾಗಿ, ಜನರ 'ಹೊಟ್ಟೆ ಕಟ್ಟುವ' (ಹೊಟ್ಟೆ ಮೇಲೆ ಹೊಡೆಯುವ ಎಂದರೆ ಸರಿಯಾದೀತು) ಕ್ರಮಗಳನ್ನು ಘೋಷಿಸಿದೆ. ಎಲ್ಲಾ ಸರಕುಗಳ ಮೇಲೆ ಶೇಕಡಾ 5 ಮಾರಾಟ ತೆರಿಗೆ ಏರಿಸಲಾಗಿದೆ. ಈವರೆಗೆ ಮುಕ್ತವಾಗಿದ್ದ ಆಹಾರ ವಸ್ತು ಹಾಗೂ ಮಕ್ಕಳ ಆಹಾರ ವಸ್ತುಗಳ ಮೇಲೆ ಶೇಕಡಾ 10 VAT ತೆರಿಗೆ ವಿಧಿಸಲಾಗಿದೆ. ಎಲ್ಲಾ ಆಮದು ವಸ್ತುಗಳ ಮೇಲೆ ಶೇಕಡಾ 3 ಕಸ್ಟಮ್ಸ್ ಶುಲ್ಕ ವಿಧಿಸಲಾಗುವುದು. ಇಂದಿನ ರಶ್ಯಾ ದಿನಬಳಕೆಯ ಆಹಾರ ವಸ್ತುಗಳ ಪೂರೈಕೆ ಅರ್ಧದಷ್ಟು ಆಮದನ್ನು ನಂಬಿದೆ ಎಂದಾಗ ಇದರ ತೀವ್ರತೆ ಅರ್ಥವಾಗುತ್ತದೆ. ಎಲ್ಲಾ ಕೂಲಿ ಪಡೆಯುವವರಿಂದ ವಸೂಲಿ ಮಾಡುವ ಪೆನ್‌ಶನ್ ನಿಧಿಗೆ ವಂತಿಗೆಯನ್ನು ಮೂರುಪಟ್ಟು ಹೆಚ್ಚಿಸಲಾಗಿದೆ. ಬ್ಯಾಂಕ್ ಡಿಪಾಸಿಟ್ ಹಾಗೂ ಇನ್ಶೂರೆನ್ಸ್ ಪಾಲಿಸಿಗಳಿಗೆ ಇದ್ದ ತೆರಿಗೆ ವಿನಾಯ್ತಿ ತೆಗೆದುಹಾಕಿರುವುದರಿಂದ, ಇವುಗಳ ಮೇಲೆ ಶೇಕಡಾ 20 ಆದಾಯ ತೆರಿಗೆ ಕೊಡಬೇಕಾಗುತ್ತದೆ. ಪಿಂಚಣಿದಾರರು, ಹಿಂದಿನ ಉಳಿತಾಯದ ಮೇಲೆ ದಿನ ದೂಡುತ್ತಿರುವ ನಿರುದ್ಯೋಗಿಗಳಿಗೆ ಇದು ತೀವ್ರವಾಗಿ ತಟ್ಟಲಿದೆ. ಇಂದಿನ ರಶ್ಯಾದ ಅತ್ಯಲ್ಪ ವೇತನದ ಜಮಾನಾದಲ್ಲಿ ಲಕ್ಷಾಂತರ ರಶ್ಯನ್ನರ ಎರಡು ಉದ್ಯೋಗಗಳಿಂದ ಹೊಟ್ಟೆ ಹೊರೆಯುತ್ತಾರೆ. ಈಗ ಎರಡನೇ ಉದ್ಯೋಗದ ವೇತನದ ಮೇಲೆ ಶೇಕಡಾ 20 ರಷ್ಟು ಅಧಿಕ ಆದಾಯ ತೆರಿಗೆ ತೆರಬೇಕಾಗುತ್ತದೆ.

ಹೀಗೆ ಐಎಂಎಫ್ 17 ಶತಕೋಟಿ ಡಾಲರಿಗಾಗಿ ಜನರ ಮೇಲೆ ಹೊಟ್ಟೆ ಹೊಡೆಯಲಾಗುತ್ತಿದೆ. ಆದರೆ ರಶ್ಯಾದ ತೀವ್ರ ಆರ್ಥಿಕ ಸಮಸ್ಯೆಯನ್ನು ಇದು ಉಲ್ಬಣಗೊಳಿಸಿದೆ. ಇಂದಿನ ಅದರ ಬಿಕ್ಕಟ್ಟಿನ ಮುಂದೆ ಐಎಂಎಫ್ ಕೊಟ್ಟಿರುವುದು ಪುಡಿಗಾಸು. ರಶ್ಯಾದ ಬಜೆಟ್‌ನ ಕೊರತೆ 16.6 ಶತಕೋಟಿ ಡಾಲರುಗಳು, ಸಾಲ 23.3 ಶತಕೋಟಿ ಡಾಲರುಗಳು, ಪಾವತಿ ಮಾಡದ ವೇತನ ಬಾಕಿ 14 ಶತಕೋಟಿ ಡಾಲರುಗಳು ಎಂದು ನೆನಪಿಸಿಕೊಂಡಾಗ ರಶ್ಯ ಎಂತಹ ಅಗ್ನಿಪರ್ವತದ ಮೇಲೆ ಕುಳಿತಿದೆ ಎಂದು ಗೊತ್ತಾಗುತ್ತದೆ.

ಈಗಾಗಲೇ 3 ಕೋಟಿ ರಶ್ಯನ್ನರು ಬಡತನದ ರೇಖೆಯ ಕೆಳಗೆ ಇದ್ದು, ಇನ್ನೂ ಲಕ್ಷಾಂತರ ಜನ ಉದ್ಯೋಗಿಗಳು ವೇತನ ಇಲ್ಲದೆ ಬಡತನ ರೇಖೆಯ ಕೆಳಗೆ ಹೋಗುತ್ತಿದ್ದಾರೆ. ಐಎಂಎಫ್ ಸಾಲ ದಿಂದ ಆದರ ಶರತ್ತಿನ 'ಹೊಟ್ಟೆ ಕಟ್ಟುವ' ಕ್ರಮಗಳಿಂದ ರಶ್ಯಾದ ಆರ್ಥಿಕತೆ ಇನ್ನಷ್ಟು ಕುಸಿಯುತ್ತದೆ ಎಂದು ಹಲವಾರು ಸ್ವತಂತ್ರ ಅರ್ಥತಜ್ಞರು ಹೇಳಿದ್ದಾರೆ. ಉತ್ಪಾದನೆಯಲ್ಲಿ ಬೇಡಿಕೆಯಲ್ಲಿ ಕಡಿತದಿಂದ ರಶ್ಯಾದ ರೂಬಲ್‌ನ ಬೆಲೆ ಕೆಲವೇ ತಿಂಗಳಲ್ಲಿ ಶೇಕಡಾ 50 ರಷ್ಟು ಕುಸಿದರೂ ಆಶ್ಚರ್ಯವಿಲ್ಲ ಎನ್ನುತ್ತಾರೆ ಅವರು.

ಈ ಆಸ್ಫೋಟಕಾರಿ ಪರಿಸ್ಥಿತಿ ವಿರುದ್ಧ ಪ್ರತಿರೋಧ ಈಗಾಗಲೇ ಆರಂಭವಾಗಿದೆ. ದೇಶದ ಆರು ಲಕ್ಷ ಗಣಿಕಾರ್ಮಿಕರು ಹಲವು ತಿಂಗಳುಗಳಿಂದ ಮುಷ್ಕರ, ಧರಣಿ ಸತ್ಯಾಗ್ರಹಗಳಿಂದ ತಮ್ಮ ಹಲವು ತಿಂಗಳ ಬಾಕಿ ವೇತನಕ್ಕಾಗಿ ಒತ್ತಾಯಿಸುತ್ತಿದ್ದಾರೆ. ಗಣಿ ಕಾರ್ಮಿಕರು ತಮ್ಮ ಪ್ರತಿಭಟನೆಯ ಭಾಗವಾಗಿ ಹಲವಾರು ಕಡೆ ರೈಲುಗಳನ್ನು ತಡೆ ಹಿಡಿದಿರುವುದರಿಂದ ವಿದ್ಯುತ್ ಕೊರತೆ ತೀವ್ರವಾಗುತ್ತಿದೆ. ಹಲವಾರು ವಿದ್ಯುತ್ ಸ್ಥಾವರಗಳು ಕಲ್ಲಿದ್ದಲಿನ ಅಭಾವದಿಂದ 'ಪವರ್ ಕಟ್' ಆರಂಭಿಸಿವೆ. ರಶ್ಯದ ದೂರಪೂರ್ವದ ಸಖಾಲಿನ್ ದ್ವೀಪದಲ್ಲಿ ಈಗಾಗಲೇ 14 ಗಂಟೆಗಳ 'ಪವರ್ ಕಟ್' ಇದ್ದು ಇನ್ನು ಕೆಲವೇ ದಿನಗಳಲ್ಲಿ ನೀರಿನ ಪಂಪ್ ಸ್ಟೇಷನ್, ಆಸ್ಪತ್ರೆ ಮುಂತಾದ ಅವಶ್ಯ ಸೇವೆ ಬಿಟ್ಟು ಎಲ್ಲರಿಗೂ 'ವಿದ್ಯುತ್ ಕಡಿತ' ತರಬೇಕಾದ ಪರಿಸ್ಥಿತಿ ಇದೆ.

ಈ ನಡುವೆ ಅಧ್ಯಕ್ಷ ಯೆಲ್ಸಿನ್‌ಗೆ ತೀವ್ರ ರಾಜಕೀಯ ಸವಾಲು ಹೆಚ್ಚುತ್ತಿದೆ. ಪಾರ್ಲಿಮೆಂಟಿನ ಸದನದಲ್ಲಿ ಅಧ್ಯಕ್ಷತೆ ಮೇಲೆ ದೋಷಾರೋಪಣೆಗೆ ಸಮಿತಿ ನೇಮಿಸಲಾಗಿದೆ. ಮೇಲ್ಮನೆಯಲ್ಲಿ ರಾಜ್ಯಗಳ ಸದಸ್ಯರು, ಅಧ್ಯಕ್ಷರು ತಮ್ಮ ಅಧಿಕಾರದ ದೊಡ್ಡ ಭಾಗವನ್ನು ಪಾರ್ಲಿಮೆಂಟಿಗೆ ಬಿಟ್ಟುಕೊಡಬೇಕೆಂದು ಒತ್ತಾಯಿಸಿದೆ.

12 ಪ್ರಾಂತೀಯ ಪಾರ್ಲಿಮೆಂಟುಗಳು ಅಧ್ಯಕ್ಷ ಯೆಲ್ಸಿನ್ ರಾಜೀನಾಮೆ ಕೊಡಬೇಕೆಂದು ನಿರ್ಣಯ ಮಂಜೂರು ಮಾಡಿವೆ. ಇತ್ತೀಚಿನ ಸಮೀಕ್ಷೆ ಒಂದರಲ್ಲಿ ಶೇಕಡಾ 80 ಜನ ಯೆಲ್ಸಿನ್ ರಾಜೀನಾಮೆ ಕೊಡಬೇಕೆಂದು ಅಭಿಪ್ರಾಯ ಪಟ್ಟರಂತೆ.

ಇದಕ್ಕೆಲ್ಲ ಯೆಲ್ಸಿನ್ ಸರ್ಕಾರದ ಪ್ರತಿಕ್ರಿಯೆ ಎಂದರೆ, ಪ್ರತಿಭಟನೆಯನ್ನು ಪ್ರಭುತ್ವ ಬಲದಿಂದ ಹತ್ತಿಕ್ಕುವುದು. ಫೆಡರಲ್ ಭದ್ರತಾ ಸೇವಾ ವಿಭಾಗದ ಮುಖ್ಯಸ್ಥನನ್ನು ಯೆಲ್ಸಿನ್ ಇತ್ತೀಚೆಗೆ ಬದಲಾಯಿಸಿರುವುದು ಇದರ ಪ್ರತೀಕ. ಗಣಿ ಕಾರ್ಮಿಕರ ವಿರುದ್ಧ ಸೈನ್ಯ ಬಳಸುವುದಾಗಿ ಸರ್ಕಾರ ಈಗಾಗಲೇ ಬೆದರಿಸುತ್ತಿದೆ. ಗಣಿ ಕಾರ್ಮಿಕರು ಸವಿನಯ ಕಾಯಿದೆ ಭಂಗ ಚಳುವಳಿ ಆರಂಭಿಸುವುದಾಗಿ ಪ್ರತಿ-ಬೆದರಿಕೆ ಹಾಕಿದ್ದಾರೆ. ಸೈನ್ಯದ ಬಲ ಕಡಿಮೆ ಮಾಡಲಾಗುತ್ತಿದ್ದರೂ ಆಂತರಿಕ ಭದ್ರತಾ ಪಡೆಗಳ ಬಲವನ್ನು 2.2 ಲಕ್ಷಕ್ಕೇರಿಸಲಾಗಿದೆ. ತನ್ನ ಇದ್ದಬದ್ದ ಎಲ್ಲಾ ಜನಬೆಂಬಲ ಕಳೆದುಕೊಂಡಿರುವುದರಿಂದ ಯೆಲ್ಸಿನ್ ಭದ್ರತಾಪಡೆಗಳನ್ನು ಬಳಸಿ ಮಾತ್ರ ಆಳಲು ಸಾಧ್ಯ. ಆದರೆ ರಶ್ಯನರ ಸಹನೆಯ ಕಟ್ಟೆ ಒಡೆದಾಗ ಏನಾಗುತ್ತದೆ ಎಂಬುದು ಯೆಲ್ಸಿನ್ ಅರಿವಿಗೂ ಮೀರಿದ್ದು.

ಜೆ.ಎಂ.ಎಸ್. ಕಮಲಾಪುರ ವಲಯ ಸಮ್ಮೇಳನ

ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ವಲಯ ಮಟ್ಟದ ಜೆ.ಎಂ.ಎಸ್.ನ ಪ್ರಥಮ ಸಮ್ಮೇಳನವು ಜುಲೈ 31 ರಂದು ನಡೆಯಿತು. ಸಮ್ಮೇಳನವು ಸ್ಥಳೀಯ ಸಮಸ್ಯೆಗಳ ಜೊತೆಗೆ ಮಹಿಳೆಯರ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸಿ ಕೂಡಲೇ ಪರಿಹರಿಸುವಂತೆ ಒತ್ತಾಯಿಸುವ ನಿರ್ಣಯವನ್ನು ಕೈಗೊಂಡಿತು.

ಸಮ್ಮೇಳನದ ಅಂಗವಾಗಿ ರ್‍ಯಾಲಿ ಮತ್ತು ಬಹಿರಂಗ ಸಭೆಯನ್ನು ನಡೆಸಲಾಯಿತು. ಕಮಲಾಪುರ ಗ್ರಾಮ ಪಂಚಾಯತ್ ಅಧ್ಯಕ್ಷೆ ಚಂಪಾ ಬಾಯಿ ಅಧ್ಯಕ್ಷತೆಯಲ್ಲಿ ನಡೆದ ಸಭೆಗೆ ರಾಜ್ಯ ಪ್ರಧಾನ ಕಾರ್ಯದರ್ಶಿ ನೀಲಾ. ಕೆ ಅತಿಥಿಗಳಾಗಿ ಮಾತನಾಡಿ, ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ, ಹಲ್ಲೆಗಳನ್ನು ಒಗ್ಗಟ್ಟಾಗಿ ಎದುರಿಸಬೇಕೆಂದು, ಮಹಿಳೆಯರಿಗೆ ಶೇ. 33 ಮೀಸಲಾತಿ ನೀಡುವ ಬಗ್ಗೆ ಸರ್ಕಾರದ ನಿಲುವನ್ನು ಖಂಡಿಸಿದರು. ಅತಿಥಿಗಳಾಗಿ ಕರ್ನಾಟಕ ಪ್ರಾಂತ ರೈತ ಸಂಘದ ವಿರುಪಾಕ್ಷ ತಡಕಲ್ ಮಹಿಳೆಯರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು.

ನೂತನ ಸಮಿತಿ: ಅಧ್ಯಕ್ಷರಾಗಿ ಉಮಾದೇವಿ ಮಡಪತಿ ಸಾವರಗಿ, ಉಪಾಧ್ಯಕ್ಷರುಗಳಾಗಿ ಲಲಿತಾ ಬಾಯಿ ಜಿವಣಗಿ, ಮಹಾದೇವಿ ತಡಕಲ್, ಕಾರ್ಯದರ್ಶಿ ಸರು ಭಾಯಿ ಗೌರೆ, ಸಹ ಕಾರ್ಯದರ್ಶಿ ವಿದ್ಯಾವತಿ ಮತ್ತು 15 ಸದಸ್ಯರ ಕಾರ್ಯಕಾರಿ ಮಂಡಳಿಯನ್ನು ಸಮ್ಮೇಳನ ಆಯ್ಕೆಮಾಡಿತು.



ಡಿವೈಎಫ್‌ಐ ಘಟಕಗಳ ರಚನೆ

ಬೆಂಗಳೂರು: ನಗರದ ಟಿ .ದಾಸರಹಳ್ಳಿ ಪ್ರದೇಶ ಸಮಿತಿ ವ್ಯಾಪ್ತಿಯಲ್ಲಿರುವ ಶ್ರೀಗಂಧ ನಗರ 2ನೇ ಹಂತ ಹಾಗೂ ರಾಜೀವ್ ಗಾಂಧಿ ನಗರ ವಿಭಾಗದಲ್ಲಿ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ನೂತನ ಘಟಕಗಳು ಜುಲೈ 26 ರಂದು ಜಿಲ್ಲಾಮುಖಂಡ ಟಿ.ಎಂ.ರಾಮಕೃಷ್ಣ ಮಾರ್ಗದರ್ಶನದಲ್ಲಿ ರಚನೆಗೊಂಡವು.

ಶ್ರೀಗಂಧನಗರ ಸಮಿತಿಯ ಪದಾಧಿಕಾರಿಗಳು: ಅಧ್ಯಕ್ಷರು-ಎಂ.ಲಕ್ಷ್ಮಣ, ಉಪಾಧ್ಯಕ್ಷರು-ತಿಮ್ಮೇಗೌಡ, ಕಾರ್ಯದರ್ಶಿ-ಹೆಚ್.ಎಸ್.ಸಿದ್ದರಾಜು ಮತ್ತು ಖಜಾಂಚಿಯಾಗಿ ಎನ್.ನರಸಿಂಹ ರಾಜ್ ಒಳಗೊಂಡಂತೆ 10 ಸದಸ್ಯರ ಸಮಿತಿ ರಚನೆಯಾಯಿತು.

ರಾಜೀವ್ ಗಾಂಧಿ ನಗರ: ಅಧ್ಯಕ್ಷರು-ಲಿಂಗೇಗೌಡ, ಉಪಾಧ್ಯಕ್ಷ-ಶೇಖರ್, ಕಾರ್ಯದರ್ಶಿ-ಮಾರಣ್ಣ, ಸಹ ಕಾರ್ಯದರ್ಶಿ-ಯಶೋದ, ಸಾವಿತ್ರಮ್ಮಮತ್ತು ಖಜಾಂಚಿಯಾಗಿ ವನಜಾಕ್ಷಿ ಸೇರಿ 12 ಸದಸ್ಯರು ಕಾರ್ಯಕಾರಿ ಸಮಿತಿ ರಚನೆಯಾಯಿತು.

ಈ ಸಂದರ್ಭದಲ್ಲಿ ಸ್ಥಳೀಯ ಡಿವೈಎಫ್‌ಐ ಮುಖಂಡರು ಹಾಜರಿದ್ದರು.

ಮಂಗಳೂರು: ಜುಲೈ 9 ರಂದು ನಡೆದ ಮಂಗಳೂರು ನಗರ ಡಿವೈಎಫ್‌ಐ ನ ವಿಸ್ತೃತ ಸಭೆಯು ಜಿಲ್ಲಾ ಸಹಕಾರ್ಯದರ್ಶಿ ರಾಮದಾಸ್‌ರ ಅಧ್ಯಕ್ಷತೆಯಲ್ಲಿ ಸೇರಿ ನೂತನ ನಗರ ಸಮಿತಿಯನ್ನು ಆಯ್ಕೆ ಮಾಡಿತು. ಹಾಗೂ ಜಿಲ್ಲೆಯ ಕೆತ್ತಿಕಲ್‌ನಲ್ಲಿ ಸಂಭವಿಸಿದ ಭೂ ಕುಸಿತ ಪರಿಣಾಮದಿಂದಾಗಿ ಮನೆ ಮಠ ಕಳೆದುಕೊಂಡ 32 ಕುಟುಂಬಗಳಿಗೆ ಸರ್ಕಾರ ಮಧ್ಯ ಪ್ರವೇಶಿಸಿ ಶೀಘ್ರ ಪರಿಹಾರ ನೀಡುವಂತೆ ಒತ್ತಾಯಿಸಿದೆ.

ಹೊಸಸಮಿತಿ

ಅಧ್ಯಕ್ಷರು:ಸುನೀಲ್ ಕುಮಾರ್ ಬಜಾಲ್, ಕಾರ್ಯದರ್ಶಿ ಎನ್.ಕೆ.ಶೆಟ್ಟಿ, ಉಪಾಧ್ಯಕ್ಷರುಗಳಾಗಿ-ಭಾಸ್ಕರ್.ಕೆ, ಉದಯಚಂದ್ರ ರೈ, ತಾರಾನಾಥ ಮತ್ತು ಸಾಮ್ಯುವೆಲ್ ಟೈಟಸ್, ಜತೆ ಕಾರ್ಯದರ್ಶಿಗಳು-ಅಶೋಕ್ ಸಾಲ್ಯಾನ್, ಶಶಿಧರ ಶಕ್ತಿನಗರ, ಸಂದೀಪ್ ಕುಮಾರ್ ಬಜಾಲ್, ನೆಲ್ಸನ್ ರೂಚ್ ಹಾಗೂ ಕೋಶಾಧಿಕಾರಿಯಾಗಿ ರವಿಚಂದ್ರ ಕೊಂಚಾಡಿ ಆಯ್ಕೆಗೊಂಡರು.

ಲಕ್ಷ್ಮಣ ನಗರ ಘಟಕ ರಚನೆ

ಅಧ್ಯಕ್ಷರು-ಶಿವಕುಮಾರ್, ಉಪಾಧ್ಯಕ್ಷರು-ರಮೇಶ್, ಕಾರ್ಯದರ್ಶಿ-ಸಿ. ಗಂಗರಾಜು, ಸಹ ಕಾರ್ಯದರ್ಶಿಗಳು-ಕುಮಾರ್ ಚಂದ್ರಶೇಖರ್ ಮತ್ತು ಖಜಾಂಚಿಯಾಗಿ ಬಿ.ಜಿ. ನಾಗರಾಜ್ ಜೊತೆಗೆ 10 ಸದಸ್ಯರ ಕಾರ್ಯಕಾರಿ ಸಮಿತಿ ಆಯ್ಕೆಗೊಂಡಿತು.

ಎಸ್.ಎಫ್.ಐ. ಮಂಗಳೂರು ನಗರ ಸಮಿತಿ

ಜುಲೈ 4 ರಂದು ಸೇರಿದ್ದ ಭಾರತ ವಿದ್ಯಾರ್ಥಿ ಫೆಡರೇಷನ್ ನಗರ ಸಮಿತಿಯ ಸರ್ವಸದಸ್ಯರ ಸಭೆಯು ಹೊಸ ನಗರ ಸಮಿತಿಯನ್ನು ಆಯ್ಕೆ ಮಾಡಿತು.

ಅಧ್ಯಕ್ಷರು: ಸ್ಟೀವನ್‌ವಾಸ್, ಕಾರ್ಯದರ್ಶಿ! ವಿನಾಯಕ.ಕೆ, ಉಪಾಧ್ಯಕ್ಷರುಗಳಾಗಿ-ನಾಗರಾಜ್ ಬಜಾಲ್, ವಿ.ಸುನೀತಾರಾವ್, ಕಿಶೋರ್ ಕುಮಾರ್ ಹಾಗೂ ಸಹಕಾರ್ಯದರ್ಶಿಗಳು-ಡಿ.ವಿನಯನೇತ್ರ, ಸಂತೋಷ್, ವಿಕಾಸ್ ಕಟ್ಟೆ, ಸತ್ಯವತಿ

ವಿಜ್ಞಾನಿಗಳಿಗೆ ಅಮೆರಿಕಾ ಬಿಡಲು ಆದೇಶ
ಸಾಮ್ರಾಜ್ಯಶಾಹಿಯ ಇನ್ನೊಂದು ಬಲತ್ಕಾರ ತಂತ್ರ

ಸಂಶೋಧನಾ ಕಾರ್ಯಕ್ರಮದಲ್ಲಿ ತೊಡಗಿರುವ ಕೆಲವು ವಿಜ್ಞಾನಿಗಳನ್ನು ಅಮೆರಿಕಾ ಬಿಟ್ಟು ಹೋಗುವಂತೆ ಅಮೆರಿಕನ್ ಸರಕಾರ ಹೇಳಿರುವುದನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ. ಇದೊಂದು ಭಾರತದ ಕೈ ತಿರುಚುವ ಕ್ರಮ ಎಂದಿರುವ ಪೊಲಿಟ್‌ಬ್ಯೂರೋ ಇದು ಅಂತರ್‌ರಾಷ್ಟ್ರೀಯ ಒಡಂಬಡಿಕೆಗಳಿಗೆ ವಿರುದ್ಧವಷ್ಟೇ ಅಲ್ಲ, ಇಡೀ ಮಾನವ ಕುಲದ ಆಸ್ತಿಯಾದ ವೈಜ್ಞಾನಿಕ ಜ್ಞಾನ ಪ್ರಚಾರಕ್ಕೆ ಮಿತಿ ಹಾಕುವಂತದ್ದು ಎಂದಿದೆ. ಬಹಳಷ್ಟು ಸಂಖ್ಯೆಯಲ್ಲಿ ಭಾರತೀಯ ಮೂಲದ ವಿಜ್ಞಾನಿಗಳು ಅಮೆರಿಕದ ವೈಜ್ಞಾನಿಕ ಹಾಗೂ ತಂತ್ರಜ್ಞಾನ ಅಭಿವೃದ್ಧಿಗೆ ಅಪಾರ ಕಾಣಿಕೆ ನೀಡುತ್ತಿದ್ದಾರೆ ಎಂಬುದನ್ನು ಅಮೆರಿಕಾ ಅರಿಯಬೇಕು. ಆದ್ದರಿಂದ ತನಗೆ ಮನಬಂದಲ್ಲಿ ಮಾತ್ರ ಭಾರತದ ವಿಜ್ಞಾನಿಗಳು ಬೇಡ ಅನ್ನಲು ಅಮೆರಿಕನ್ ಆಡಳಿತಕ್ಕೆ ಸಾಧ್ಯವಿಲ್ಲ. ಭಾರತೀಯ ಜನತೆ ಭಾರತೀಯ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯ ಕತ್ತು ಹಿಸುಕುವ ಇಂತಹ ಕ್ರಮಗಳನ್ನು ಸಹಿಸುವುದಿಲ್ಲ ಎಂದು ಎಚ್ಚರಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಅಮೆರಿಕನ್ ಸಾಮ್ರಾಜ್ಯಶಾಹಿಯ ಈ ಬಲಾತ್ಕಾರ ತಂತ್ರವನ್ನು ಪ್ರತಿಭಟಿಸಬೇಕು ಎಂದು ಭಾರತೀಯ ಜನತೆಗೆ ಕರೆ ನೀಡಿದೆ.

ಟಾಟಾ ಏರ್‌ಲೈನ್ಸ್‌ಗೆ ಮಂಜೂರಾತಿ ಬೇಡ
ಪ್ರಧಾನಿಗೆ ಸುರ್ಜಿತ್ ಪತ್ರ

ಟಾಟಾ ಏರ್‌ಲೈನ್ಸ್ 40 ಶೇ. ವಿದೇಶಿ ಇಕ್ವಿಟಿಯೊಂದಿಗೆ ಒಂದು ಆಂತರಿಕ ವಿಮಾನ ಸೇವೆ ಆರಂಭಿಸುವ ಪ್ರಸ್ತಾವವನ್ನು ಸರಕಾರದ ಮುಂದಿಟ್ಟಿದ್ದು ಅದಕ್ಕೆ ಬಿಜೆಪಿ ನೇತೃತ್ವದ ಸರಕಾರ ಅನುಮತಿ ನೀಡುವ ಸಂಭವವಿದೆ. ಈ ರೀತಿ ಅನುಮತಿ ನೀಡಬಾರದೆಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್‌ರವರು ಪ್ರಧಾನ ಮಂತ್ರಿ ವಾಜಪೇಯಿಯವರಿಗೆ ಜುಲೈ 24 ರಂದು ಒಂದು ಪತ್ರ ಬರೆದಿದ್ದಾರೆ. ಸಂಯುಕ್ತ ರಂಗ ಸರಕಾರದ ಅಧಿಕಾರಾವಧಿಯಲ್ಲೂ ಈ ಪ್ರಸ್ತಾಪ ಬಂದಿದ್ದು ಆಗಲೂ ಸುರ್ಜಿತ್‌ರವರು ಇದನ್ನು ವಿರೋಧಿಸಿದ್ದರು.

ಈಗಾಗಲೇ ಇಂಡಿಯನ್ ಏರ್‌ಲೈನ್ಸ್‌ನ ಪೂರ್ಣ ಸಾಮರ್ಥ್ಯದ ಬಳಕೆಯಾಗುತ್ತಿಲ್ಲ. ಇನ್ನೊಂದು ಪ್ರಮುಖ ಖಾಸಗಿ ಏರ್‌ಲೈನ್ಸ್ ಬಂದರೆ ಇದು ಇಂಡಿಯನ್ ಏರ್‌ಲೈನ್ಸ್‌ನ್ನು ಹಾಳುಗೆಡವುತ್ತದೆ. ಕೇಂದ್ರ ಬಜೆಟ್ ಭಾಷಣದಲ್ಲಿ ಸರಕಾರ ಇಂಡಿಯನ್ ಏರ್‌ಲೈನ್ಸ್‌ನ 51% ಶೇರುಗಳನ್ನು ಮಾರುವ ಮಾತಾಡಿದೆ. ಇದು ಇಂಡಿಯನ್ ಏರ್‌ಲೈನ್ಸ್‌ನ್ನು ಒಂದು ಖಾಸಗಿ ಉದ್ಯಮವಾಗಿಸುತ್ತದೆ. ಟಾಟಾ ಏರ್‌ಲೈನ್ಸ್ ಪ್ರಸ್ತಾವದ ಜೊತೆಗಂತೂ ಇದು ವಿಮಾನಯಾನ ವಲಯವನ್ನು ಸಂಪೂರ್ಣವಾಗಿ ಖಾಸಗೀಕರಿಸುವ ಪ್ರಯತ್ನವಾಗುತ್ತದೆ ಎಂದು ಸುರ್ಜಿತ್ ಎಚ್ಚರಿಸಿದ್ದಾರೆ.

ಇಂಡಿಯನ್ ಏರ್‌ಲೈನ್ಸ್‌ನ್ನು ಒಂದು ರಾಷ್ಟ್ರೀಯ ಆಂತರಿಕ ಯಾನವಾಗಿ ಸಾರ್ವಜನಿಕ ರಂಗದಲ್ಲಿ ಉಳಿಸಿ ಬಲಿಷ್ಠಗೊಳಿಸಬೇಕು. ಆದ್ದರಿಂದ ಭಾರತ ಸರಕಾರ ಟಾಟಾ ಏರ್‌ಲೈನ್ಸ್ ಪ್ರಸ್ತಾವಕ್ಕೆ ಮಂಜೂರಾತಿ ನೀಡುವುದಿಲ್ಲ ಎಂದು ಸುರ್ಜಿತ್ ತಮ್ಮ ಪತ್ರದಲ್ಲಿ ನಿರೀಕ್ಷಿಸಿದ್ದಾರೆ. ಈ ಸಂದರ್ಭದಲ್ಲಿ ಇಂಡಿಯನ್ ಏರ್‌ಲೈನ್ಸ್‌ನ ನೌಕರರ ಸಂಘಟನೆಗಳ ಮನವಿಯ ಪ್ರತಿಯನ್ನು ಸುರ್ಜಿತ್ ಪ್ರಧಾನಿಗಳಿಗೆ ಕಳಿಸಿ ಈ ಮಂಜೂರಾತಿಯನ್ನು ಕೊಡದಿರುವ ವಿಷಯವನ್ನು ಪರಿಶೀಲಿಸಬೇಕು ಎಂದು ವೈಯಕ್ತಿಕವಾಗಿ ಕೇಳಿಕೊಂಡಿದ್ದಾರೆ.

..................ನೀರುಣಿಸುವುದು ಯಾವಾಗ?

ಪುಟ 5 ರಿಂದ

ಇದೇ ಮಾತು ಅನ್ವಯವಾಗುತ್ತದೆ. ಇವರಿಗೆಲ್ಲಾ ಕೃಷ್ಣ ನದಿಯ ನೀರು ರೈತರ ಹೊಲಕ್ಕೆ ಹರಿಯಬೇಕೆಂಬ ಅಭಿಲಾಷೆಗಿಂತ್ತ ಹೆಚ್ಚಾಗಿ ಈ ಪ್ರಚಾರದ ಮೂಲಕ ಮುಂಬರುವ ಚುನಾವಣೆಗಳಲ್ಲಿ ರೈತರ ಮತಗಳು ತಮ್ಮ ಬುಟ್ಟಿಗೆ ಬೀಳಲೆಂಬ ಆಸೆಯೇ ಪ್ರಧಾನವಾಗಿದೆಂದು ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರ ಚಟುವಟಿಕೆಗಳಿಂದ ಕಂಡುಬರುತ್ತದೆ. ಬಿಜಾಪುರ ಗುಲ್ಬರ್ಗಾ, ರಾಯಚೂರು ಜಿಲ್ಲೆಗಳ ಕರ್ನಾಟಕ ಪ್ರಾಂತ ರೈತ ಸಂಘದ ಘಟಕಗಳು ನಿರಂತರವಾಗಿ ಧರಣಿ, ಮತ ಪ್ರದರ್ಶನ, ಜಾಥಾ, ಉಪವಾಸ ಸತ್ಯಾಗ್ರಹಗಳಂಥ ಹೋರಾಟಗಳನ್ನು ನಡೆಸುತ್ತಿರುವಾಗ ಭೀಮಣ್ಣ ಖಂಡ್ರೆ ಮತ್ತು ಯಡಿಯೂರಪ್ಪನವರು ಹೇಳಿಕೆಗಳಲ್ಲಿಯೇ ತಲ್ಲೀನರಾಗಿದ್ದಾರಷ್ಟೆ. ಬಂಡವಾಳಶಾಹಿ ಪತ್ರಿಕೆಗಳು ಇಂಥ ಮುಖಂಡರ ಹೇಳಿಕೆಗಳಿಗೆ ದಪ್ಪಕ್ಷರದ ಪ್ರಚಾರ ಕೊಡುತ್ತಿವೆಯಲ್ಲದೆ ರೈತ ಸಂಘಗಳು ನಡೆಸುತ್ತಿರುವ ಚಳುವಳಿಗಳಿಗಲ್ಲ.

ಬಚಾವತ್ ಆಯೋಗದ ಅವಾರ್ಡಿನಂತೆ ಕೃಷ್ಣಾ ನದಿಯ ಹರಿಯುವ ನಮ್ಮ ಪಾಲಿನ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳುವ ಯೋಜನೆಗಳನ್ನು ತುರ್ತಾಗಿ ಪೂರ್ಣಗೊಳಿಸಲು ಸರಕಾರ ಕೊನೆಗೂ ಎಚ್ಚೆತ್ತುಕೊಂಡಂತೆ ಕಾಣುತ್ತದೆ. ಆದರೆ ಇಷ್ಟು ವರ್ಷಗಳಲ್ಲಿ ಆಗದ ಕೆಲಸ ಇನ್ನು ಎರಡೇ ವರ್ಷಗಳಲ್ಲಿ ಮುಗಿಸಲು ಸಾಧ್ಯವೇ? ಇನ್ನು 2 ವರ್ಷಗಳಲ್ಲಿ ಈ ಎಲ್ಲಾ ಯೋಜನೆ ಮುಗಿಯ ಬೇಕಾದರೆ ದಿನಕ್ಕೆ 10 ಕೋಟಿ ರೂಪಾಯಿ ಖರ್ಚುಮಾಡಬೇಕು. ಇದಕ್ಕೆ ಬೇಕಾದಷ್ಟು ಸಂಪನ್ಮೂಲವನ್ನು ಸರಕಾರ ಏನಾದರೂ ಮಾಡಿ ಸಂಗ್ರಹಿಸಿದರೂ ಕೂಡ, ಯೋಜನೆಗಳನ್ನು ನಿರ್ಮಿಸುವುದಕ್ಕೆ ಬೇಕಾದ ಮೂಲ ಸೌಲಭ್ಯಗಳು, ತಾಂತ್ರಿಕ ಸಿಬ್ಬಂದಿ, ಯಂತ್ರೋಪಕರಣಗಳು, ತಂತ್ರಜ್ಞಾನ ಇವೆಯೇ? ಇತರ ನಡೆದಿರುವ ಯೋಜನಾ ಪ್ರದೇಶಗಳಿಂದ 2 ವರ್ಷದ ಮಟ್ಟಿಗೆ ಇವುಗಳನ್ನೆಲ್ಲ ಒದಗಿಸಲು ಸಾಧ್ಯವೇ ಎಂಬುದರ ಕುರಿತು ಗಂಭೀರ ಚಿಂತನೆ ಅಗತ್ಯ. ಅವಧಿಯೊಳಗೆ ಯೋಜನೆಗಳನ್ನು ಮಾಡಿ ಪೂರೈಸಬಲ್ಲ ದಕ್ಷ ಅಧಿಕಾರಿಗಳು ಬೇಕು. ಇದರಲ್ಲಿ ಕ್ಷುಲ್ಲಕ ರಾಜಕಾರಣ ಕೈಹಾಕಬಾರದು. ಮಂತ್ರಿಮಂಡಲದಲ್ಲಿ ದೃಢ ರಾಜಕೀಯ ನಿರ್ಧಾರ, 'ಅಧಿಕಾರಿಗಳಲ್ಲಿ ದೃಢವಾದ ನಿಷ್ಠೆ, ಮಂತ್ರಿಗಳಿಂದ ಹಿಡಿದು ನೌಕರರವರೆಗೆ ಯುದ್ಧೋಪಾದಿಯಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸಿಯೇ ತೀರಬೇಕೆಂಬ ಛಲ ಇದ್ದರೆ ಮಾತ್ರ ನಮ್ಮ ಪಾಲಿನ ಕೃಷ್ಣೆಯ ನೀರು ನಮ್ಮ ರೈತರಿಗೆ ದಕ್ಕೀತು. ತಮ್ಮ ಐತಿಹಾಸಿಕ ನಿರ್ಧಾರದ ಯಶಸ್ಸಿಗಾಗಿ ಸರಕಾರ ಎಲ್ಲಾ ವಿರೋಧ ಪಕ್ಷಗಳನ್ನು ರೈತ ಸಂಘಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ವಿರೋಧ ಪಕ್ಷಗಳೂ, ರೈತ ಸಂಘಗಳೂ, ಸಕಾಲದಲ್ಲೇ ಈ ಯೋಜನೆ ಮುಗಿಯುವಂತೆ ಮಾಡಲು ಸಹಕಾರ ಹಸ್ತ ನೀಡುವುದು ಆಗತ್ಯ: ಆದರ ಜೊತೆಯಲ್ಲಿಯೇ ಪ್ರಗತಿಯನ್ನು ಕಣ್ಣಲ್ಲಿ ಕಣ್ಣಿಟ್ಟು ವೀಕ್ಷಿಸುತ್ತಿರುವುದು ಅಗತ್ಯ.

ಆಗಸ್ಟ್ 4, ಕಾಲೇಜು ಅಧ್ಯಾಪಕರ ಎಚ್ಚರಿಕೆ ಮುಷ್ಕರ
ಯು.ಜಿ.ಸಿ. ಶ್ರೇಣಿಗೆ ಆಗ್ರಹ

ವಿಶ್ವವಿದ್ಯಾಲಯ ಅನುದಾನ ಆಯೋಗ ಅಥವಾ ಯು.ಜಿ.ಸಿ. ಶಿಫಾರಸು ಮಾಡಿರುವ ವೇತನ ಶ್ರೇಣಿಗಳನ್ನು ಕಡಿತ ಮಾಡಿ ಕೇಂದ್ರದ ಮಾನವ ಸಂಪನ್ಮೂಲ ಇಲಾಖೆ ನೀಡಿರುವ ವೇತನಶ್ರೇಣಿಯನ್ನು ವಿರೋಧಿಸಿ ಹಾಗೂ ಕರ್ನಾಟಕದಲ್ಲಿ ಪದವಿಪೂರ್ವ ಶಿಕ್ಷಣವನ್ನು ಬೇರ್ಪಡಿಸುವ ಯೋಜನೆಯನ್ನು ವಿರೋಧಿಸಿ ರಾಜ್ಯಾದ್ಯಂತ ಕಾಲೇಜು ಮತ್ತು ವಿಶ್ವವಿದ್ಯಾಲಯ ಅಧ್ಯಾಪಕರು ಒಂದು ದಿನ ಸಾಮೂಹಿಕ ರಜೆ ಹಾಕಿ ಎಚ್ಚರಿಕೆ ನೀಡಿದರು. ತಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಆಗಸ್ಟ್ 11 ರಿಂದ ಅನಿರ್ದಿಷ್ಟ ಮುಷ್ಕರ ನಡೆಸಲು ಅವರು ನಿರ್ಧರಿಸಿದ್ದಾರೆ. ಅವರ ಸಂಘಟನೆಯಾದ ಅಖಿಲ ಭಾರತ ವಿಶ್ವವಿದ್ಯಾಲಯ ಮತ್ತು ಕಾಲೇಜು ಅಧ್ಯಾಪಕರ ಸಂಘಟನೆಗಳ ಒಕ್ಕೂಟ (AIFUCTO) ಈ ಕಾರ್ಯಾಚರಣೆಗಳಿಗೆ ಕರೆ ನೀಡಿದೆ.

ರಾಜ್ಯದ ರಾಜಧಾನಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಅಧ್ಯಾಪಕರ ಒಕ್ಕೂಟ (FUTAK) ಹಾಗೂ ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಕಾಲೇಜು ಅಧ್ಯಾಪಕರ ಸಂಘಗಳ ಒಕ್ಕೂಟ (FUCTAK)ದ ನೇತೃತ್ವದಲ್ಲಿ ಅಧ್ಯಾಪಕರ ಒಂದು ರ್‍ಯಾಲಿ ನಡೆಯಿತು. ಸುಮಾರು 5,000 ಅಧ್ಯಾಪಕರು ಇದರಲ್ಲಿ ಭಾಗವಹಿಸಿದ್ದರು. FUCTAKನ ಅಧ್ಯಕ್ಷ ಪ್ರೊ. ಟಿ. ವೆಂಕಟೇಶಮೂರ್ತಿ, FUCTAKನ ಅಧ್ಯಕ್ಷ ಡಾ|| ಸೆಬಾಶಿಯನ್ ಜೋಸೆಫ್, ಕಾರ್ಯದರ್ಶಿ ಡಾ|| ಟಿ.ಡಿ. ಕೆಂಪರಾಜ್ ಮತ್ತಿತರರು ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು.

ಸ್ವಾತಂತ್ರದ ಸುವರ್ಣೋತ್ಸವದ ಸಂದರ್ಭದಲ್ಲಿ ಒಂದು ಶ್ಲಾಘನೀಯ ಪ್ರಯತ್ನ

ಶ್ರೀಮಂತ ಭಾರತದಲ್ಲಿ ಬಡ ಭಾರತೀಯರು
ಲೇಖಕರು ಸಿ.ಆರ್.ಭಟ್
ಪ್ರಕಟಣೆ :
ಕರ್ನಾಟಕ ಸಮಾಜ ವಿಜ್ಞಾನ ಕೇಂದ್ರ, ಧಾರವಾಡ

ಭಾರತದ ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಸಂದರ್ಭದ ಪ್ರಕಟಣೆಯಾಗಿ ಕರ್ನಾಟಕ ಸಮಾಜ ವಿಜ್ಞಾನ ಕೇಂದ್ರ, ಧಾರವಾಡ ಅವರು ಸಿ.ಆರ್.ಭಟ್ ಅವರ ಶ್ರೀಮಂತ ಭಾರತದಲ್ಲಿ ಬಡ ಭಾರತೀಯರು ಎಂಬ ಕಿರುಹೊತ್ತಿಗೆಯನ್ನು ಪ್ರಕಟಿಸಿದ್ದಾರೆ. ಜೀವವಿಮಾ ಕಾರ್ಪೊರೇಶನ್ನಿನಲ್ಲಿ ಅಧಿಕಾರಿಯಾಗಿದ್ದು ನಿವೃತ್ತರಾದ ನಂತರ ತನ್ನ ಇಡೀ ಜೀವನವನ್ನು ರೈತ-ಕಾರ್ಮಿಕರ ಸಂಘಟನೆ, ಅವರ ಚಳುವಳಿಯ ಮೂಲಕ ಅವರ ಹಿತರಕ್ಷಣೆಗಾಗಿ ಮೀಸಲಿಟ್ಟು ಧಾರವಾಡ ಜಿಲ್ಲೆಯಲ್ಲಿ ಕೃಷಿ ಮತ್ತು ಅಸಂಘಟಿತ ಕಾರ್ಮಿಕರ ಮಧ್ಯೆ ಹಾಗೆಯೇ ಸಾಕ್ಷರತಾ ಮತ್ತು 'ಸಮುದಾಯ' ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಸಿ.ಆರ್.ಭಟ್ ಅವರು 5000 ವರ್ಷಗಳಿಗಿಂತಲೂ ಹೆಚ್ಚು ದೀರ್ಘಕಾಲದ ಶ್ರೀಮಂತ ನಾಗರೀಕತೆಯ ಭಾರತ ದೇಶದ ಸೂಕ್ಷ್ಮ ಪರಿಚಯವನ್ನು ಓದುಗರ ಮುಂದಿಡುತ್ತಾ, ಅಂದಿನಿಂದ ಬೆಳೆದು ಬಂದ ಆರಸೊತ್ತಿಗೆ, ವರ್ಣಾಶ್ರಮ, ಜಾತಿ ಪದ್ಧತಿಗಳನ್ನು ಸಮರ್ಪಕವಾಗಿ ವಿಶ್ಲೇಷಿಸುತ್ತಾ ಆ ಪದ್ಧತಿಗಳ ವಿರುದ್ಧ ನಡೆದ ಪ್ರತಿಭಟನಾ ಚಳುವಳಿಗಳನ್ನು ಸರಳ ರೀತಿಯಲ್ಲಿ ಉಲ್ಲೇಖಿಸಿದ್ದಾರೆ. ಮೊದಲ ಸ್ವಾತಂತ್ರ್ಯ ಸಂಗ್ರಾಮದ ಸೋಲುಗೆಲುವುಗಳನ್ನು ವಿವರಿಸುತ್ತಾ ಅದಕ್ಕೆ ಪೂರಕವಾಗಿ ಹುಟ್ಟಿಕೊಂಡ ದೇಶದ ಸ್ವಾತಂತ್ರ್ಯ ಚಳುವಳಿಯ ವಿವರಣೆಕೊಟ್ಟು, ಈಡೇರದ ಆಶೋತ್ತರಗಳು ಮತ್ತು ಆಶ್ವಾಸನೆಗಳನ್ನು ಓದುಗರಿಗೆ ನೆನಪಿಸಿಕೊಟ್ಟಿದ್ದಾರೆ. 1950 ರಲ್ಲಿ ಜಾರಿಗೆ ಬಂದ ಸಂವಿಧಾನದ ಮುಖ್ಯ ಅಂಶಗಳನ್ನು ಓದುಗರಿಗೆ ನೆನಪಿಸಿಕೊಡುತ್ತಾ ಕೃಷಿ, ಕೈಗಾರಿಕೆ, ಸಂಪನ್ಮೂಲ ಸಂಗ್ರಹ, ಅಭಿವೃದ್ಧಿಯಲ್ಲಿ ಹೊಸ ತಿರುವುಗಳನ್ನು ವಿವರಿಸಿ, ಹೊಸ ಆರ್ಥಿಕ ನೀತಿಯ ಪರಿಣಾಮ ದೇಶದ ಸ್ವಾತಂತ್ರ್ಯಕ್ಕೆ ಹೇಗೆ ಮಾರಕವಾಗಿದೆಂಬುದನ್ನು ವಿವರಿಸಿದ್ದಾರೆ. ಸಾಮ್ರಾಜ್ಯ ಶಾಹಿಗಳ ಮರು ಆಕ್ರಮಣದ ವಿರುದ್ಧ 'ಸಂಗ್ರಾಮವನ್ನು ಹೊಸ ಕಾಲ ಘಟ್ಟದ ಹೊಸ ಸವಾಲುಗಳನ್ನು ಎದುರಿಸುತ್ತಾ 'ಮುಂದುವರಿಸಬೇಕಾಗಿದೆ' ಎಂದು ಕರೆ ಕೊಟ್ಟಿದ್ದಾರೆ. ಮಾತ್ರವಲ್ಲ, ದೇಶದ ಸ್ವಾತಂತ್ರ್ಯ, ಸ್ವಾವಲಂಬನೆ, ಸಾರ್ವಭೌಮತೆ ಯನ್ನು ಉಳಿಸಿ ಬೆಳೆಸಿದ, ಶ್ರೀಮಂತ ಭಾರತದ ಕೋಟ್ಯಾಂತರ ಬಡಜನರ ಆರ್ಥಿಕ ಅಭಿವೃದ್ಧಿ ಹಾಗೂ ಸರ್ವತೋಮುಖವಾದ ಪ್ರಗತಿಗಾಗಿ ಮುಂದುವರಿದ ಸ್ವಾತಂತ್ರ ಸಂಗ್ರಾಮದಲ್ಲಿ ಬಡರೈತರು, ಕೃಷಿ ಕೂಲಿಕಾರರು, ಕೈಗಾರಿಕಾ ಕಾರ್ಮಿಕರು, ನೌಕರರು, ದಲಿತರು, ಅಲ್ಪಸಂಖ್ಯಾತರು, ಮಹಿಳೆಯರು, ವಿದ್ಯಾರ್ಥಿಗಳು, ಯುವ ಜನರು, ರಾಷ್ಟ್ರಪ್ರೇಮಿ ಉದ್ಯಮಿಗಳು ಮುಂತಾದ ಪ್ರಜಾಸತ್ತಾತ್ಮಕ ಶಕ್ತಿಗಳೇ ಸಂಘಟಿತರಾಗಿ ಮುಂಚೂಣಿಯಲ್ಲಿದ್ದು ಶ್ರಮಿಸಬೇಕಾಗಿದೆಂದು ತಮ್ಮ ಕಿರು ಹೊತ್ತಿಗೆಯನ್ನು ದುಡಿಯುವ ಜನತೆಯ ಮುಂದಿಟ್ಟಿದ್ದಾರೆ. ಪ್ರಾಚೀನ ಭಾರತದ ಬೆಳವಣಿಗೆ, ಮೊದಲ ಸ್ವಾತಂತ್ರ್ಯ ಸಂಗ್ರಾಮ, 1947 ರಲ್ಲಿ ಸ್ವಾತಂತ್ರ್ಯ ಪಡೆದ ನಂತರ ಬಂಡವಾಳಶಾಹಿ ವ್ಯವಸ್ಥೆಯಿಂದಾಗಿ, ಭಾರತದೇಶ ಇಂದು ಎದುರಿಸಬೇಕಾಗಿ ಬಂದಿರುವ ಗಂಭೀರ ಪರಿಸ್ಥಿತಿಯನ್ನು ಅದರ ವಿರುದ್ಧ ಹೋರಾಡಬೇಕಾದ ಅವಶ್ಯಕತೆಯನ್ನೂ ಸರಳವಾಗಿ, ಅಂಕಿ-ಸಂಖ್ಯೆಗಳೊಡನೆ ಕಿರುಹೊತ್ತಿಗೆಯ ರೂಪದಲ್ಲಿ ಜನರಿಗೆ ಒಂದು 'ಡೈರಿ'ಯಾಗಿ ಉಳಿಸಿಕೊಳ್ಳಲು ಸಹಾಯ ಮಾಡಿದ ಸಿ.ಆರ್.ಭಟ್ ಅವರ ಪ್ರಯತ್ನ ಶ್ಲಾಘನೀಯ. ಪ್ರತಿಯೊಬ್ಬರೂ ಈ ಪುಸ್ತಕ ಓದಿ, ಬೇರೆಯವರಿಗೂ ಓದಿಸಿ, ಜನರನ್ನು ಹೋರಾಟಕ್ಕೆ ಅಣಿಗೊಳಿಸುವತ್ತ ಪ್ರಯತ್ನ ಮುಂದುವರಿಸುವುದು ಅಗತ್ಯ.

- ಎನ್.ಕೆ.ಉಪಾಧ್ಯಾಯ

ಫೋಖ್ರಾನ್! ಫೋಖ್ರಾನ್!

ಫೋಖ್ರಾನ್! ಫೋಖ್ರಾನ್!
ಕೋಟಿ ತೂಕದ ಫೋಖ್ರಾನ್
ಮೇರಾ ದೇಶ್ ಮಹಾನ್!
ಕೂಗಿ ಕುಣಿಯುತ್ತ-ಕುಂಡಿತನ
ಕಾಲೆತ್ತಿ-ದೊಗಳೆ ಪ್ಯಾಂಟಿನ
ಹುಡುಗ ಓಡುತೋಡುತ ಬಂದ.

ಹಾಲಕ್ಕಿ ಹುಲಿಯಪ್ಪ ಕರೆದು
ಕೇಳಿದ ಮೆಲ್ಲ- ಏನೋ ಹೇಳಿದೆಯಲ್ಲ,
ಹಾಕಬೇಕೇ ತೋರ್ಣ?

ಫೋಖ್ರಾನ್! ಫೋಖ್ರಾನ್!
ಕೋಟಿ ತೂಕದ ಫೋಖ್ರಾನ್
ಮೇರಾ ದೇಶ್ ಮಹಾನ್!

ಕಾಲಿಕೊಡ ಹಿಡಕೊಂಡನಲ್ಲಿ
ನೀರಿಗೆ ಕಾದ ಕುಂಟಜ್ಜಿ ಕೇಳಿದಳು:
ಮತ್ತೆ ಬಂತಾ ಓಟು?

ಫೋಖ್ರಾನ್! ಫೋಖ್ರಾನ್!
ಕೋಟಿ ತೂಕದ ಫೋಖ್ರಾನ್!
ಮೇರಾ ದೇಶ್ ಮಹಾನ್!

ಏಳು ಹೆಮಕ್ಕಳನ್ನು ಹೆತ್ತ
ಮಂಕಾಳಕ್ಕ ಬೇಲಿಗಂಡಿಲಿ ತೂರಿ
ಕಾದ ತಲೆ ಗೊಣಗಿದಳು:
ಫೋಖ್ರಾನೊ ಫೋಕ್ರೇನೊ
ಗಂಡೊಂದು ಬೇಕಿತ್ತು!

ಫೋಖ್ರಾನ್! ಫೋಖ್ರಾನ್!
ಕೋಟಿ ತೂಕದ ಫೋಖ್ರಾನ್
ಮೇರಾ ದೇಶ್ ಮಹಾನ್!

ಗಟಾರದಲ್ಲಿ ಬಿದ್ದ ಅಮಲ್ದಾರ
ಅಂತೋಣಿ ದನಿಕೊಟ್ಟ ಜೋರಲ್ಲಿ:
ನಾ ದುಡಿತಿ ನಾ ಕುಡಿತಿ
ಯಾವ ಫೋಖ್ರಾನ್ ಬರಲಿ
ಕೈಕಾಲೇ ಮುರದಬಿಡ್ತಿ!

ಫೋಖ್ರಾನ್! ಫೋಖ್ರಾನ್!
ಕೋಟಿ ತೂಕದ ಫೋಖ್ರಾನ್!
ಮೇರಾ ದೇಶ್ ಮಹಾನ್!

ಒಣಜಬ್ಬೂ ಖರ್ಚಾಗಿ
ಗಾಳ ಕೈಯಲ್ಲಿ ಹಿಡಿದ
ಗಾಡಿ ಮುರ್ಕುಂಡಿ ಮಗ
ಸಿಟ್ಟಲ್ಲಿ ಹೀಗೆಂದ:
ಯಾವೂರ ಫೋಖ್ರಾನೋ
ಹೊಟ್ಟೆಗೇ ಇಲ್ಲನ್ನ
ತಗೀ ನಿನ್ನ ಫೋಖ್ರಾನ್ನ!

ಫೋಖ್ರಾನ್! ಫೋಖ್ರಾನ್!
ಸುಡುಬಾಂಬು ಫೋಖ್ರಾನ್!
ಮೇರಾ ದೇಶ್ ಮಹಾನ್!

ಸೆಗಣಿ ಹೆಕ್ಕುವ ಸುಬ್ಬ
ರಪ್ಪನೇ ಕೊಟ್ಟೆಂದ:
ಮಂದಿಮನೆ ಸುಡುಕೆಲಸ
ಯಾರೋ ಹೇಳಿದ ನಿಂಗೆ?
ನಿರ್ಲಜ್ಜ ನಡೆಮನೆಗೆ!

ವಿಷ್ಣು ನಾಯ್ಕ
ಅಂಬಾರಕೊಡ್ಲ, ಅಂಕೋಲಾ

ವಾರದ ವ್ಯಂಗ ಚಿತ್ರ
ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಉನ್ನಿ



Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27